# 1. ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ
# Oil Palm Cultivation in Potential States
## ಲೆಕ್ಕ ಶೀರ್ಷಿಕೆ: 2401-00-108-2-18
## ನಿಗದಿಪಡಿಸಿರುವ ಅನುದಾನ: ರೂ.528.00 ಲಕ್ಷಗಳು

| | | |
|---|---|---|
| 002 | ವೇತನ - ಅಧಿಕಾರಿಗಳು | 129.00 |
| 003 | ವೇತನ - ಸಿಬ್ಬಂದಿ | 92.00 |
| 011 | ತುಟ್ಟಿ ಭತ್ಯೆ | 24.00 |
| 014 | ಇತರೆ ಭತ್ಯೆ | 35.00 |
| 020 | ವೈದ್ಯಕೀಯ ಭತ್ಯೆ | 1.00 |
| 021 | ವೈದ್ಯಕೀಯ ವೆಚ್ಚದ ಮರುಪಾವತಿ | 15.00 |
| 041 | ಪ್ರಯಾಣ ವೆಚ್ಚಗಳು | 6.00 |
| 059 | ಇತರೆ ಖರ್ಚುಗಳು | 20.00 |
| 106 | ಸಹಾಯಧನ | 206.00 |
| | ಒಟ್ಟು | **528.00** |

ತಾಳೆಬೆಳೆಯು ಒಂದು ವಾಣಿಜ್ಯ ತೋಟಗಾರಿಕೆ ಬೆಳೆಯಾಗಿದ್ದು, ಇತರೆ ಸಾಂಪ್ರದಾಯಿಕ ಎಣ್ಣೆಕಾಳು ಬೆಳೆಗಳಿಗಿಂತ 5 ಪಟ್ಟು ಖಾದ್ಯ ತೈಲ ಇಳುವರಿ (4.5 ಟನ್ /ಹೆಕ್ಟೇರ್) ನೀಡುವ ಬೆಳೆಯಾಗಿ ರೈತರಲ್ಲಿ ಜನಪ್ರಿಯತೆಗಳಿಸುತ್ತಿದೆ.

ನಮ್ಮ ದೇಶದಲ್ಲಿ ಹಾಲಿ ಸುಮಾರು 145.71 ಲಕ್ಷ ಟನ್ ಖಾದ್ಯ ತೈಲವನ್ನು ಹೊರದೇಶದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಇದಕ್ಕೆಂದೇ ಪ್ರತಿ ವರ್ಷ ಸುಮಾರು 65000 ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯ ವೆಚ್ಚವಾಗುತ್ತಿದೆ. ಆದ್ದರಿಂದ ರಾಷ್ಟ್ರದ ವಿದೇಶಿ ವಿನಿಮಯವನ್ನು ಕಡಿತಗೊಳಿಸಲು ಹಾಗೂ ಖಾದ್ಯ ತೈಲದ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಪಡೆಯಲು, ಕೇಂದ್ರ ಸರ್ಕಾರ ತಾಳೆಬೆಳೆ ಅಭಿವೃದ್ಧಿ ಯೋಜನೆಯನ್ನು ಪ್ರೋತ್ಸಾಹಿಸುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಸುಮಾರು 2.60 ಲಕ್ಷ ಹೆಕ್ಟೇರ್ ಪ್ರದೇಶ ತಾಳೆ ಬೇಸಾಯಕ್ಕೆ ಯೋಗ್ಯವೆಂದು ಸಮೀಕ್ಷೆಯಿಂದ ತಿಳಿದುಬಂದಿರುತ್ತದೆ. ಕೇಂದ್ರ ಸರ್ಕಾರದ National Mission for Oil Seeds and Oil Palm (NMOOP) ಕಾರ್ಯಕ್ರಮದಡಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ 1990-91 ನೇ ಸಾಲಿನಿಂದ ತಾಳೆಬೆಳೆ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ತಾಳೆಬೆಳೆ ಅಭಿವೃದ್ಧಿಗೆ ನೀರು ಪ್ರಮುಖ ಅಂಶವಾಗಿದ್ದು, ನೀರಾವರಿ ಅಚ್ಚುಕಟ್ಟು ಪ್ರದೇಶದಡಿ (ಕಾವೇರಿ, ಭದ್ರಾ ತುಂಗಭದ್ರಾ, ಮಲಪ್ರಭಾ ಮತ್ತು ಘಟಪ್ರಭಾ ಹಾಗೂ ಕೃಷ್ಣ ಮೇಲ್ದಂಡೆ) ಒಳಬರುವ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ, ಹಾವೇರಿ, ಕೊಪ್ಪಳ, ಗದಗ, ರಾಯಚೂರು, ಬಳ್ಳಾರಿ, ಬೆಳಗಾಂ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಗುಲ್ಬರ್ಗಾ, ಬಾಗಲಕೋಟೆ, ಬಿಜಾಪುರ ಮತ್ತು ಬೀದರ್ ಜಿಲ್ಲೆಗಳಲ್ಲಿ ಖಾಯಂ ನೀರಾವರಿ ವ್ಯವಸ್ಥೆ ಇರುವ ಜಮೀನಿನಲ್ಲಿ ಖಾಸಗಿ ಪಾಲುದಾರ ಸಂಸ್ಥೆಗಳ ಮೂಲಕ ತಾಳೆ ಪ್ರದೇಶಾಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಹಾಲಿ ಸುಮಾರು 9000 ರೈತರು 11000 ಹೆ. ಪ್ರದೇಶದಲ್ಲಿ ತಾಳೆ ಬೇಸಾಯದಲ್ಲಿ ತೊಡಗಿಸಿಕೊಂಡಿದ್ದು, ಅಂದಾಜು ವಾರ್ಷಿಕ ತಾಳೆ ಹಣ್ಣಿನ ಉತ್ಪಾದನೆ 12000 ಮೆ. ಟನ್ ಗಳಷ್ಟಿದ್ದು, ಇದರಿಂದ ಅಂದಾಜು 2658 ಟನ್ ಕಚ್ಚಾ ತಾಳೆ ಎಣ್ಣೆಯನ್ನು ಉತ್ಪಾದಿಸಲಾಗುತ್ತಿದ್ದು, ಇದರ ಮೌಲ್ಯ ಅಂದಾಜು ರೂ.11.56 ಕೋಟಿಯಷ್ಟಾಗಿರುತ್ತದೆ.

ತಾಳೆಬೆಳೆ ಸಮಗ್ರ ಅಭಿವೃದ್ಧಿಗಾಗಿ ತಾಳೆ ಸಸಿಗಳ ಅಭಿವೃದ್ಧಿ ಪ್ರದೇಶ ವಿಸ್ತರಣೆ, ತಾಳೆ ರೈತರಿಗೆ ರಸಗೊಬ್ಬರದ ವಿತರಣೆ, ತಾಳೆ ಹಣ್ಣುಗಳ ಸಂಗ್ರಹಣೆ ಮತ್ತು ತಾಳೆ ಸಂಸ್ಕರಣಾ ಘಟಕವನ್ನು ತೆರೆಯುವ ಜವಾಬ್ದಾರಿಯನ್ನು ಖಾಸಗಿ ಪಾಲುದಾರ ಸಂಸ್ಥೆಯವರಿಗೆ ವಹಿಸಿದ್ದು, ಈ ಯೋಜನೆಯನ್ನು Public Private Participation (PPP) ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**ಸುವ್ಯವಸ್ಥಿತ ಮಾರುಕಟ್ಟೆ :**

ತಾಳೆ ಯೋಜನೆಯಡಿ ಅತ್ಯಂತ ವ್ಯವಸ್ಥಿತವಾದ ಮಾರುಕಟ್ಟೆಯ ವ್ಯವಸ್ಥೆಯಿದೆ. ತಾಳೆ ಹಣ್ಣಿನ ಬೆಲೆಯನ್ನು ಸರ್ಕಾರ, ಖಾಸಗಿ ಸಂಸ್ಥೆ ಹಾಗೂ ತಾಳೆ ರೈತರುಗಳನ್ನೊಳಗೊಂಡಂತೆ ರಚಿಸಲಾಗಿರುವ ತಾಳೆಬೆಳೆ ಬೆಲೆ ನಿಗದಿ ಸಮಿತಿಯಲ್ಲಿ ನಿಗದಿಪಡಿಸಲಾಗುವುದು, ಅಂತೆಯೇ ಸರ್ಕಾರವು ನಿಗದಿಪಡಿಸಿದ ದರದಲ್ಲಿ ರೈತರು ಬೆಳೆದ ತಾಳೆಹಣ್ಣನ್ನು ಖಾಸಗಿ ಸಂಸ್ಥೆಗಳು ಖರೀದಿಸುವ ವ್ಯವಸ್ಥೆ ಇದೆ. ರೈತರು ಬೆಳೆದ ತಾಳೆಹಣ್ಣನ್ನು, ಸರ್ಕಾರವು

ನಿಗದಿಪಡಿಸಿದ ದರದಲ್ಲಿ ಖಾಸಗಿ ಸಂಸ್ಥೆಗಳು ಖರೀದಿಸಿ, ನೇರವಾಗಿ ರೈತರ ಬ್ಯಾಂಕ್ ಖಾತೆಗೆ ECS ಮೂಲಕ ಪ್ರತಿ ಮಾಹೆ ಹಣ ಪಾವತಿಯಾಗುತ್ತಿದೆ.

<u>ತಾಳೆಬೆಳೆ ಸಾಗುವಳಿ ಉತ್ಪಾದನೆ ಮತ್ತು ಸಂಸ್ಕರಣೆ ನಿಯಂತ್ರಣ ಅಧಿನಿಯಮ</u>

ತಾಳೆಬೆಳೆ ಅಭಿವೃದ್ಧಿ ಯೋಜನೆಯಲ್ಲಿ ತೊಡಗಿರುವ ರೈತರು ಹಾಗೂ ಖಾಸಗಿ ಸಂಸ್ಥೆಗಳ ಮತ್ತು ಒಟ್ಟಾರೆ ತಾಳೆ ಉದ್ದಿಮೆಯ ಹಿತರಕ್ಷಣೆಗಾಗಿ 2013-14 ನೇ ಸಾಲಿನಲ್ಲಿ ತಾಳೆಬೆಳೆ ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣೆ ಅಧಿನಿಯಮ 2013 ಅನ್ನು ಕರ್ನಾಟಕ ಸರ್ಕಾರವು ಜಾರಿಗೊಳಿಸಿರುತ್ತದೆ.

<u>ಯೋಜನೆಯ ಪ್ರಮುಖ ಉದ್ದೇಶಗಳು</u> **:**

1. ರಾಜ್ಯದಲ್ಲಿ ತಾಳೆ ಬೆಳೆ ಪ್ರದೇಶ ವಿಸ್ತರಣೆಯನ್ನು ಹೆಚ್ಚಿಸಿ, ರಾಜ್ಯದ ಮತ್ತು ರಾಷ್ಟ್ರದ ಖಾದ್ಯ ತೈಲದ ಉತ್ಪಾದನೆಯನ್ನು ಹೆಚ್ಚಿಸುವುದು.
2. ದೇಶದ ಖಾದ್ಯ ತೈಲದ ಬೇಡಿಕೆ ಮತ್ತು ಉತ್ಪಾದನೆ ನಡುವೆ ಇರುವ ಅಂತರವನ್ನು ಕಡಿಮೆ ಮಾಡುವುದು.
3. ತಾಳೆ ಬೆಳೆ ಮೂಲಕ ರೈತರ ಆರ್ಥಿಕ ಮಟ್ಟವನ್ನು ಸುಧಾರಿಸುವುದು.

ಕಳೆದ ಸಾಲಿನಲ್ಲಿ ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ಅಭಿವೃದ್ಧಿ ಯೋಜನೆಯಡಿ ಅನುಷ್ಠಾನಗೊಳಿಸಲಾದ ಘಟಕಗಳನ್ನು ಮುಂದುವರಿಸಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಣಕಾಸಿನ ಪಾಲುಗಾರಿಕೆ ಶೇ.60:40 ರಂತಿದ್ದು, ಕೆಲವೊಂದು ಘಟಕಗಳಡಿ, ಕೇಂದ್ರ ಸರ್ಕಾರವು ಕಡಿಮೆ ಪ್ರಮಾಣದ ಸಹಾಯಧನವನ್ನು ಒದಗಿಸುತ್ತಿದ್ದು, ತಾಳೆ ರೈತರ ಮತ್ತು ಯೋಜನೆಯ ಹಿತಾಸಕ್ತಿಯಿಂದ ಹೆಚ್ಚಿನ ಪ್ರಮಾಣದ ಸಹಾಯಧನವನ್ನು ರಾಜ್ಯ ಪಾಲಿನಲ್ಲಿ ಒದಗಿಸಲಾಗುತ್ತಿದೆ. 2019-20 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುವ ವಿವಿಧ ಘಟಕಗಳ ವಿವರ ಈ ಕೆಳಕಂಡಂತೆ ಇರುತ್ತದೆ.

**1.** <u>ತಾಳೆ ಸಸಿ ನೆಡಲು ಸಹಾಯಧನ</u>

ಪ್ರತಿ ತಾಳೆ ಸಸಿಗೆ 50% ರಂತೆ (ಪ್ರತಿ ಗಿಡಕ್ಕೆ ರೂ. 84 ರಂತೆ) ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ. 12000/-ಗಳು ಮೀರದಂತೆ ತಾಳೆ ಸಸಿಗಳ ಸಹಾಯಧನವನ್ನು ವಿಸ್ತರಿಸಲಾಗುವುದು. ಯೋಜನೆಯಡಿ, ತಾಳೆ ಸಸ್ಯೋತ್ಪಾದನೆಯ ಜವಾಬ್ದಾರಿಯನ್ನು ಎಣ್ಣೆ ತಾಳೆ ಖಾಸಗಿ ಸಂಸ್ಥೆಗೆ ವಹಿಸಲಾಗಿದೆ. 2019-20 ನೇ ಸಾಲಿನಲ್ಲಿ ಸಂಸ್ಥೆಗಳು ವಿತರಿಸುವ ದೇಶೀ ಮೂಲದ ತಾಳೆ ಸಸಿಗಳಿಗೆ ರೂ. 96/- ರಂತೆ ಬೆಲೆಯನ್ನು ನಿಗದಿಮಾಡಲಾಗಿದೆ.

**2.** <u>ತಾಳೆ ತೋಟಗಳ ನಿರ್ವಹಣೆ/ ಬೇಸಾಯ ಸಹಾಯಧನದ ವಿತರಣೆ</u>**:**

ತಾಳೆ ತೋಟವನ್ನು ನಾಟಿ ಮಾಡಿದ ಮೊದಲ 4 ವರ್ಷ ನಿರ್ವಹಿಸಲು ಪ್ರತಿ ಹೆಕ್ಟೇರಿಗೆ ಶೇ.50 ರಂತೆ, ಗರಿಷ್ಠ ರೂ.5000/-ಗಳ ವರೆಗೆ ಬೇಸಾಯ ಸಹಾಯಧನವನ್ನು ರಸಗೊಬ್ಬರದ ರೂಪದಲ್ಲಿ ಎಣ್ಣೆ ತಾಳೆ ಖಾಸಗಿ ಸಂಸ್ಥೆಗಳ ಮೂಲಕ ವಿತರಿಸಲಾಗುವುದು. 2018-19, 2017-18, 2016-17 ನೇ ಸಾಲಿನಲ್ಲಿ ಅಭಿವೃದ್ಧಿ ಪಡಿಸಲಾದ ತಾಳೆ ಪ್ರದೇಶಗಳು ಮತ್ತು 2019-20 ನೇ ಸಾಲಿನಲ್ಲಿ ಹೊಸದಾಗಿ ಅಭಿವೃದ್ಧಿಪಡಿಸಿದ ಪ್ರದೇಶಗಳ ನಿರ್ವಹಣೆಗಾಗಿ ರಸಗೊಬ್ಬರವನ್ನು ಖಾಸಗಿ ಪಾಲುದಾರ ಸಂಸ್ಥೆಗಳ ಮೂಲಕ ಅರ್ಹ ತಾಳೆ ರೈತರಿಗೆ ವಿತರಿಸಲಾಗುತ್ತಿದೆ.

**3.** <u>ಎತ್ತರವಾದ ತಾಳೆ ಮರಗಳಿಂದ ತಾಳೆ ಹಣ್ಣುಗಳನ್ನು ಕಟಾವು ಮಾಡಲು ಉತ್ತೇಜನ</u>**:**

20 ಅಡಿಗಿಂತ ಮೇಲ್ಪಟ್ಟ ತಾಳೆ ಮರಗಳಿಂದ ತಾಳೆ ಹಣ್ಣುಗಳನ್ನು ಕಟಾವು ಮಾಡಲು ತಾಳೆ ರೈತರಿಗೆ ಉತ್ತೇಜನ ನೀಡಲು ಪ್ರತಿ ಟನ್ನಿಗೆ ರೂ.600/-ಗಳ ಪ್ರೋತ್ಸಾಹಧನವನ್ನು ನೀಡಲಾಗುವುದು. ಸದರಿ ಘಟಕವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ, ವಿನೂತನ ಕಾರ್ಯಕ್ರಮಗಳಡಿ ಕೇಂದ್ರದ ಪಾಲಿನ ಒಟ್ಟು ಆಯವ್ಯಯದಲ್ಲಿ ಶೇ.10 ರಷ್ಟು ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**4.** <u>ತಾಳೆ ಹಣ್ಣಿನ ಉತ್ಪಾದಕತೆಯನ್ನು ಹೆಚ್ಚಿಸಲು ಇಳುವರಿ ನೀಡುತ್ತಿರುವ ತಾಳೆ ತೋಟಗಳಿಗೆ ಗೊಬ್ಬರ ವಿತರಣೆ</u> **:**

ರೈತರಿಗೆ ತಾಳೆ ತೋಟದಿಂದ ಲಾಭದಾಯಕ ಇಳುವರಿ ಬರುವವರೆಗೆ ಸಹಾಯ ಒದಗಿಸಲು, ಸರ್ಕಾರಿ ಆದೇಶ ಸಂ.ತೋಇ/58/ತೋಯೋಕಾ/2015, ದಿ:20.02.2016 ರನ್ವಯ ಉತ್ತಮವಾಗಿ ನಿರ್ವಹಿಸಲಾಗುತ್ತಿರುವ ತಾಳೆ ತೋಟಗಳಿಗೆ ಉತೇಜನ ನೀಡಲು ತೀರ್ಮಾನಿಸಲಾಗಿದೆ. ಅದೇ ರೀತಿ ರಾಜ್ಯದಲ್ಲಿ ತಾಳೆ ಹಣ್ಣಿನ ಉತ್ಪಾದಕತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಉತ್ತಮವಾಗಿ ನಿರ್ವಹಿಸಲಾಗುತ್ತಿರುವ ತಾಳೆ ತೋಟಗಳಿಗೆ ಉತ್ತೇಜನ ನೀಡಲು ಶೇ.50 ರ ಸಹಾಯಧನದಂತೆ ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ.8000/- ಮೌಲ್ಯದ ರಸಗೊಬ್ಬರ ಮತ್ತು ಸೂಕ್ಷ್ಮ ಪೋಷಕಾಂಶವನ್ನು ವಿತರಿಸಲಾಗುತ್ತಿದೆ. ಸದರಿ ಘಟಕವನ್ನು ಸಂಪೂರ್ಣವಾಗಿ ರಾಜ್ಯದ ಪಾಲಿನ ಅನುದಾನದಡಿ ಅನುಷ್ಠಾನಗೊಳಿಸಲಾಗುತ್ತಿದೆ.

**5. ಆಡಳಿತಾತ್ಮಕ ವೆಚ್ಚ :**

ತಾಳೆ ಬೆಳೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಅವಶ್ಯಕವಾಗುವ ವಾಹನ ಬಾಡಿಗೆ, ಕಚೇರಿ ಮೂಲ ಸೌಕರ್ಯಗಳು, ಯೋಜನಾ ಸಹಾಯಕರು ಮತ್ತು ಕಂಪ್ಯೂಟರ್ ಅಪರೇಟರ್ ಗಳ ಮಾಸಿಕ ಭತ್ಯೆಯನ್ನು ಭರಿಸಲು ಯೋಜನಾ ವೆಚ್ಚದ ಶೇ.5 ಅನ್ನು ನಿಗದಿಪಡಿಸಲಾಗಿರುತ್ತದೆ.

**6. ಸಿಬ್ಬಂದಿ ವೇತನ ಮತ್ತು ಪ್ರವಾಸ ಭತ್ಯೆ:**

ತಾಳೆ ಬೆಳೆ ಅಭಿವೃದ್ಧಿ ಯೋಜನೆಯಡಿ, ಒಟ್ಟು 141 ವಿವಿಧ ವೃಂದದ ಹುದ್ದೆಗಳು ಮಂಜೂರಾಗಿದ್ದು, 141 ಹುದ್ದೆಗಳ ಪೈಕಿ ಸಧ್ಯದಲ್ಲಿ 46 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು ಉಳಿಕೆ 95 ಹುದ್ದೆಗಳು ಖಾಲಿ ಇರುತ್ತದೆ. ಅದರಂತೆ, ಭರ್ತಿಯಾಗಿರುವ 46 ಹುದ್ದೆಗಳಿಗೆ ವೇತನ ಮತ್ತು ಪ್ರವಾಸ ಭತ್ಯೆಯನ್ನು ಒದಗಿಸಲು ಸರ್ಕಾರವು ಸಂಪುಟ-3 ರಲ್ಲಿ ರೂ.302.00 ಲಕ್ಷಗಳನ್ನು ನಿಗದಿಪಡಿಸಿದೆ.

**7. ಪ್ರಚಾರ ಪ್ರಕಟಣೆ ಮತ್ತು ರೈತರಿಗೆ ತರಬೇತಿ:**

ತಾಳೆ ಬೆಳೆ ಯೋಜನೆ ಮತ್ತು ತಾಳೆ ಬೆಳೆಯ ಪ್ರಾಮುಖ್ಯತೆ ಬಗ್ಗೆ ರೈತ ಸಮೂಹದಲ್ಲಿ ಹೆಚ್ಚಿನ ಪ್ರಚಾರ ನೀಡಲು, ವಿವಿಧ ಪ್ರಚಾರ ಸಾಮಗ್ರಿಗಳನ್ನು ಮುದ್ರಿಸುವ ಸಲುವಾಗಿ ಅನುದಾನವನ್ನು ನಿಗದಿಪಡಿಸಿಕೊಳ್ಳಲಾಗಿದೆ. ಅದೇ ರೀತಿ ತಾಳೆ ಪ್ರದೇಶ ವಿಸ್ತರಣೆ ಕೈಗೊಂಡ ರೈತರಿಗೆ ತಾಳೆ ಬೇಸಾಯದ ಬಗ್ಗೆ ತರಬೇತಿ ನೀಡಲು ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಾಗೂ ಸ್ಥಳೀಯ ಪ್ರಗತಿ ಪರ ರೈತರ ತಾಳೆ ತಾಕಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಅನುದಾನ ನಿಗದಿಪಡಿಸಿಕೊಳ್ಳಲಾಗಿದೆ. ಸದರಿ ಕಾರ್ಯಕ್ರಮವನ್ನು ಕಳೆದ ಸಾಲಿನಲ್ಲಿ ಜಿಲ್ಲಾವಲಯದಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಈ ಸಾಲಿನಿಂದ ರಾಜ್ಯವಲಯ ಕಾರ್ಯಕ್ರಮದಡಿ ಅನುಷ್ಠಾನಗೊಳಿಸಲಾಗುತ್ತಿದೆ.

**8. ತಾಳೆ ರೈತರಿಗೆ ಖಚಿತ ಬೆಲೆಯನ್ನು ವಿತರಿಸುವ ಬಗ್ಗೆ:**

ರಾಜ್ಯ ಸರ್ಕಾರವು ಸರ್ಕಾರಿ ಆದೇಶ ಸಂ.ತೋಇ/56/ತೋಯೋಕಾ/2015, ದಿನಾಂಕ:27.07.2016 ರನ್ವಯ, 2015-16 ನೇ ಸಾಲಿನಿಂದ ಮುಂದಿನ ಮೂರು ವರ್ಷಗಳಿಗೆ ಅಂದರೆ 2017-18 ನೇ ಸಾಲಿನವರೆಗೆ ತಾಳೆ ಹಣ್ಣಿಗೆ ಖಚಿತ ಬೆಲೆಯನ್ನು ಘೋಷಿಸಿ, 2017-18 ನೇ ಸಾಲಿಗೆ ಪ್ರತಿ ಟನ್ನಿನ ತಾಳೆ ಹಣ್ಣಿಗೆ ರೂ.10,500/- ಗಳನ್ನು ನಿಗದಿಮಾಡಿದೆ. ಅದರಂತೆ, 2018-19 ನೇ ಸಾಲಿನಲ್ಲಿ ತಾಳೆ ರೈತರಿಂದ, ಎಣ್ಣೆ ತಾಳೆ ಖಾಸಗಿ ಸಂಸ್ಥೆಗಳು ಪ್ರತಿ ಮಾಹೆ ಪಾವತಿಸಿರುವ ದರ ಮತ್ತು ಕನಿಷ್ಠ ಬೆಂಬಲ ಬೆಲೆಯ ವ್ಯತ್ಯಾಸದ ಮೊತ್ತವನ್ನು ರೈತರಿಗೆ ಪಾವತಿಸಲು ರಾಜ್ಯದ ಪಾಲಿನಿಂದ ಭರಿಸುವುದು. ಇದಕ್ಕೆ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

**2019-20 ನೇ ಸಾಲಿನಲ್ಲಿ ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ ಯೋಜನೆಯ ರಾಜ್ಯ ವಲಯದಡಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಕಾರ್ಯಕ್ರಮಗಳು ಮತ್ತು ನಿಗದಿಪಡಿಸಲಾಗಿರುವ ಅನುದಾನ.**

| ಕ್ರ. ಸಂ | ಕಾಂಪೊನೆಂಟ್ | GOI: GOK | ಸಹಾಯಧನದ ಪ್ರಮಾಣ | ಸಹಾಯಧನ (ರೂ.) | ಭೌತಿಕ ಗುರಿ | ಆರ್ಥಿಕ ಗುರಿ (ರೂ. ಲಕ್ಷಗಳಲ್ಲಿ) | | |
|---|---|---|---|---|---|---|---|---|
| | | | | | | GOI | GOK | ಒಟ್ಟು |
| 1 | ತಾಳೆ ಸಸಿಗಳ ಸಹಾಯಧನ | 60:40 | 50% | 12,000/ ಹೆ. | 500 ಹೆ. | 36.00 | 24.00 | 60.00 |
| 2 | ತಾಳೆ ತೋಟಗಳ ನಿರ್ವಹಣೆ | | | | | | | |
| | 1 ನೇ ವರ್ಷದ ತಾಳೆ ತೋಟಗಳ ನಿರ್ವಹಣೆ | 60:40 | 50% | 5000/ ಹೆ. | 500 ಹೆ | 15.00 | 10.00 | 25.00 |
| | 2 ನೇ ವರ್ಷದ ತಾಳೆ ತೋಟಗಳ ನಿರ್ವಹಣೆ | 60:40 | 50% | 5000 / ಹೆ | 200 ಹೆ. | 6.00 | 4.00 | 10.00 |
| | 3 ನೇ ವರ್ಷದ ತಾಳೆ ತೋಟಗಳ ನಿರ್ವಹಣೆ | 60:40 | 50% | 5000 / ಹೆ | 200 ಹೆ. | 6.00 | 4.00 | 10.00 |
| | 4 ನೇ ವರ್ಷದ ತಾಳೆ ತೋಟಗಳ ನಿರ್ವಹಣೆ | 60:40 | 50% | 5000 / ಹೆ | 200 ಹೆ. | 6.00 | 4.00 | 10.00 |

| | | | | | | | | |
|---|---|---|---|---|---|---|---|---|
| **3** | ಎತ್ತರದವಾದ ತಾಳೆ ತೋಟಗಳಿಂದ ತಾಳೆ ಹಣ್ಣನ್ನು ಕಟಾವು ಮಾಡಲು ಉತ್ತೇಜನ **(Innovative comp.)** | 60:40 | 50% | 600/ಟನ್ ಗೆ | 1667 ಟನ್ | 6.00 | 4.00 | 10.00 |
| **4** | ತಾಳೆ ಹಣ್ಣಿನ ಉತ್ಪಾದಕತೆಯನ್ನು ಹೆಚ್ಚಿಸಲು, ಇಳುವರಿ ನೀಡುತ್ತಿರುವ ತಾಳೆ ತೋಟಗಳಿಗೆ ರಸಗೊಬ್ಬರ ವಿತರಣೆ | 0:100 | 50% | 8000/ ಹೆ | 125 ಹೆ. | 0 | 10.00 | 10.00 |
| **5** | ಆಡಳಿತಾತ್ಮಕ ವೆಚ್ಚ | 60:40 | - | - | - | 6.00 | 4.00 | 10.00 |
| **6** | ಸಿಬ್ಬಂದಿ ವೇತನ ಮತ್ತು ಪ್ರವಾಸ ಭತ್ಯೆ | 0:100 | - | - | - | 0 | 302.00 | 302.00 |
| **7** | ಪ್ರಚಾರ ಮತ್ತು ಪ್ರಕಟಣೆ/ ತರಬೇತಿ | 60:40 | - | 24000 | 80 | 6.00 | 4.00 | 10.00 |
| | | | | | ಉಪ ಮೊತ್ತ | 87.00 | 370.00 | 457.00 |
| | ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಣಕಾಸು ಪಾಲುಗಾರಿಕೆ ಕ್ರಮವಾಗಿ ಶೇ**22:78** ರ ಅನುಪಾತದಲ್ಲಿರುತ್ತದೆ. | | | | | | | |
| **8** | ಖಚಿತ ಬೆಂಬಲ ಬೆಲೆ ವಿತರಣೆ | 0:100 | - | 3500 | | 0 | 71.00 | 71.00 |
| | | | | | ಒಟ್ಟು | **87.00** | **441.00** | **528.00** |

ತಾಳೆ ಅಭಿವೃದ್ಧಿ ಯೋಜನೆಗಾಗಿ ಜಿಲ್ಲಾವಲಯದಲ್ಲಿ ಸಹ ಅನುದಾನ ಒದಗಿಸಲಾಗಿದೆ.

**(ರೂ. ಲಕ್ಷಗಳಲ್ಲಿ)**

| | |
|---|---|
| ಸಾಮರ್ಥವುಳ್ಳ ರಾಜ್ಯಗಳಲ್ಲಿ ಎಣ್ಣೆತಾಳೆಯ ವ್ಯವಸಾಯ 2435-00-101-0-02(2401-00-196-2-01) | 55.20 |

ಹೀಗಾಗಿ, ಒಟ್ಟಾರೆ ರೂ.**583.20** ಲಕ್ಷಗಳಿಗೆ ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸಿ ಕೇಂದ್ರ ಸರ್ಕಾರದ ಅನುಮೋದನೆ ಪಡೆಯಲು ತೋಟಗಾರಿಕೆ ನಿರ್ದೇಶಕರು ಕ್ರಮ ವಹಿಸತಕ್ಕದ್ದು. ಸಿಬ್ಬಂದಿ ಹುದ್ದೆಗಳ ನಾಮಕರಣ ಮತ್ತು ಹುದ್ದೆ ಇರುವ ಸ್ಥಳಗಳ ವಿವರಗಳನ್ನು ಒದಗಿಸತಕ್ಕದ್ದು.

**2019-20** ನೇ ಸಾಲಿನ ಆಯವ್ಯಯದಲ್ಲಿ ಸಾಮರ್ಥವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ ಯೋಜನೆಯ ಅನುಷ್ಠಾನಕ್ಕಾಗಿ ರೂ.**1408.78** ಲಕ್ಷಗಳ ಅವಶ್ಯಕತೆಯಿರುತ್ತದೆ. ಈಗ ನಿಗದಿಯಾದ ರೂ.**528.00** ಲಕ್ಷಗಳ ಅನುದಾನಕ್ಕನುಗುಣವಾಗಿ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ.

## 2. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ
## PMKSY-National Mission on Sustainable Agriculture
## ಲೆಕ್ಕ ಶೀರ್ಷಿಕೆ: 2401-00-108-2-30
## ನಿಗದಿಪಡಿಸಿರುವ ಅನುದಾನ ರೂ. 26400.00 ಲಕ್ಷಗಳು

| | | |
|---|---|---|
| 059 | ಇತರೆ ಖರ್ಚುಗಳು | 1320.00 |
| 106 | ಸಹಾಯಧನ | 17763.00 |
| 133 | ವಿಶೇಷ ಅಭಿವೃದ್ಧಿ ಯೋಜನೆ | 2037.00 |
| 422 | ಪರಿಶಿಷ್ಟ ಜಾತಿ ಉಪ ಯೋಜನೆ | 3696.00 |
| 423 | ಗಿರಿಜನ ಉಪ ಯೋಜನೆ | 1584.00 |
| | ಒಟ್ಟು | **26400.00** |

**ಪೀಠಿಕೆ:**

2019-20 ನೇ ಸಾಲಿನ ಆಯವ್ಯಯ ಹಾಗೂ ಯೋಜನಾ ಕಾರ್ಯಕ್ರಮಗಳ ಬಗ್ಗೆ ಅಂದಾಜುಗಳು ಸಂಪುಟ-3 ರಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ **PMKSY-NMSA)** ಯಡಿ ರೂ**.26400.00** ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ**.**

ಹನಿ/ತುಂತುರು ನೀರಾವರಿ**:**

1. 2019-20 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY)ಯಡಿ ಸೂಕ್ಷ್ಮ ನೀರಾವರಿ ಯೋಜನೆಯನ್ನು ಒಂದು ಭಾಗವಾಗಿ ಅನುಷ್ಠಾನಗೊಳಿಸಲಾಗುತ್ತದೆ.
2. 2019-20 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಹಾಗೂ ತುಂತುರು ನೀರಾವರಿ ಅಳವಡಿಸುವ ಎಲ್ಲಾ ಪ್ರದೇಶದ ಎಲ್ಲಾ ವರ್ಗದ ಪ್ರತಿ ಫಲಾನುಭವಿಯ ಕುಟುಂಬಕ್ಕೆ ಮೊದಲ 2.00 ಹೆಕ್ಟೇರ್ ಪ್ರದೇಶದವರೆಗೆ ಶೇ.90 ರಷ್ಟು ಹಾಗೂ ನಂತರದ 3.00 ಹೆಕ್ಟೇರ್ ವರೆಗೆ ಕೇಂದ್ರ ಸರ್ಕಾರ ಮಾರ್ಗಸೂಚಿಯಂತೆ ಶೇ.35 ರಿಂದ 45 ರಷ್ಟು ಸಹಾಯಧನವನ್ನು ಗರಿಷ್ಠ ಮಿತಿಗೆ ಒಳಪಟ್ಟು ನೀಡಲಾಗುವುದು.
3. ಈ ಯೋಜನೆಯಲ್ಲಿ ಹನಿ ನೀರಾವರಿ ಮತ್ತು ವಿವಿಧ ರೀತಿಯ ತುಂತುರು ನೀರಾವರಿ ಘಟಕಗಳಿಗೆ ಸಹಾಯಧನ ಲಭ್ಯವಿದ್ದು (ಕಾಫಿ, ಟೀ, ರಬ್ಬರ್ ಹೊರತುಪಡಿಸಿ) ಎಲ್ಲಾ ತೋಟಗಾರಿಕೆ ಬೆಳೆಗಳಿಗೆ ಸಹಾಯಧನ ಲಭ್ಯವಿರುತ್ತದೆ.
4. ತರಕಾರಿ ಹಾಗೂ ವಾಣಿಜ್ಯ ಹೂ ಬೆಳೆಗಳಿಗೆ ಗರಿಷ್ಠ 2.00 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುವುದು.
5. ಅಡಿಕೆ/ ತೆಂಗು ತೋಟಗಳಲ್ಲಿ, ಮಿಶ್ರ ಬೆಳೆಗಳನ್ನು ಬೆಳೆದು ಮಿಶ್ರ ಬೆಳೆಗೆ ಹನಿ ನೀರಾವರಿ ಅಳವಡಿಸಿದ್ದಲ್ಲಿ ಅಂತಹ ರೈತರಿಗೆ ಆದ್ಯತೆ ನೀಡಲಾಗುವುದು.
6. ಮೈದಾನ ಪ್ರದೇಶಗಳಲ್ಲಿ ಬೋರ್ ವೆಲ್/ಕಾಲುವೆ ನೀರು ಇತ್ಯಾದಿ ಬಳಸಿ ಬೆಳೆದ ಅಡಿಕೆ ಬೆಳೆಗೆ ಹನಿ ನೀರಾವರಿ ಸಹಾಯಧನವನ್ನು ನೀಡಲಾಗುವುದಿಲ್ಲ. ಸಾಂಪ್ರದಾಯಿಕವಾಗಿ ಅಡಿಕೆ ಬೆಳೆಯುವ ಜಿಲ್ಲೆಗಳಾದ ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಮಾತ್ರ ಅಡಿಕೆ ಬೆಳೆಗೆ ಹನಿ ನೀರಾವರಿ/ ತುಂತುರು ನೀರಾವರಿಗೆ ನಿಯಮಾನುಸಾರ ಸಹಾಯಧನ ನೀಡಲಾಗುವುದು.

**III.** ಯೋಜನೆಯ ಉದ್ದೇಶಗಳು**:**

1. ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಬಳಸಿ ಜಲಸಂಪನ್ಮೂಲವನ್ನು ಮಿತವ್ಯಯ ಮಾಡುವುದು.
2. ರೈತರಿಗೆ ಶೇ.90% ರಷ್ಟು ಸಹಾಯಧನ ನೀಡುವುದರ ಮೂಲಕ ಸೂಕ್ಷ್ಮ ನೀರಾವರಿಯ ಪದ್ಧತಿಯನ್ನು ರೈತರ ಜಮೀನುಗಳಲ್ಲಿ ಅಳವಡಿಸಲು ಪ್ರೋತ್ಸಾಹಿಸಿ ಶೇ.50 ರಿಂದ 70 ರಷ್ಟು ನೀರಿನ ಮಿತವ್ಯಯ ಸಾಧಿಸುವುದಲ್ಲದೇ, ವಿದ್ಯುತ್‌ಶಕ್ತಿ ಮತ್ತು ಕೂಲಿ ವೆಚ್ಚದಲ್ಲಿ ಮಿತವ್ಯಯ ಸಾಧಿಸುವುದು.
3. ಸೂಕ್ಷ್ಮ ನೀರಾವರಿಯಲ್ಲಿ ರಸಾವರಿ (Fertigation) ಪದ್ಧತಿಯ ಮೂಲಕ ರಾಸಾಯನಿಕ ಗೊಬ್ಬರಗಳನ್ನು ಬೆಳೆಗಳಿಗೆ ನೀಡುವುದರ ಮೂಲಕ ಶೇ.30 ರಿಂದ 40 ರಷ್ಟು ರಾಸಾಯನಿಕ ಗೊಬ್ಬರಗಳ ಮಿತವ್ಯಯ ಸಾಧಿಸುವುದು.
4. ಬೆಳೆಗಳಲ್ಲಿ ಶೇ.30 ರಿಂದ 100 ರಷ್ಟು ಹೆಚ್ಚು ಇಳುವರಿ ಹಾಗೂ ಉತ್ಪಾದಕತೆ ಸಾಧಿಸುವುದು.

ಅನುದಾನ ಮತ್ತು ಸಹಾಯಧನ**:**

2019-20 ನೇ ಸಾಲಿನ ಭಾರತ ಸರ್ಕಾರದ ಮಾರ್ಗಸೂಚಿ ಪ್ರಕಾರ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಪ್ರಕಾರ ರಾಜ್ಯದ ವಿವಿಧ ವರ್ಗದ ರೈತರಿಗೆ ಅಂದರೆ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಶೇ.55 ರಷ್ಟು ಹಾಗೂ ಇತರೆ ರೈತರಿಗೆ ಶೇ.45 ರಷ್ಟು ಸಹಾಯಧನದ ಮಾದರಿಯಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಈಗಾಗಲೇ ನೀಡುತ್ತಿರುವ ಅನುಪಾತದಲ್ಲಿ (60:40) ನೀಡಲಾಗುತ್ತದೆ. ಆದ್ದರಿಂದ ಕೇಂದ್ರ ಹಾಗೂ ರಾಜ್ಯ ಪಾಲಿನ ಅನುಪಾತದ ವಿವರ ಈ ಮುಂದಿನಂತಿದೆ.

| ರೈತರ ವರ್ಗ | ಕೇಂದ್ರ ಪಾಲು **(%)** | ರಾಜ್ಯ ಪಾಲು **(%)** | ಒಟ್ಟು **(%)** |
|---|---|---|---|
| ಸಣ್ಣ ಮತ್ತು ಅತೀ ಸಣ್ಣ | 33 | 22 | 55 |
| ಇತರೆ | 27 | 18 | 45 |

ಆದರೆ ರಾಜ್ಯ ಸರ್ಕಾರವು ಸೂಕ್ಷ್ಮ ನೀರಾವರಿಯ ಪ್ರಾಮುಖ್ಯತೆ ಹಾಗೂ ಅಗತ್ಯತೆಯನ್ನು ಅರಿತು ರೈತರ ಹಿತದೃಷ್ಟಿಯಿಂದ ತನ್ನ ಪಾಲನ್ನು ಹೆಚ್ಚಿಸಿ ಎಲ್ಲಾ ಪ್ರದೇಶದ ಎಲ್ಲಾ ವರ್ಗದ ರೈತರಿಗೆ ಶೇ.90 ರಷ್ಟು ಸಹಾಯಧನ

ನೀಡಲು ನಿರ್ಧರಿಸಿದ್ದು, ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸಿದ ಪ್ರತಿ ರೈತ ಫಲಾನುಭವಿಗೆ ಮೊದಲ 2.00 ಹೆಕ್ಟೇರ್ ಪ್ರದೇಶದವರೆಗೆ ಶೇ.90 ಮತ್ತು 2.00 ಹೆಕ್ಟೇರ್ ಮೇಲ್ಪಟ್ಟ 3.00 ಹೆಕ್ಟೇರ್ ವರೆಗೆ (ಒಟ್ಟು ಗರಿಷ್ಠ 5.00 ಹೆಕ್ಟೇರ್) ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಶೇಕಡಾವಾರು (ಶೇ.45 ರಷ್ಟು) ಮಿತಿಯೊಳಗೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ವಿವರ ಈ ಮುಂದಿನಂತಿದೆ;

| ವರ್ಗ | ಕೇಂದ್ರ ಪಾಲು (%) | ರಾಜ್ಯ ಪಾಲು (%) | | | ಒಟ್ಟು (%) |
|---|---|---|---|---|---|
| | | ಕಡ್ಡಾಯವಾಗಿ ನೀಡಬೇಕಾದ ಪಾಲು | ಹೆಚ್ಚುವರಿ ಪಾಲು | ಒಟ್ಟು ರಾಜ್ಯ ಪಾಲು | |
| 2.00 ಹೆಕ್ಟೇರ್ ವರೆಗಿನ ಸಹಾಯಧನ | | | | | |
| ಸಣ್ಣ ಮತ್ತು ಅತೀ ಸಣ್ಣ | 33 | 22 | 35 | 57 | 90 |
| ಇತರೆ | 27 | 18 | 45 | 63 | 90 |
| 2.00 ಹೆಕ್ಟೇರ್ ಮೇಲ್ಪಟ್ಟು ಸಹಾಯಧನ [2.00 ಹೆಕ್ಟೇರ್ ಮೇಲ್ಪಟ್ಟು 5.00 ಹೆಕ್ಟೇರ್ ವರೆಗೂ] | | | | | |
| ಸಣ್ಣ ಮತ್ತು ಅತೀ ಸಣ್ಣ | 33 | 22 | _ | 22 | 55 |
| ಇತರೆ | 27 | 18 | _ | 18 | 45 |

ಈ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಪಾಲಿನ ಅನುದಾನವನ್ನು ಖಜಾನೆ ಮೂಲಕ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುವುದು.

PMKSY – ಸೂಕ್ಷ್ಮ ನೀರಾವರಿ ಯೋಜನೆಯಡಿ ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಸೂಕ್ಷ್ಮ ನೀರಾವರಿ ಅಳವಡಿಸಲು ತಗಲುವ ಘಟಕ ವೆಚ್ಚಕ್ಕೆ ಮಿತಿಗೊಳಿಸಿ ಶೇ.90 ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ. ಆದರೆ ಕ್ಷೇತ್ರ ಮಟ್ಟದಲ್ಲಿ ನೈಜವಾಗಿ ಸೂಕ್ಷ್ಮ ನೀರಾವರಿ ಘಟಕದ ತಾಂತ್ರಿಕ ವಿನ್ಯಾಸಕ್ಕೆ ತಗಲುವ ನೈಜ ವೆಚ್ಚವು ಕೇಂದ್ರ ಸರ್ಕಾರದಿಂದ ನೀಡಲಾಗುವ ಸಹಾಯಧನಕ್ಕಿಂತಲೂ ಹೆಚ್ಚಾಗಿರುತ್ತದೆ.

ಈ ಸಂಬಂಧ ಸೂಕ್ಷ್ಮ ನೀರಾವರಿ ಘಟಕದ ಅಳವಡಿಕೆಗೆ ತಗಲುವ ನೈಜ ವೆಚ್ಚವು ಕೇಂದ್ರ ಸರ್ಕಾರದಿಂದ ನೀಡಲಾಗುವ ಸಹಾಯಧನಕ್ಕಿಂತಲೂ ಹೆಚ್ಚಾದ ಸಂದರ್ಭಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ನೀಡಿರುವ ಘಟಕ ವೆಚ್ಚದ ಪ್ರಕಾರ ನೀಡಲಾಗುವ ಶೇ.90 ರ ಸಹಾಯಧನ ಹಾಗೂ ಸೂಕ್ಷ್ಮ ನೀರಾವರಿ ಘಟಕಕ್ಕೆ ತಗಲುವ ನೈಜ ವೆಚ್ಚದ ಪ್ರಕಾರ ನೀಡಬೇಕಾದ ಶೇ.90 ರ ಸಹಾಯಧನದಲ್ಲಿ ಬರುವ ವ್ಯತ್ಯಾಸದ ಮೊತ್ತವನ್ನು ರಾಜ್ಯ ವಲಯ ಯೋಜನೆಯಾದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಯಡಿ ವೆಚ್ಚ ಭರಿಸಲಾಗುತ್ತದೆ. ಸದರಿ ಯೋಜನೆಯಡಿ ಗಂಗಕಲ್ಯಾಣ ಯೋಜನೆಯಡಿ ಕೊಳವೆ ಭಾವಿ ಕೊರೆಸಿ, ವಿದ್ಯುದ್ದೀಕರಣಗೊಳಿಸಿದ ಅಸಕ್ತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಆಧ್ಯತೆ ನೀಡಲಾಗುವುದು.

ಈ ಯೋಜನೆಯಡಿ ಸಹಾಯಧನದ ಮೊತ್ತವನ್ನು ಫಲಾನುಭವಿಯ ಖಾತೆಗೆ ECS ಮುಖಾಂತರ ಅಥವಾ ECS ಸೌಲಭ್ಯವಿಲ್ಲದಿದ್ದಲ್ಲಿ ಅಂತಹ ಬ್ಯಾಂಕ್‌ನ ಮ್ಯಾನೇಜರ್ ಹೆಸರಿಗೆ ಚೆಕ್‌ನ್ನು ನೀಡಿ ಫಲಾನುಭವಿ ಖಾತೆಗೆ ಜಮಾ ಮಾಡಲವುದು. ಒಂದು ವೇಳೆ ರೈತ ಫಲಾನುಭವಿ ಸೂಕ್ಷ್ಮ ನೀರಾವರಿ ಘಟಕ ಅಳವಡಿಸಲು ಸಾಲ ಪಡೆದಿದ್ದಲ್ಲಿ ಸದರಿ ಫಲಾನುಭವಿಗಳ ಸಾಲದ ಖಾತೆಗೆ ಜಮಾ ಮಾಡಲು ಕ್ರಮವಹಿಸುವುದು. ಫಲಾನುಭವಿಗಳು ತನ್ನ ಪಾಲಿನ ಮೊತ್ತ ಮಾತ್ರ ಸಂಸ್ಥೆಗಳಿಗೆ ನೀಡಿ ಸೂಕ್ಷ್ಮ ನೀರಾವರಿ ಅಳವಡಿಸಿದ್ದಲ್ಲಿ ಹಾಗೂ ನೇರವಾಗಿ ಸಂಸ್ಥೆಗಳಿಗೆ ಅವರ ಪರವಾಗಿ ಸಹಾಯಧನ ನೀಡಲು ನಿರಾಕ್ಷೇಪಣಾ ಪತ್ರ ನೀಡಿ ಕೋರಿದ್ದಲ್ಲಿ ಸಂಸ್ಥೆಗಳಿಗೆ ಈ ಮೊತ್ತವನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

2019-20 ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ - ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ (PMKSY-NMSA) ರಾಜ್ಯವಲಯ ಲೆಕ್ಕಶೀರ್ಷಿಕೆ:2401-00-108-2-30 ಅಡಿ ರೂ.26400.00 ಲಕ್ಷಗಳನ್ನು ಹನಿ/ತುಂತುರು ನೀರಾವರಿ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುವುದು.

**ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಗಾಗಿ ಜಿಲ್ಲಾವಲಯದಲ್ಲಿ ಸಹ ಅನುದಾನ ಒದಗಿಸಲಾಗಿದೆ.**

**(ರೂ. ಲಕ್ಷಗಳಲ್ಲಿ)**

| | |
|---|---|
| ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿನೀರಾವರಿ ಸಹಾಯಧನ 2435-00-101-0-28(2401-00-196-2-01) | 1095.09 |

**2019-20** ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ ಯೋಜನೆಗೆ ಲೆಕ್ಕಶೀರ್ಷಿಕೆ: **2401-00-108-2-30** ಅಡಿ ಒಟ್ಟು ರೂ. **26400.00** ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

# 3. ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತಾ ಬೇಸಾಯ ಯೋಜನೆ

## Integrated Farming in Coconut for Productivity Improvement Programme

## ಲೆಕ್ಕ ಶೀರ್ಷಿಕೆ: 2401-00-108-2-51

## ನಿಗದಿಪಡಿಸಿರುವ ಅನುದಾನ: ರೂ. 1596.35 ಲಕ್ಷಗಳು

| | | |
|---|---|---|
| 100 | ಧನ ಸಹಾಯ/ ಪರಿಹಾರ | **1596.35** |

**ಪೀಠಿಕೆ:**

ತೆಂಗು ಬೆಳೆಯು ಕರ್ನಾಟಕ ರಾಜ್ಯದ ಮುಖ್ಯ ವಾಣಿಜ್ಯ ಬೆಳೆಗಳಲ್ಲೊಂದು. ರಾಜ್ಯದಲ್ಲಿ ಅತೀ ಹೆಚ್ಚಿನ ವಿಸ್ತೀರ್ಣದಲ್ಲಿ ಬೆಳೆಯುವ ತೆಂಗು ಬೆಳೆಯ ಸಮಗ್ರ ಅಭಿವೃದ್ಧಿಗಾಗಿ ಸಮಗ್ರ ಪೋಷಕಾಂಶಗಳ ನಿರ್ವಹಣೆ ತಂತ್ರಜ್ಞಾನ, ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ ತಂತ್ರಜ್ಞಾನ ಅಂತರ/ಮಧ್ಯಂತರ ಬೆಳೆಗಳ ಪದ್ಧತಿಗಳ ಅಳವಡಿಕೆ, ತೆಂಗಿನ ತೋಟದಲ್ಲಿ ತೇವಾಂಶ ಸಂರಕ್ಷಣೆ ಇತ್ಯಾದಿ ಸುಧಾರಿತ ತೆಂಗು ಬೇಸಾಯ ಪದ್ಧತಿಗಳನ್ನು ಮತ್ತು ಹೊಸ ತಂತ್ರಜ್ಞಾನಗಳನ್ನು ತೆಂಗಿನ ತಾಕುಗಳಲ್ಲಿ ಅಳವಡಿಸಬೇಕಾಗಿರುತ್ತದೆ ಈ ಕುರಿತು ರೈತರಲ್ಲಿ ಅರಿವು ಮೂಡಿಸಿ ಹೊಸ ತಂತ್ರಜ್ಞಾನಗಳನ್ನು ತೆಂಗಿನ ತಾಕುಗಳಲ್ಲಿ ಅಳವಡಿಸುವಂತೆ ರೈತರನ್ನು ಉತ್ತೇಜಿಸಲು ಹಾಗೂ ತೆಂಗಿನ ಉತ್ಪಾದನೆಯನ್ನು ವೃದ್ಧಿಸಿ ರೈತರಿಗೆ ಉತ್ತಮ ಮಾರುಕಟ್ಟೆ ಬೆಲೆ ದೊರೆಯಲು ಅನುವಾಗುವಂತೆ ರೈತರಿಗೆ ಸಹಾಯಧನ ಒದಗಿಸಲು "ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತಾ ಬೇಸಾಯ" ಯೋಜನೆಯನ್ನು ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣಕನ್ನಡ, ದಾವಣಗೆರೆ, ಗದಗ, ಹಾಸನ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

ಸದರಿ ಯೋಜನೆಯಡಿ 2019-20 ನೇ ಸಾಲಿನಲ್ಲಿ ಕೇಂದ್ರವಲಯದ ತೆಂಗು ಅಭಿವೃದ್ಧಿ ಮಂಡಳಿ ಅನುದಾನಿತ ತೆಂಗು ಉತ್ಪಾದಕತೆ ಅಭಿವೃದ್ಧಿಗಾಗಿ ಸಮಗ್ರ ಬೇಸಾಯ ಯೋಜನೆ ಮತ್ತು ರಾಜ್ಯವಲಯದ ತೆಂಗು ಬೆಳೆ ಅಭಿವೃದ್ಧಿ ಯೋಜನೆಗಳನ್ನು ವಿಲೀನಗೊಳಿಸಿ ಲೆಕ್ಕ ಶೀರ್ಷಿಕೆ: 2401-00-108-2-51 ಅಡಿ ಅನುಷ್ಠಾನಗೊಳಿಸಲು ಒಟ್ಟು ರೂ.1596.35 ಲಕ್ಷಗಳಿಗೆ ವಾರ್ಷಿಕ ಕ್ರಿಯಾ ಯೋಜನೆ ರೂಪಿಸಲಾಗಿದೆ. ಸದರಿ ಯೋಜನೆಯಡಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ವಿವರಿಸಿದೆ

**(ರೂ. ಲಕ್ಷಗಳಲ್ಲಿ)**

| ಕ್ರ. ಸಂ | ಯೋಜನೆಗಳು | ವಾರ್ಷಿಕ ಅನುದಾನ | | ಒಟ್ಟು ಅನುದಾನ |
|---|---|---|---|---|
| | | ಕೇಂದ್ರ ಪಾಲು | ರಾಜ್ಯ ಪಾಲು | |
| A. | ಕೇಂದ್ರವಲಯದ ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ ಅಭಿವೃದ್ಧಿಯ "ಸಮಗ್ರ ಬೇಸಾಯದ ಯೋಜನೆ" (ಶೇ.100 ರಷ್ಟು ಸಹಾಯ) | 313.6875 | - | 313.6875 |
| B. | ರಾಜ್ಯವಲಯದ ಅನುದಾನದಡಿ "ತೆಂಗು ಬೆಳೆ | - | 1282.66250 | 1282.66250 |

| | | | | |
|---|---|---|---|---|
| | ಅಭಿವೃದ್ಧಿ ಯೋಜನೆ" | | | |
| | **ಒಟ್ಟು** | **313.6875** | **1282.66250** | **1596.35** |

**ಯೋಜನೆಯ ಉದ್ದೇಶಗಳು:**

1. ಸಮಗ್ರ ಬೇಸಾಯ ನಿರ್ವಹಣೆ ಪದ್ಧತಿಯಲ್ಲಿ ತೆಂಗು ಬೆಳೆಯಲ್ಲಿ ಇಳುವರಿಯನ್ನು ಅಧಿಕಗೊಳಿಸುವುದು.
2. ತೆಂಗು ಉತ್ಪಾದಕತೆ ಅಧಿಕಗೊಳಿಸಲು ನೀರಿನ ಸಂರಕ್ಷಣೆ, ಹೊದಿಕೆ ಅಳವಡಿಕೆ, ಸಾವಯವ ಮತ್ತು ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಪೌಷ್ಠಿಕತೆಯನ್ನು ಹೆಚ್ಚಿಸುವುದು ಹಾಗೂ ಅಂತರ/ಮಧ್ಯಂತರ ಬೆಳೆಗಳನ್ನು ಬೆಳೆದು ರೈತರ ಆರ್ಥಿಕತೆಯನ್ನು ಹೆಚ್ಚಿಸುವುದು.
3. ಯೋಜನಾ ಪ್ರದೇಶವನ್ನು ಒಂದು ಮಾದರಿ ಲಾಭದಾಯಕ ತೆಂಗು ಬೇಸಾಯ ತಾಕನ್ನಾಗಿ ಅಭಿವೃದ್ಧಿಪಡಿಸುವಂತೆ ರೈತರನ್ನು ಪ್ರೋತ್ಸಾಹಿಸುವುದು.
4. ಕಡಿಮೆ ಇಳುವರಿ ನೀಡುವ/ಹಳೆಯ ತೋಟಗಳನ್ನು ಪುನಶ್ಚೇತನಗೊಳಿಸುವುದರ ಮುಖಾಂತರ ಇಳುವರಿ ಹೆಚ್ಚಿಸುವುದು.
5. ಅಧಿಕ ಇಳುವರಿ ಹಾಗೂ ಎಳನೀರು ಕಾಯಿ ಉತ್ಪಾದನೆ ಹೆಚ್ಚಿಸಲು ಹೈಬ್ರೀಡ್/ಗಿಡ್ಡ ತೆಂಗಿನ ತಳಿಗಳ ನಾಟಿ ಮಾಡುವುದರ ಮೂಲಕ ಪ್ರದೇಶ ವಿಸ್ತರಣೆ.

## ಕಾರ್ಯಕ್ರಮಗಳ ವಿವರ:

### A. ತೆಂಗು ಅಭಿವೃದ್ಧಿ ಮಂಡಳಿ ಅನುದಾನಿತ ತೆಂಗು ಉತ್ಪಾದಕತೆ ಅಭಿವೃದ್ಧಿಗಾಗಿ ಸಮಗ್ರ ತೆಂಗು ಬೇಸಾಯ ಯೋಜನೆ:

ತೆಂಗು ಅಭಿವೃದ್ಧಿ ಮಂಡಳಿ ಅನುದಾನಿತ ಸಮಗ್ರ ತೆಂಗು ಬೇಸಾಯ ಮುಂದುವರೆಯುವ ಯೋಜನೆಯಾಗಿದ್ದು, ತೆಂಗು ಬೆಳೆಯ ಉತ್ಪಾದಕತೆ ಹೆಚ್ಚಿಸಲು, ತೆಂಗು ಅಭಿವೃದ್ಧಿ ಮಂಡಳಿ ಅನುದಾನಿತ ಸಮಗ್ರ ತೆಂಗು ಬೇಸಾಯ ಯೋಜನೆಯನ್ನು ತೋಟಗಾರಿಕೆ ಇಲಾಖೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ತೆಂಗು ಅಭಿವೃದ್ಧಿ ಮಂಡಳಿರವರು ಶೇ.100 ರಷ್ಟು ಸಹಾಯಧನ ಒದಗಿಸುತ್ತಾರೆ. 2019-20 ನೇ ಸಾಲಿಗೆ ಈ ಯೋಜನೆಗೆ ಒಟ್ಟು **ರೂ.313.6875** ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಸದರಿ ಯೋಜನೆಯಡಿ ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

**1. ಹಳೆ ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆ:**

2018-19 ನೇ ಸಾಲಿನಲ್ಲಿ 900 ಹೆಕ್ಟೇರ್ ಪ್ರದೇಶಗಳಲ್ಲಿ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ ಮಾಡಲಾಗಿರುತ್ತದೆ. ಸದರಿ ತಾಕುಗಳ ನಿರ್ವಹಣೆಗೆ 2019-20 ನೇ ಸಾಲಿನಲ್ಲಿ ಪ್ರತಿ ಹೆಕ್ಟೇರಿಗೆ ರೂ.17,500/- ರಂತೆ ಸಹಾಯಧನ ಒದಗಿಸಲು ರೂ.157.50 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

**2. Replanting and Rejuvenation Maintenance:**

2018-19 ನೇ ಸಾಲಿನಲ್ಲಿ ತೆಂಗು ಪುನಶ್ಚೇತನ ಕಾರ್ಯಕ್ರಮದಡಿ 1785 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನವನ್ನು ನೀಡಲಾಗಿದ್ದು, ಸದರಿ ತಾಕುಗಳ ನಿರ್ವಹಣೆಗೆ 2019-20 ನೇ ಸಾಲಿನಲ್ಲಿ ಪ್ರತಿ ಹೆಕ್ಟೇರಿಗೆ ರೂ.8750/- ರಂತೆ ಸಹಾಯಧನ ಒದಗಿಸಲು ರೂ.156.18750 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

**B) ರಾಜ್ಯವಲಯದ "ತೆಂಗು ಬೆಳೆ ಅಭಿವೃದ್ಧಿ ಯೋಜನೆ":**

2011-12 ನೇ ಸಾಲಿನಿಂದ ತೆಂಗು ಬೆಳೆಯಲ್ಲಿ ಉತ್ಪಾದಕತೆ ಹೆಚ್ಚಿಸುವ ಸಲುವಾಗಿ ರಾಜ್ಯ ಸರ್ಕಾರದ ಅನುದಾನದಲ್ಲಿ "ತೆಂಗು ಬೆಳೆ ಅಬಿವೃದ್ಧಿ ಯೋಜನೆ" ಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, 2019-20 ನೇ ಸಾಲಿಗೆ ಮುಂದುವರೆದ ಯೋಜನೆಯಾಗಿ ಅನುಷ್ಠಾನಗೊಳಿಸಲು ಒಟ್ಟು **ರೂ.1282.66250** ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. ಈ ಯೋಜನೆಯಡಿ ಕೆಳಕಂಡಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

1) **ತೆಂಗು ಬೆಳೆಗೆ ತಗಲುವ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಕಾರ್ಯಕ್ರಮ:**

ಈ ಕಾರ್ಯಕ್ರಮದಲ್ಲಿ ತೆಂಗು ಬೆಳೆಗೆ ತಗಲುವ ಕೀಟ ಹಾಗೂ ರೋಗಗಳ ಬಾಧೆಗೆ ಅನುಗುಣವಾಗಿ ಕೀಟ ಮತ್ತು ರೋಗಗಳ ನಿಯಂತ್ರಣಕ್ಕೆ ಸಸ್ಯಸಂರಕ್ಷಣಾ ಔಷಧಿಗಳನ್ನು ಖರೀದಿಸಿದ ಫಲಾನುಭವಿಗಳಿಗೆ ಶೇ.75 ರಂತೆ, ಪ್ರತಿ ಹೆಕ್ಟೇರ್ ಗೆ ಗರಿಷ್ಠ ರೂ.5250/- ರಂತೆ ಸಹಾಯಧನವನ್ನು ಗರಿಷ್ಠ 2 ಹೆಕ್ಟೇರ್ ಗೆ ಮಿತಿಗೊಳಿಸಿ ನೀಡಲಾಗುವುದು. 2019-20 ನೇ ಸಾಲಿನಲ್ಲಿ 11924 ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಗೆ ತಗುಲಿದ ಕೀಟ ಮತ್ತು ರೋಗಗಳ ನಿಯಂತ್ರಣ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು ಇದಕ್ಕಾಗಿ ಒಟ್ಟು ರೂ.626.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

**2) ತೆಂಗು ಬೆಳೆಯ ಸಮಗ್ರ ಪೋಷಕಾಂಶ ನಿರ್ವಹಣೆ:**

ಈ ಕಾರ್ಯಕ್ರಮದಲ್ಲಿ ತೆಂಗು ಬೆಳೆಯ ಸಮಗ್ರ ಪೋಷಕಾಂಶ ನಿರ್ವಹಣೆಗಾಗಿ ಪರಿಕರಗಳನ್ನು ಖರೀದಿಸಿದ ಎಲ್ಲಾ ವರ್ಗದ ರೈತರಿಗೆ ಶೇ.75 ರಂತೆ ಪ್ರತಿ ಹೆಕ್ಟೇರ್ ಗೆ ಗರಿಷ್ಠ ರೂ. 7500/- ರಂತೆ ಸಹಾಯಧನವನ್ನು ಗರಿಷ್ಠ 2 ಹೆಕ್ಟೇರ್ ಗೆ ಮಿತಿಗೊಳಿಸಿ ನೀಡಲಾಗುವುದು. 2019-20 ನೇ ಸಾಲಿನಲ್ಲಿ 4000 ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯ ಸಮಗ್ರ ಪೋಷಕಾಂಶ ನಿರ್ವಹಣೆ ಕಾರ್ಯಕ್ರಮ ಕೈಗೊಳ್ಳಲು ಒಟ್ಟು ರೂ.300.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ.

**3. a) ತೆಂಗಿನ ತೋಟಗಳ ಪ್ರದೇಶ ವಿಸ್ತರಣೆ :**

ಕರ್ನಾಟಕ ರಾಜ್ಯದಲ್ಲಿ ತೆಂಗಿನ ಎತ್ತರ ತಳಿಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿದ್ದು, ಇತರೆ ರಾಜ್ಯಗಳಿಗೆ ಹೋಲಿಸಿದಾಗ ರಾಜ್ಯದಲ್ಲಿ ತೆಂಗಿನ ಉತ್ಪಾದನೆ ಕಡಿಮೆ ಇರುತ್ತದೆ. ಅಲ್ಲದೇ, ಸಾಂಪ್ರದಾಯಿಕ ಪದ್ಧತಿಯಲ್ಲಿನ ತೆಂಗಿನ ತೋಟಗಳಿಗೆ ವೈಜ್ಞಾನಿಕ ನಿರ್ವಹಣೆಯ ಅಗತ್ಯವಿದ್ದು, ತೆಂಗಿನ ಮರಗಳಿಗೆ ಶಿಫಾರಸ್ಸಿನಂತೆ ರಾಸಾಯನಿಕ ಗೊಬ್ಬರಗಳನ್ನು ಮತ್ತು ಸಸ್ಯಸಂರಕ್ಷಣಾ ಕ್ರಮಗಳನ್ನು ಒದಗಿಸುವುದು ಹಾಗೂ ಸುಧಾರಿತ ಬೇಸಾಯ ಕ್ರಮಗಳನ್ನು ಅನುಸರಿಸುವುದು ಅಗತ್ಯವಾಗಿರುತ್ತದೆ

ಈ ಹಿನ್ನೆಲೆಯಲ್ಲಿ, ತೆಂಗಿನಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ಹಾಗೂ ತೆಂಗು ಬೆಳೆಗಾರರು ಕಡಿಮೆ ಅವಧಿಯಲ್ಲಿ ಹೆಚ್ಚಿನ ಎಳನೀರು ಕಾಯಿಗಳ ಇಳುವರಿ ಪಡೆಯಲು ತೆಂಗು ಗಿಡ್ಡ ಮತ್ತು ಹೈಬ್ರೀಡ್ ತಳಿಗಳನ್ನು ಬೆಳೆಸಲು ಪ್ರೋತ್ಸಾಹಿಸಲಾಗುವುದು. ತೆಂಗು ಬೆಳೆಯ ಪ್ರದೇಶ ವಿಸ್ತರಣೆ

ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು 2019-20 ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಶೇ.50 ರಂತೆ ಸಂಕರಣ ತಳಿಗೆ ರೂ.13500/- ಮತ್ತು ಗಿಡ್ಡ ತಳಿಗೆ ರೂ.15000/- ಹಾಗೂ ಎತ್ತರದ ತಳಿಗಳು ರೂ.13000/-ದಂತೆ ಪ್ರತಿ ಫಲಾನುಭವಿಗೆ ಗರಿಷ್ಠ 4 ಹೆಕ್ಟೇರ್ ಗಳವರೆಗೆ ಸಹಾಯಧನವನ್ನು ಒಂದೇ ಕಂತಿನಲ್ಲಿ ಈ ಕೆಳಕಂಡಂತೆ ನೀಡಲಾಗುವುದು.

**(ರೂ.ಗಳಲ್ಲಿ)**

| ಕ್ರ. ಸಂ | ತಳಿಗಳು | ಒಟ್ಟು ವೆಚ್ಚ ಪ್ರತಿ ಹೆಕ್ಟೇರ್ ಗೆ | ಇಲಾಖೆಯಿಂದ ಶೇ.50 ರಂತೆ ನೀಡಲಾಗುವ ಒಟ್ಟು ಸಹಾಯಧನ |
|---|---|---|---|
| 1. | ಗಿಡ್ಡ ಜಾತಿಯ ತಳಿಗಳು | 30,000/- | 15000/- |
| 2 | ಸಂಕರಣ ತಳಿಗಳು | 27,000/- | 13500/- |
| 3 | ಎತ್ತರದ ತಳಿಗಳು | 26,000/- | 13000/- |

2019-20 ನೇ ಸಾಲಿನಲ್ಲಿ 200 ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಪ್ರದೇಶ ವಿಸ್ತರಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಫಲಾನುಭವಿಗಳಿಗೆ ಸಹಾಯಧನ ಒದಗಿಸಲು ಒಟ್ಟು ರೂ.30.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

**4) ಮಂಡ್ಯ ಜಿಲ್ಲೆಯ ಕೃಷ್ಣ ರಾಜ ಸಾಗರ, ತೋಟಗಾರಿಕೆ ಕ್ಷೇತ್ರದಲ್ಲಿ TxD/ DxT ಹೈಬ್ರೀಡ್ ತೆಂಗಿನ ಸಸಿಗಳ ಉತ್ಪಾದನೆ:**

ರಾಜ್ಯದಲ್ಲಿ ತೆಂಗು ಬೆಳೆಗಾರರು ಕಡಿಮೆ ಅವಧಿಯಲ್ಲಿ ಹೆಚ್ಚಿನ ಇಳುವರಿ ಪಡೆಯುವಂತೆ ಉದ್ದೇಶಿಸಿ ಹಾಗೂ ತೆಂಗು ಗಿಡ್ಡ/ಸಂಕರಣ ತಳಿಗಳನ್ನು ನಾಟಿ ಮಾಡಲು ರೈತರು ಹೆಚ್ಚು ಆಸಕ್ತಿ ಹೊಂದಿರುವುದರಿಂದ ರೈತರಿಗೆ ಗಿಡ್ಡ ಅಥವಾ ಸಂಕರಣ ತಳಿಗಳನ್ನು ನಾಟಿ ಮಾಡಲು ತೆಂಗಿನ ಸಸಿಗಳನ್ನು ಪೂರೈಸುವ ಉದ್ದೇಶದಿಂದ 2019-20 ನೇ ಸಾಲಿಗೆ ಸುಮಾರು 37917 ಸಂಖ್ಯೆ TxD/DxT ಸಂಕರಣ ಬೀಜದ ಕಾಯಿಗಳ ಬಿತ್ತನೆಗಾಗಿ ಶೇ.50 ರಂತೆ ರಾಜ್ಯ ಪಾಲಿನ ಅನುದಾನ ರೂ.11.37510 ಲಕ್ಷಗಳನ್ನು ರಾಜ್ಯವಲಯದ "ತೆಂಗು ಬೆಳೆ ಅಭಿವೃದ್ಧಿ ಯೋಜನೆ" ಅಡಿ ಒದಗಿಸಲಾಗುವುದು.

5**) ನೀರಾ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ:**

ನೀರಾ ಪ್ರಾಮುಖ್ಯತೆಯನ್ನು ಪರಿಗಣಿಸಿ 2017-18 ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಕಂಡಿಕೆ-37 ರಲ್ಲಿ "ತೆಂಗು ಬೆಳೆಗಾರರಿಗೆ ನೆರವಾಗಲು 'ನೀರಾ ನೀತಿ'ಯನ್ನು ಅನುಮೋದಿಸಿದೆ. ಇದನ್ನು ಕಾರ್ಯರೂಪಕ್ಕೆ ತರಲು ಅಬಕಾರಿ ಅಧಿನಿಯಮಕ್ಕೆ ತಿದ್ದುಪಡಿ ತರಲಾಗಿದೆ. 'ನೀರಾ' ಅನ್ನು ಒಂದು ಪುಷ್ಠಿದಾಯಕ ಪೇಯವನ್ನಾಗಿ ಮಾಡಲು ಹಾಗೂ ಇದನ್ನು ಇತರ ಉದ್ದೇಶಗಳಿಗೆ ಬಳಸುವುದಕ್ಕೆ ಸಂಸ್ಕರಿಸಲು ಆಯ್ದ ತೆಂಗು ಉತ್ಪಾದಕ ಕಂಪನಿಗಳಿಗೆ ಮತ್ತು ರೈತ ಉತ್ಪಾದಕ ಕಂಪನಿಗಳಿಗೆ ಲೈಸನ್ಸ್ ನೀಡಲಾಗುವುದು ಹಾಗೂ ಇವರಿಗೆ ಮಾರುಕಟ್ಟೆ ಹಾಗೂ ಇತರೆ ಸೌಲಭ್ಯ ಕಲ್ಪಿಸಲು ಉತ್ತೇಜಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ.

2019-20 ನೇ ಸಾಲಿನಲ್ಲಿ ನೀರಾ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ರೂ.230.00 ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗುವುದು. ಪ್ರತಿ ಘಟಕಕ್ಕೆ ವೆಚ್ಚದ ಶೇ.50 ರಂತೆ ಗರಿಷ್ಠ ರೂ.100.00 ಲಕ್ಷಗಳ ಸಹಾಯಧನ ನೀಡಲಾಗುವುದು. ನೀರಾ ಇಳಿಸುವ ಕುರಿತು ತರಬೇತಿ ಕಾರ್ಯಕ್ರಮವನ್ನು ತೆಂಗು ಉತ್ಪಾದಕರ ಕಂಪನಿ ಅಥವಾ ತೋಟಗಾರಿಕಾ ರೈತ ಉತ್ಪಾದಕರ ಸಂಸ್ಥೆಯ ಸದ್ಯಸರುಗಳಿಗೆ ಹಾಗೂ ಇತರೆ ಆಸಕ್ತ

ರೈತರಿಗೆ ತೆಂಗು ಅಭಿವೃದ್ಧಿ ಮಂಡಳಿಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗುವುದು. 2019-20 ನೇ ಸಾಲಿನಲ್ಲಿ ನೀರಾ ತಂತ್ರಜ್ಞರ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ರೂ.15.00 ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗುವುದು.

ನೀರಾ ನೀತಿ ಅನುಷ್ಠಾನಗೊಳಿಸಲು ಒಟ್ಟು ವೆಚ್ಚದ ಶೇ.2 ರಷ್ಟು ಅನುದಾನವನ್ನು ಆಡಳಿತಾತ್ಮಕ ವೆಚ್ಚ (ಕಛೇರಿಗಳಿಗೆ ಅವಶ್ಯಕತೆಯಿರುವ ಲೇಖನ ಸಾಮಾಗ್ರಿಗಳು, ಸಭೆಯ ವೆಚ್ಚಗಳು ಇತ್ಯಾದಿ) ಮತ್ತು ಯೋಜನೆ ಪ್ರಚಾರ ಕಾರ್ಯಕ್ರಮ, ಕ್ಷೇತ್ರ ಭೇಟಿ, ಇತ್ಯಾದಿ ವೆಚ್ಚಗಳಿಗೆ NHM ಮಾರ್ಗಸೂಚಿಯಂತೆ ನಿಯಮಾನುಸಾರ ಖರ್ಚು ಭರಿಸಲಾಗುವುದು. ಈ ಕಾರ್ಯಕ್ರಮಕ್ಕೆ 2019-20 ನೇ ಸಾಲಿನಲ್ಲಿ ರೂ.5.00 ಲಕ್ಷಗಳ ಅನುದಾನವನ್ನು ಬಳಸಿಕೊಳ್ಳಲಾಗುವುದು.

**4) <u>Contingency ಮತ್ತು ಇತರೆ ವೆಚ್ಚಗಳು:</u>**

ಈ ಯೋಜನೆಯಡಿ ಜಿಲ್ಲೆಗಳ ಗುಚ್ಚ ಪ್ರದೇಶಗಳಲ್ಲಿ ಅಭಿವೃದ್ಧಿಪಡಿಸಿದ ಫಲಾನುಭವಿಗಳ ಮಾದರಿ ಪ್ರಾತ್ಯಕ್ಷತೆ ತಾಕುಗಳ ಹಾಗೂ ಕೀಟ/ರೋಗಗಳ ನಿಯಂತ್ರಣದ ಬಗ್ಗೆ ಫಲಿತಾಂಶಗಳ ಕುರಿತು ಆ ಪ್ರದೇಶದ ವ್ಯಾಪ್ತಿಯಲ್ಲಿನ ಎಲ್ಲಾ ತೆಂಗು ಬೆಳೆಗಾರರಿಗೆ ವಿವರಿಸಲು ಮತ್ತು ರಾಜ್ಯದಲ್ಲಿ ತೆಂಗು ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಿಸುವ ಕುರಿತು ರೈತರಿಗೆ ತಿಳುವಳಿಕೆ ನೀಡಲು ತರಬೇತಿಗಳನ್ನು ಹಮ್ಮಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ ತೆಂಗು ಉತ್ಪಾದನೆ ಹಾಗೂ ಕೀಟ ಮತ್ತು ರೋಗಗಳ ಹತೋಟಿಗಾಗಿ ಆಯ್ಕೆಯಾದ ಗುಚ್ಚಗಳಲ್ಲಿನ ಮಾದರಿ ಪ್ರಾತ್ಯಕ್ಷತೆ ತಾಕುಗಳ (Demonstrations) ಫಲಿತಾಂಶಗಳನ್ನು ತರಬೇತಿ/ಪ್ರಾತ್ಯಕ್ಷತೆ/field days ಮುಖಾಂತರ ಪ್ರತಿ ಜಿಲ್ಲೆಯಲ್ಲಿ ಸುತ್ತಮುತ್ತಲಿನ ರೈತರಿಗೆ ಮಾಹಿತಿ ನೀಡಲು ತರಬೇತಿಗಳನ್ನು 2019-20 ನೇ ಸಾಲಿಗೆ ಹಮ್ಮಿಕೊಳ್ಳಲಾಗುವುದು. ಮುಂದುವರೆದು, ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕೇಂದ್ರ ಸ್ಥಾನದಲ್ಲಿ ಸಲಹೆಗಾರರನ್ನು ನೇಮಿಸಿಕೊಳ್ಳಲು, ಕೇಂದ್ರಸ್ಥಾನದ ಅಧಿಕಾರಿಗಳು ಯೋಜನೆ ಅನುಷ್ಠಾನದ ಬಗ್ಗೆ ಪರಿಶೀಲಿಸಲು ಜಿಲ್ಲೆಗಳಿಗೆ ಭೇಟಿ ನೀಡಲು ಬಾಡಿಗೆ ವಾಹನ ಮತ್ತು ಜಿಲ್ಲೆಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೈತ ಸಹಾಯಕರನ್ನು ನೇಮಿಸಲು, ಕಛೇರಿ ವೆಚ್ಚ ಭರಿಸಲು, ಇತ್ಯಾದಿಗಳಿಗೆ 2019-20 ನೇ ಸಾಲಿನಲ್ಲಿ Contingency ಮತ್ತು ಇತರೆ ವೆಚ್ಚಗಳಿಗೆ ಒಟ್ಟು ರೂ.65.28740 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

2019-20 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಬೇಕಾಗಿರುವ ಆರ್ಥಿಕ/ಭೌತಿಕ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ.

**<u>ಕಾರ್ಯಕ್ರಮಗಳ ಪಟ್ಟಿ:</u>**

| ಕ್ರ. ಸಂ | ಕಾರ್ಯಕ್ರಮ | ಘಟಕ | 2019-20 ನೇ ಸಾಲಿಗೆ ವಾರ್ಷಿಕ ಗುರಿ | | | |
|---|---|---|---|---|---|---|
| | | | ಭೌತಿಕ | ಆರ್ಥಿಕ | | ಒಟ್ಟು |
| | | | | ಕೇಂದ್ರದ ಪಾಲು | ರಾಜ್ಯದ ಪಾಲು | |
| **A** | **ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ ಅಭಿವೃದ್ಧಿಯ "ಸಮಗ್ರ ಬೇಸಾಯದ ಯೋಜನೆ"** | | | | | |

| | | | | | | |
|---|---|---|---|---|---|---|
| 1 | ಹಳೆ ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆ (LODP-maintaince)@ ರೂ.17,500/- ಪ್ರತಿ ಹೆಕ್ಟೇರ್ ಗೆ | ಹೆಕ್ಟೇರ್ | 900 | 157.50 | - | 157.50 |
| 2 | Replanting and Rejuvenation maintaince | ಹೆಕ್ಟೇರ್ | 1785 | 156.19 | | 156.19 |
| | **ಒಟ್ಟು A.** | | **2685** | **313.69** | **0.00** | **313.69750** |
| **B** | **ರಾಜ್ಯ ಸರ್ಕಾರ ಅನುದಾನಿತ ತೆಂಗು ಬೆಳೆ ಅಭಿವೃದ್ಧಿ ಯೋಜನೆ (ಶೇ.75 ರಂತೆ ಸಹಾಯಧನ)** | | | | | |
| 1 | ತೆಂಗು ಬೆಳೆಗೆ ತಗಲುವ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಕಾರ್ಯಕ್ರಮ ಎಲ್ಲಾ ವರ್ಗದ ರೈತರಿಗೆ ಶೇ.75 ರಂತೆ ಪ್ರತಿ ಹೆಕ್ಟೇರ್ ಗೆ ಗರಿಷ್ಟ ರೂ.5250/- ಗಳ | ಹೆಕ್ಟೇರ್ | 11924 | - | 626.00 | 626.00 |
| 2 | ತೆಂಗು ಬೆಳೆಯ ಸಮಗ್ರ ಪೋಷಕಾಂಶ ನಿರ್ವಹಣೆ ಕಾರ್ಯಕ್ರಮ ಎಲ್ಲಾ ವರ್ಗದ ರೈತರಿಗೆ ಶೇ.75 ರಂತೆ ಪ್ರತಿ ಹೆಕ್ಟೇರ್ ಗೆ ಗರಿಷ್ಟ ರೂ.7500/- ಗಳ ಸಹಾಯಧನ | ಹೆಕ್ಟೇರ್ | 4000 | | 300.00 | 300.00 |
| 3 | ತೆಂಗಿನ ತೋಟಗಳ ಪ್ರದೇಶ ವಿಸ್ತರಣೆ (ಪ್ರತಿ ಹೆಕ್ಟೇರ್ ಗೆ ರೂ.15000/- ರಂತೆ ಸಹಾಯಧನ) | ಹೆಕ್ಟೇರ್ | 200 | - | 30.00 | 30.00 |
| 4 | ಮಂಡ್ಯ ಜಿಲ್ಲೆಯ ಕೃಷ್ಣ ರಾಜ ಸಾಗರ, ತೋಟಗಾರಿಕೆ ಕ್ಷೇತ್ರದಲ್ಲಿ TxD/DxT ಹೈಬ್ರೀಡ್ ತೆಂಗಿನ ಸಸಿಗಳ ಉತ್ಪಾದನೆ (50% ರಾಜ್ಯದ ಪಾಲು) **ಟಿಪ್ಪಣಿ:** KSHDA ವತಿಯಿಂದ ಶೇ.50 ರ ಪಾಲಿನ ಅನುದಾನವನ್ನು ಪಡೆಯಲಾಗುವುದು. | ಸಂಖ್ಯೆ | 37917 Nos | - | 11.37 | 11.37 |
| 5 | ನೀರಾ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ | ಸಂಖ್ಯೆ | | - | 250.00 | 250.00 |
| | Contingency ಮತ್ತು ಇತರೆ ವೆಚ್ಚಗಳು (ತರಬೇತಿ/ ಪ್ರಾತ್ಯಕ್ಷತೆ/ field days, etc) | | | - | 65.28 | 65.28 |
| | **ಒಟ್ಟು (B)** | | 16124 ಹೆ + 37917 ಸಂ | **0.0** | 1282.66 | 1282.66 |

| | | | | | | |
|---|---|---|---|---|---|---|
| | **ಒಟ್ಟು(A+B)** | | **900 ಹೆ+ 1785 ಹೆ 11924 ಹೆ + 400 ಹೆ+** | **313.68** | **1282.66** | **1596.35** |

**<u>ಟಿಪ್ಪಣಿ:</u>** ಘಟಕ ಕಾರ್ಯಕ್ರಮಗಳಿಗೆ ನಿಗದಿಪಡಿಸಲಾದ ಅನುದಾನವನ್ನು ಜಿಲ್ಲಾವಾರು ಅವಶ್ಯಕತೆ ಅನುಗುಣವಾಗಿ ವಾರ್ಷಿಕ ಗುರಿ ಮಿತಿಯೊಳಗೆ ಬದಲಾವಣೆಗಳನ್ನು ತೋಟಗಾರಿಕೆ ನಿರ್ದೇಶಕರ ಹಂತದಲ್ಲಿಯೇ ಮಾಡಿಕೊಳ್ಳಲಾಗುವುದು. ತೆಂಗು ಅಭಿವೃದ್ಧಿ ಮಂಡಳಿ ಅನುದಾನಿತ ಕಾರ್ಯಕ್ರಮಗಳನ್ನು ಸದರಿ ಮಂಡಳಿಯಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುವುದು.

ಸದರಿ ಯೋಜನೆಗಾಗಿ ಜಿಲ್ಲಾವಲಯದಲ್ಲಿ ಸಹ ಅನುದಾನ ಒದಗಿಸಲಾಗಿದೆ.

**(ರೂ. ಲಕ್ಷಗಳಲ್ಲಿ)**

| | |
|---|---|
| ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ 2435-00-101-0-36 (2401-00-196-2-01) | 165.27 |

ಒಟ್ಟಾರೆ ರೂ.**1761.62** ಲಕ್ಷಗಳಿಗೆ ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸಿ ಕೇಂದ್ರ ಸರ್ಕಾರದ ಅನುಮೋದನೆ ಪಡೆಯಲು ತೋಟಗಾರಿಕೆ ನಿರ್ದೇಶಕರು ಕ್ರಮ ವಹಿಸತಕ್ಕದ್ದು

**2019-20** ನೇ ಸಾಲಿನಲ್ಲಿ ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತಾ ಬೇಸಾಯ ಯೋಜನೆಗೆ ಲೆಕ್ಕಶೀರ್ಷಿಕೆ: **2401-00-108-2-51** ಅಡಿ ಕೇಂದ್ರವಲಯದ ತೆಂಗು ಅಭಿವೃದ್ಧಿ ಮಂಡಳಿ ಅನುದಾನಿತ ಕಾರ್ಯಕ್ರಮ ಅನುಷ್ಠಾನಗೊಳಿಸಲು ರೂ**313.68750** ಲಕ್ಷಗಳು ಮತ್ತು ರಾಜ್ಯವಲಯದ ತೆಂಗು ಬೆಳೆ ಅಭಿವೃದ್ಧಿ ಯೋಜನೆ ಯನ್ನು ಅನುಷ್ಠಾನಗೊಳಿಸಲು ರಾಜ್ಯ ಪಾಲಿನ ಅನುದಾನ ರೂ.**1282.66250** ಲಕ್ಷಗಳಂತೆ ಒಟ್ಟು ರೂ.**1596.35** ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

## 4. ರಾಷ್ಟ್ರೀಯ ತೋಟಗಾರಿಕೆ ಮಿಷನ್
## National Horticulture mission
## ಲೆಕ್ಕ ಶೀರ್ಷಿಕೆ: 2401-00-119-4-06
## ನಿಗದಿಪಡಿಸಿರುವ ಅನುದಾನ: 12549.00 ಲಕ್ಷಗಳು

| | | |
|---|---|---|
| 059 | ಇತರೆ ಖರ್ಚುಗಳು | 287.00 |
| 101 | ಸಹಾಯಾನುದಾನ – ವೇತನಗಳು | 149.00 |
| 106 | ಸಹಾಯಧನ | 6577.00 |
| 133 | ವಿಶೇಷ ಅಭಿವೃದ್ಧಿ ಯೋಜನೆ | 2451.00 |
| 422 | ಪರಿಶಿಷ್ಟ ಜಾತಿ ಉಪ ಯೋಜನೆ | 2049.00 |
| 423 | ಗಿರಿಜನ ಉಪ ಯೋಜನೆ | 1036.00 |
| | ಒಟ್ಟು | **12549.00** |

**ಪೀಠಿಕೆ:**

ರಾಷ್ಟ್ರಮಟ್ಟದಲ್ಲಿ ತೋಟಗಾರಿಕೆ ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶದಿಂದ ಕೇಂದ್ರಸರ್ಕಾರವು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯನ್ನು 2005-06 ರಲ್ಲಿ ಜಾರಿಗೊಳಿಸಲಾಗಿದೆ. ಈ ಯೋಜನೆಯ ಪ್ರಯೋಜನವನ್ನು ಸಂಪೂರ್ಣವಾಗಿ ವಿನಿಯೋಗಿಸಿಕೊಳ್ಳಲು ರಾಜ್ಯವು ಕಾರ್ಯೋನ್ಮುಖವಾಗಿದೆ.

ಈ ದಿಶೆಯಲ್ಲಿ ರಾಜ್ಯದ ವೈವಿಧ್ಯಮಯ ಭೂ - ಹವಾಗುಣಗಳಿಗೆ ಅನುಗುಣವಾಗಿ ಪ್ರಾದೇಶಿಕ ಆಧಾರಿತ ಕಾರ್ಯತಂತ್ರಗಳ ಮೂಲಕ ತೋಟಗಾರಿಕೆಯನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಲು ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯನ್ನು 10 ನೇ ಪಂಚವಾರ್ಷಿಕ ಯೋಜನೆಯಡಿ 2005-06 ಹಾಗೂ 2006-07 ನೇ ಸಾಲಿನಲ್ಲಿ ಕೇಂದ್ರಸರ್ಕಾರದಿಂದ ಶೇ.100 ರಷ್ಟು ಅನುದಾನದೊಂದಿಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ 2015-16 ನೇ ಸಾಲಿನಿಂದ ಯೋಜನೆಯಡಿ ಶೇ.60 ರಷ್ಟು ಅನುದಾನವನ್ನು ಕೇಂದ್ರ ಸರ್ಕಾರವು ಒದಗಿಸಲಿದ್ದು, ಉಳಿದ ಶೇ.40 ರ ಅನುದಾನವನ್ನು ರಾಜ್ಯಸರ್ಕಾರವು ಭರಿಸಬೇಕಾಗಿರುತ್ತದೆ. ಅದರಂತೆ, 2019-20 ನೇ ಸಾಲಿನಲ್ಲಿ NHM, ಕೇಂದ್ರದ ಪಾಲು ಶೇ.60 ರಂತೆ ರೂ.10983.336 ಲಕ್ಷಗಳು ಮತ್ತು ಶೇ.40 ರಂತೆ ರಾಜ್ಯದ ಪಾಲು ರೂ.7322.224 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ:2401-00-119-4-06 ರಲ್ಲಿ ನಿಗದಿಪಡಿಸಿ ಕೊಳ್ಳಲಾಗಿರುತ್ತದೆ.

ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸಿ ಕೇಂದ್ರ ಸರ್ಕಾರದ ಅನುಮೋದನೆ ಪಡೆಯಲು ತೋಟಗಾರಿಕೆ ನಿರ್ದೇಶಕರು ಕ್ರಮ ವಹಿಸತಕ್ಕದ್ದು

**2019-20** ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗೆ **ಲೆಕ್ಕಶೀರ್ಷಿಕೆ: 2401-00-119-4-06 (ಯೋಜನೆ) ಅಡಿ ಒಟ್ಟು ರೂ.12549.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.**

# 5. ರಾಷ್ಟ್ರೀಯ ಆಯುಶ್ ಮಿಷನ್
# National Ayush Mission (NAM)
## ಲೆಕ್ಕ ಶೀರ್ಷಿಕೆ: 2401-00-119- 4 -12
## ನಿಗದಿಪಡಿಸಿರುವ ಅನುದಾನ: ರೂ.100.00 ಲಕ್ಷಗಳು

| | | |
|---|---|---|
| 059 | ಇತರೆ ಖರ್ಚುಗಳು | **100.00** |

**ಪೀಠಿಕೆ:**

ಔಷಧಿ ಬೆಳೆಗಳು ನಮ್ಮ ಸಾಂಪ್ರದಾಯಿಕ ಸ್ವದೇಶಿ ಆರೋಗ್ಯ ಪಾಲನಾ ಕ್ಷೇತ್ರದ ಪ್ರಮುಖ ಸಂಪನ್ಮೂಲ ಆಧಾರಗಳಾಗಿವೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಯುಷ್ ವಿಧಾನ ಚಿಕಿತ್ಸೆ ಹೆಚ್ಚು ಜನಪ್ರಿಯ ಮತ್ತು ಪರಿಣಾಮಕಾರಿಯಾಗಬೇಕಾದಲ್ಲಿ, ಔಷಧಿ ಕ್ಷೇತ್ರಕ್ಕೆ ಸರಾಗ ಮತ್ತು ನಿಯಮಿತವಾಗಿ ಸಸ್ಯ ಮೂಲದ ಗುಣಮಟ್ಟದ ಕಚ್ಚಾ ಸಾಮಗ್ರಿ ಪೂರೈಸುವುದು ಅತ್ಯವಶ್ಯಕ. ಕ್ಷೇತ್ರದ ಒಟ್ಟು ಅವಶ್ಯಕತೆಯ ಶೇ.90 ರಷ್ಟು ಪ್ರಭೇದಗಳನ್ನು ಅರಣ್ಯ ಮೂಲಗಳಿಂದಲೇ ಪಡೆಯಲಾಗುತ್ತಿದ್ದು, ಅವುಗಳ ಪೈಕಿ 2/3 ಭಾಗದಷ್ಟು ಸಸ್ಯ ಮೂಲದ ಕಚ್ಚಾ ಸಾಮಗ್ರಿಗಳನ್ನು ಅವೈಜ್ಞಾನಿಕ ವಿಧಾನಗಳಿಂದಲೇ ಕೊಯ್ಲುಮಾಡಿ ಪೂರೈಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ, ಔಷಧಿ ಬೆಳೆಗಳ ಸಾಗುವಳಿಯು ಆಯುಷ್ ಕ್ಷೇತ್ರದ ಕಚ್ಚಾ ಸಾಮಗ್ರಿ ಅವಶ್ಯಕತೆ ಪೂರೈಸುವಲ್ಲಿ ಪ್ರಮುಖ ಅಂಶವಾಗಿರುತ್ತದೆ. ಜೊತೆಗೆ ಇದು ಬೆಳೆ ವೈವಿಧ್ಯತೆ ಕಾಪಾಡುವುದು, ರಫ್ತು ಹೆಚ್ಚಿಸುವಲ್ಲಿ ಮತ್ತು ಬೆಳೆಗಾರರ ಆಧಾಯ ಹೆಚ್ಚಿಸಲು ಅನುವಾಗುತ್ತದೆ.

ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ

ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿಯನ್ನು ಭಾರತ ಸರ್ಕಾರದ ದಿನಾಂಕ:24.11.2000 ರ ಠರಾವಿನ ಪ್ರಕಾರ, ಕೇಂದ್ರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಗಿರುತ್ತದೆ. ಔಷಧಿ ಬೆಳೆಗಳಿಗೆ ಸಂಬಂಧಪಟ್ಟ ಎಲ್ಲಾ ಚಟುವಟಿಕೆಗಳ ಸಮನ್ವಯದ ಜವಾಬಾರಿ ಮಂಡಳಿಯದ್ದಾಗಿರುತ್ತದೆ. ಔಷಧಿ ಬೆಳೆಗಳ ಕುರಿತು ಕಾರ್ಯ ನೀತಿ ರೂಪಿಸುವುದು, ಪ್ರಭೇದಗಳ ಸಂರಕ್ಷಣೆಗೆ ರಣ ನೀತಿ ರೂಪಿಸುವುದು, ಕಡಿಮೆ ಖರ್ಚಿನಲ್ಲಿ ಲಾಭದಾಯಕ ಸಾಗುವಳಿ, ವೈಜ್ಞಾನಿಕ ಕೊಯ್ಲು ವಿಧಾನಗಳು, ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ವ್ಯವಸ್ಥಿತ ಮಾರುಕಟ್ಟೆ ವ್ಯವಸ್ಥೆ, ಸಂಶೋಧನೆ ಇತ್ಯಾದಿ ಚಟುವಟಿಕೆಗಳ ಅಭಿವೃದ್ಧಿಯ ಉದ್ದೇಶವನ್ನು ಮಂಡಳಿ ಹೊಂದಿರುತ್ತದೆ. ಔಷಧಿ ಬೆಳೆಗಳಿಗೆ ಸಂಬಂಧಪಟ್ಟಂತೆ ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳಾದ ಅರಣ್ಯ ಮತ್ತು ಪರಿಸರ, ಕೃಷಿ, ವಾಣಿಜ್ಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳೊಂದಿಗೆ ಹಾಗೂ ರಾಜ್ಯ/ಕೇಂದ್ರಾಡಳಿತ ಸರ್ಕಾರಗಳು/ಮಂಡಳಿಗಳು/ಸಂಸ್ಥೆಗಳೊಂದಿಗೆ ಸಮನ್ವಯಿಸುವ ಕರ್ತವ್ಯ ನಿಭಾಯಿಸುತ್ತದೆ.

**ಯೋಜನೆಯ ಉದ್ದೇಶಗಳು:**

- ಔಷಧಿ ಬೆಳೆಗಳನ್ನು ಕೃಷಿ ಪದ್ಧತಿಗಳೊಂದಿಗೆ ಸಮಗ್ರ ರೀತಿಯಲ್ಲಿ ವಿಲೀನಗೊಳಿಸಲು, ಅವುಗಳ ಸಾಗುವಳಿಗೆ ಉತ್ತೇಜನ ಒದಗಿಸುವುದರ ಮೂಲಕ, ಆಯುಷ್ ಔಷಧಿ ಪದ್ಧತಿಯ ಗುಣಮಟ್ಟ/ಸಮಗ್ರತೆ/ಪರಿಣಾಮಕತ್ವ ಶಕ್ತಿ/ಸುರಕ್ಷತೆ ಕಾಪಾಡುವುದು ಮತ್ತು ಆ ಮುಖೇನ ಬೆಳೆ ವೈವಿಧ್ಯತೆ ಹೆಚ್ಚಿಸುವುದು ಹಾಗೂ ರೈತರ ಸ್ಥಿರ ರೀತಿಯಲ್ಲಿ ಆದಾಯಗಳಿಸುವಿಕೆಗೆ ನೆರವಾಗುವುದು.
- ಉತ್ತಮ ಕೃಷಿ ಪದ್ಧತಿ ಮತ್ತು ಸಂಗ್ರಹಣಾ ಪದ್ಧತಿಗಳನ್ನು ಅಳವಡಿಸಿಕೊಂಡು ಔಷಧಿ ಬೆಳೆಗಳ ಸಾಗುವಳಿಗೆ ಒತ್ತು ನೀಡುವುದರೊಂದಿಗೆ, ಗುಣಮಟ್ಟ ಪ್ರಮಾಣೀಕತೆ ಮತ್ತು ನಿರ್ಧಿಷ್ಟ ಮಾನತೆ (Standardization) ಪಾಲಿಸುವುದು. ಆ ಮುಖೇನ ಆಯುಷ್ ಕ್ಷೇತ್ರದ ಜನಪ್ರಿಯತೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸಿ, ಔಷಧಿ ಕ್ಷೇತ್ರದ ಮೌಲ್ಯವರ್ಧಿತ ಪದಾರ್ಥ (ಗಿಡಮೂಲಿಕೆ ರಸಸಾರ, ಸಸ್ಯ ಸಂಬಂಧಿತ ರಾಸಾಯನಿಕಗಳು, ಸಸ್ಯ ಮೂಲದ ಔಷಧೀಯ ಆಹಾರ ಪದಾರ್ಥಗಳು, ಸೌಂದರ್ಯವರ್ಧಕ ಔಷಧೀಯ ಪದಾರ್ಥಗಳು ಮತ್ತು ಆಯುಷ್ ಪದಾರ್ಥಗಳು) ಗಳ ರಫ್ತು ಹೆಚ್ಚಿಸುವುದು.
- ಗೊಂಚಲು ಮಾದರಿಯಲ್ಲಿ ಔಷಧಿ ಬೆಳೆಗಳ ಸಾಗುವಳಿ ಅಭಿವೃದ್ಧಿಪಡಿಸುವುದು. ಈ ಗೊಂಚಲುಗಳಲ್ಲಿ ಕೊಯ್ಲೋತ್ತರ/ಶೇಖರಣಾ ಗೋದಾಮು/ಸಂಸ್ಕರಣಾ/ಮೌಲ್ಯವರ್ಧನೆ/ ಮಾರುಕಟ್ಟೆ ಸಂಬಂಧಿತ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸುವುದು.

➢ ಗುಣಮಟ್ಟ ನಿರ್ದಿಷ್ಠ ಮಾನತೆ, ಉತ್ತಮ ಕೃಷಿ ಪದ್ದತಿಗಳು, ಉತ್ತಮ ಶೇಖರಣಾ ಪದ್ಧತಿಗಳು ಮತ್ತು ಉತ್ತಮ ಸಂಗ್ರಹಣಾ ಪದ್ಧತಿಗಳ ದಾಖಲೀಕರಣ ಮತ್ತು ದೃಢೀಕರಣ ಪ್ರಕ್ರಿಯೆಗೆ ಉತ್ತೇಜನ ನೀಡುವುದು ಹಾಗೂ ಅನುಷ್ಠಾನಗೊಳಿಸುವುದು.
➢ ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಮಿಷನ್ ಮಾದರಿಯಲ್ಲಿ, ಸಂಶೋಧನೆ/ ಅಭಿವೃದ್ಧಿ/ಸಂಸ್ಕರಣೆ/ಮಾರುಕಟ್ಟೆ ಕ್ಷೇತ್ರಗಳ ಪಾಲುದಾರರ, ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆ/ಸಂಯೋಜಕತ್ವ ಪ್ರೇರೇಪಿಸುವುದು.

ಯೋಜನೆಯ ಕಾರ್ಯನೀತಿ **(STRATEGY)**

ಉತ್ಪಾದನೆ, ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ ಮತ್ತು ಮಾರುಕಟ್ಟೆಗಳನ್ನೊಳಗೊಂಡ ಪರಿಪೂರ್ಣ ಕಾರ್ಯನೀತಿಯನ್ನು ಮಿಷನ್ ಅಡಿ ರೂಢಿಸಿಕೊಳ್ಳಲಾಗುವುದು. ಈ ಕಾರ್ಯನೀತಿ ಸಾಧನೆಗೆ, ಗುರುತಿಸಲಾದ ಆಯ್ದು ಗೊಂಚಲುಗಳಲ್ಲಿ ಬೇಡಿಕೆಯಲ್ಲಿರುವ ಔಷಧಿ ಬೆಳೆಗಳ ಸಾಗುವಳಿಗೆ ಒತ್ತು ನೀಡಲಾಗುವುದು. ಜೊತೆಗೆ ಉತ್ತಮ ಕೃಷಿ ಪದ್ಧತಿಗಳು ಮತ್ತು ಉತ್ತಮ ಶೇಖರಣಾ ಪದ್ಧತಿಗಳನ್ನಳವಡಿಸಿಕೊಂಡು, ಉತ್ಪಾದನಾ ಚಟುವಟಿಕೆಗಳನ್ನು ಕೊಯ್ಲೋತ್ತರ ಚಟುವಟಿಕೆ (ಸಂಗ್ರಹಣಾ ಗೋದಾಮು, ಸಂಸ್ಕರಣೆ, ಗುಣಮಟ್ಟ ಪರೀಕ್ಷೆ, ದೃಢೀಕರಣ, ಮಾರುಕಟ್ಟೆ ವ್ಯವಸ್ಥೆ) ಗಳೊಂದಿಗೆ ಸಂಯೋಜನೆಗೊಳಿಸುವುದು ಹಾಗೂ ಆ ಮುಖೇನ ಆಯುಷ್ ಕ್ಷೇತ್ರದ ಬೇಡಿಕೆ ಪೂರೈಸುವುದು ಮತ್ತು ಮೌಲ್ಯವರ್ಧಿತ ಪದಾರ್ಥಗಳ ರಫ್ತು ಹೆಚ್ಚಿಸುವುದು.

➢ ಔಷಧಿ ಬೆಳೆಗಳ ಸಾಗುವಳಿಯನ್ನು ಹೆಚ್ಚಿಸುವುದರ ಮೂಲಕ, ರೈತರಿಗೆ ಇದು ಪರ್ಯಾಯ ಕೃಷಿ ಪದ್ಧತಿಯಾಗಿ ರೂಪುಗೊಳ್ಳಲು ನೆರವು ನೀಡುವುದು. ಇದಕ್ಕಾಗಿ ಉತ್ಪಾದನಾ ಚಟುವಟಿಕೆಗಳನ್ನು ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆ ಮತ್ತು ಗುಣಮಟ್ಟ ಪರೀಕ್ಷೆ ಘಟಕಗಳೊಂದಿಗೆ ಸಂಯೋಜನೆಗೊಳಿಸುವುದು. ಇದರಿಂದ ರೈತರಿಗೆ ಉತ್ತಮ ಲಾಭ ದೊರೆಯುವುದಲ್ಲದೇ ಕಚ್ಚಾ ಪದಾರ್ಥಗಳ ಪೂರೈಕೆಗೆ ಅರಣ್ಯಗಳ ಮೇಲಿನ ಅವಲಂಭನೆಯನ್ನು ಕಡಿಮೆ ಮಾಡಬಹುದು.
➢ ಔಷಧಿ ಬೆಳೆಗಳ ಸಾಗುವಳಿಯನ್ನು ಕೃಷಿ ಪದ್ಧತಿ/ತೋಟಗಾರಿಕೆ ಪದ್ಧತಿಗಳೊಂದಿಗೆ ಸಂಯೋಜಿಸುವ ಪ್ರಾಯೋಗಿತ ತಂತ್ರಜ್ಞಾನ ಹಾಗೂ ಉತ್ಪಾದನಾ ಹಂತ ಮತ್ತು ಕೊಯ್ಲೋತ್ತರ ಹಂತಗಳಲ್ಲಿ ಗುಣಮಟ್ಟ ಮತ್ತು ನಿರ್ದಿಷ್ಟ ಮಾನತೆ ಕಾಪಾಡುವ ವಿಧಾನಗಳ ಕುರಿತು ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ನಿರಂತರ ಪ್ರಚಾರ ನೀಡುವುದು. ಆ ಮುಖೇನ ಯೋಜನೆಯ ಫಲ ಹೆಚ್ಚು ಫಲಾನುಭವಿಗಳನ್ನು ತಲುಪುವಂತೆ ಮಾಡುವುದು.
➢ (a) ಸ್ವಸಹಾಯ ಗುಂಪುಗಳು/ಬೆಳೆಗಾರರ ಸಂಘಗಳು/ಸಹಕಾರಿ ಸಂಘಗಳು/ಉತ್ಪಾದಕರ ಕಂಪನಿಗಳನ್ನು ತೊಡಗಿಸಿಕೊಂಡು, ಬೆಳೆಗಾರರನ್ನು ವ್ಯಾಪಾರಿಗಳು/ತಯಾರಿಕಾದಾರರು/ ಸಂಶೋಧನೆ/ಅಭಿವೃದ್ಧಿ ಸಂಸ್ಥೆಗಳೊಂದಿಗೆ ಉಪಯುಕ್ತಕಾರಿ ಸಂಪರ್ಕ ಕಲ್ಪಿಸಿ, ಸಾಗುವಳಿ ಮತ್ತು ಸಂಸ್ಕರಣಾ ಚಟುವಟಿಕೆಗಳನ್ನು ಗುಂಪು/ಗೊಂಚಲು ಮಾದರಿಯಲ್ಲಿ ಅಭಿವೃದ್ಧಿಗೊಳಿಸುವುದು.

ಕರ್ನಾಟಕ ರಾಜ್ಯದಲ್ಲಿ, ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆಯನ್ನು 2008-09 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ (2015-16 ರಿಂದ ರಾಷ್ಟ್ರೀಯ ಆಯುಷ್ ಮಿಷನ್ ಯೋಜನೆ ಎಂದು ಬದಲಾಗಿದೆ). ಸದರಿ ಯೋಜನೆಯಡಿ ತೀರಾ ಅಳಿವಿನಂಚಿನಲ್ಲಿರುವ ಮತ್ತು ಉತ್ಪಾದನೆಯ ಪ್ರಮಾಣ ಕಡಿಮೆಯಾಗುತ್ತಿರುವ ಹಾಗೂ AYUSH ಕ್ಷೇತ್ರದಿಂದ ಬೇಡಿಕೆಯಲ್ಲಿರುವ ಔಷದೀಯ ಬೆಳೆಗಳನ್ನು ಬೆಳೆಸಲು ಉತ್ತೇಜನ ನೀಡಲಾಗುತ್ತಿದೆ. ಅವುಗಳಲ್ಲಿ ಪ್ರಮುಖವಾದ ಔಷಧೀಯ ಬೆಳೆಗಳು ಎಂದರೆ ಅಶ್ವಗಂಧ, ಶ್ರೀಗಂಧ, ರಕ್ತಚಂದನ, ತುಳಸಿ, ಬಜೆ, ಕೋಲಿಯಸ್, ಲೋಳೆಸರ, ನೆಲಬೇವು, ನೆಲ್ಲಿ, ಸಫೇದ್ ಮುಸಲಿ, ಸ್ಟೀವಿಯ ಮುಂತಾದವುದಗಳು.

**2018-19** ನೇ ಸಾಲಿನಲ್ಲಿ ರಾಷ್ಟ್ರೀಯ ಆಯುಷ್ ಮಿಷನ್ ಯೋಜನೆಯಡಿ ಔಷಧೀಯ ಬೆಳೆಗಳ ಘಟಕ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ಪತ್ರ ಸಂಖ್ಯೆ **F.No. Z-18020/01/2018-19-NMPB-II, dated: 13.02.2018** ರಲ್ಲಿ ರೂ**.149.30** ಲಕ್ಷಗಳ ಅನುದಾನವು ನಿಗಧಿಯಾಗಿದ್ದು, ಅನುದಾನ ಬಿಡುಗಡೆಯಾಗಿರುವುದಿಲ್ಲ**.**

**2019-20** ನೇ ಸಾಲಿನ ರಾಷ್ಟ್ರೀಯ ಆಯುಷ್ ಮಿಷನ್ ಯೋಜನೆಯ ಕ್ರಿಯಾ ಯೋಜನೆ

| Sl. No. | Components | Units | Eligible Subsidy/ ha/unit. | Total Target | |
|---|---|---|---|---|---|
| | | | | Phy | Fin |

| | | | | (Ha./Nos) | (Lakhs) |
|---|---|---|---|---|---|
| **A** | **NURSERY: Production of planting material** | | | | |
| **I** | **Public sector** | | | | |
| | Model Nursery (4 ha) | Nos. | 25 | 1 | 25.00 |
| | **Sub total 1** | | | **1** | **25.00** |
| **II** | Subsidy for Cultivation of Medicinal Plants (2019-20) and 2nd year maintenance of plantations of previous years | Ha | As per guidelines | 400 | 49.50 |
| | **Sub total 2** | | | **400** | **49.50** |
| **III** | **POST HARVEST MANAGEMENT** | | | 0 | 0.00 |
| | a) **Public Sector** | | | | |
| | i) Drying sheds / Storage Godowns (KAPL) | Nos. | 10.00 | 2 | 20.00 |
| | **Sub total-3** | | | **2** | **20.00** |
| **IV** | **IEC activities** | | | | |
| | Training for Farmers and Collectors about GACPs and GFCPs (Gadag, Mysuru, Udupi) | Nos. | 0.50 | 4 | 2.00 |
| | Capacity building of Departmental officers/staff on awareness, GACP and GFCP, cultivationn and onservation of Medicinal crops (Mysuru, Belagavi, Kalburgi, Bengaluru) | Nos. | 0.50 | 4 | 2.00 |
| | Growers and Buyers Meet at Biocentre, Hulimavu, Bengaluru(1 no) | Nos. | 0.50 | 1 | 0.50 |
| | Sub total-4 | | | **9** | **4.50** |
| | **Grand Total(1-4) (ha./Nos)** | | | **400 ha + 12 nos** | **100.00** |

**2019-20** ನೇ ಸಾಲಿನಲ್ಲಿ ರಾಷ್ಟ್ರೀಯ ಆಯುಷ್ ಅಭಿಯಾನದ ಅಡಿಯಲ್ಲಿ ಔಷಧೀಯ ಸಸ್ಯಗಳ ಘಟಕ ಅನುಷ್ಠಾನ **(ಎನ್.ಎ.ಎಮ್)** ಯೋಜನೆಗೆ ಲೆಕ್ಕಶೀರ್ಷಿಕೆ: **2401-00-119-4-12** ಅಡಿ ಒಟ್ಟು ರೂ.**100.00** ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

## 6. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ

## Unspent SCSP-TSPAmount as per the SCSP-TSPR Act 2013

## ಲೆಕ್ಕ ಶೀರ್ಷಿಕೆ: 2401-00-001-2-10

## ನಿಗದಿಪಡಿಸಿರುವ ಅನುದಾನ: ರೂ.328.97 ಲಕ್ಷಗಳು

| | | |
|---|---|---|
| 422 | ಪರಿಶಿಷ್ಟ ಜಾತಿ ಉಪ ಯೋಜನೆ | 310.48 |
| 423 | ಗಿರಿಜನ ಉಪ ಯೋಜನೆ | 18.49 |
| | ಒಟ್ಟು | **328.97** |

ಪೀಠಿಕೆ:

ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿವಿಧ ರಾಜ್ಯವಲಯ ಯೋಜನೆಗಳಡಿಯಲ್ಲಿ ಪರಿಶಿಷ್ಟ ಜಾತಿ/ಪಂಗಡದ ರೈತ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ. ಆದರೆ, ಕೇಂದ್ರವಲಯ ಯೋಜನೆಯಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ಪರಿಶಿಷ್ಟ ಜಾತಿ/ಪಂಗಡದ ರೈತ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ನೀಡಲು ಅನುವಾಗುವಂತೆ ಉಳಿಕೆ ಹೊಂದಾಣಿಕೆ ಅನುದಾನವನ್ನು ಸದರಿ ಯೋಜನೆಯಡಿ ನೀಡಲಾಗುವುದು. **ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳ ಕಡಿಮೆ ಆರ್ಥಿಕ ಮಟ್ಟ, ಕಡಿಮೆ ಹಿಡುವಳಿ, ಮಳೆಯಾಶ್ರಿತ ಜಮೀನು ಹೊಂದಿರುವುದು, ತೋಟಗಾರಿಕೆ ಬೆಳೆಗಳು ಸ್ವಾಭಾವಿಕವಾಗಿ ಬಹು ವಾರ್ಷಿಕ ಬೆಳೆಗಳಾಗಿದ್ದು, ಅಧಿಕ ಬಂಡವಾಳದ ಅವಶ್ಯಕತೆ ಇದೆ. ಈ ಬೆಳೆಗಳ ಉತ್ಪಾದನಾ ಇಳುವರಿಗೆ ಹೆಚ್ಚಿನ ಕಾಲವಕಾಶ ಬೇಕಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಪರಿಶಿಷ್ಟ ಜಾತಿ/ಪಂಗಡದ ಹೆಚ್ಚಿನ ರೈತರು ತೋಟಗಾರಿಕೆ ಬೆಳೆಯನ್ನು ಬೆಳೆಯಲು ಆಸಕ್ತಿ ತೋರಿಸುತ್ತಿರುವುದಿಲ್ಲ. ಆದ್ದರಿಂದ ಸದರಿ ವರ್ಗದ ರೈತರನ್ನು ಹೆಚ್ಚಿನ ಸಂಖ್ಯೆಯಲ್ಲಿ ತೋಟಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಅನುವಾಗುವಂತೆ ಶೇ.90 ರಷ್ಟು ಸಹಾಯಧನ ನೀಡಲಾಗುವುದು.**

ಉದ್ದೇಶ:

1. **ಪರಿಶಿಷ್ಟ ಜಾತಿ/ ಪಂಗಡದ ರೈತರ ಆರ್ಥಿಕ ಮಟ್ಟ ಸುಧಾರಿಸುವುದು.**
2. ಕೇಂದ್ರವಲಯ ಯೋಜನೆಯಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ಪರಿಶಿಷ್ಟ ಜಾತಿ/ಪಂಗಡದ ರೈತ ಫಲಾನುಭವಿಗಳಿಗೆ ಶೇ. 90 ರಷ್ಟು ಸಹಾಯಧನವನ್ನು ನೀಡಲು ಅನುವಾಗುವಂತೆ ಉಳಿಕೆ ಹೊಂದಾಣಿಕೆ ಅನುದಾನವನ್ನು (Matching grants) ಭರಿಸುವುದು.

ಯೋಜನಾ ವಿವರ

2019-20 **ನೇ ಸಾಲಿನಲ್ಲಿ** 2014-15 **ನೇ ಸಾಲಿನಿಂದ ಬಳಕೆಯಾಗದೆ ಉಳಿಕೆಯಾದ ಅನುದಾನವನ್ನು ಉಪಯೋಗಿಸಿಕೊಳ್ಳಲು ಅನುವಾಗುವಂತೆ** ಅನುಸೂಚಿತ ಜಾತಿಗಳ

ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ, ಕೇಂದ್ರವಲಯ ಯೋಜನೆಯಾದ ರಾಷ್ಟ್ರೀಯ ತೋಟಗಾರಿಕೆ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ಪರಿಶಿಷ್ಟ ಜಾತಿಪಂಗಡದ ರೈತ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ನೀಡಲು ಅನುವಾಗುವಂತೆ ಉಳಿಕೆ ಹೊಂದಾಣಿಕೆ ಅನುದಾನವನ್ನು (Matching grants) "ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ" ಯೋಜನೆಯಡಿ ಒದಗಿಸಲಾಗುವುದು.

**2019-20** ನೇ ಸಾಲಿಗೆ ಕಾರ್ಯಕ್ರಮವಾರು ಅನುದಾನ ಹಂಚಿಕೆ ವಿವರಗಳು:

| ಕ್ರ. ಸಂ | ಕಾರ್ಯಕ್ರಮಗಳು | ಆರ್ಥಿಕ (ರೂ. ಲಕ್ಷಗಳಲ್ಲಿ) |
|---|---|---|
| 1. | ಕೇಂದ್ರವಲಯ ಯೋಜನೆಯಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ಪರಿಶಿಷ್ಟ ಜಾತಿ **(422)** ರೈತ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ನೀಡಲು ಅನುವಾಗುವಂತೆ ಉಳಿಕೆ ಹೊಂದಾಣಿಕೆ ಅನುದಾನವನ್ನು (Matching grants) ಭರಿಸುವುದು. | 310.48 |
| 2. | ಕೇಂದ್ರವಲಯ ಯೋಜನೆಯಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ಪರಿಶಿಷ್ಟ ಪಂಗಡದ **(423)** ರೈತ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ನೀಡಲು ಅನುವಾಗುವಂತೆ ಉಳಿಕೆ ಹೊಂದಾಣಿಕೆ ಅನುದಾನವನ್ನು (Matching grants) ಭರಿಸುವುದು. | 18.49 |
| ಒಟ್ಟು | | 328.97 |

**2019-20** ನೇ ಸಾಲಿನಲ್ಲಿ ಹಿಂದೆ ಬಳಕೆಯಾಗದೆ ಉಳಿಕೆಯಾದ ಅನುದಾನವನ್ನು ಉಪಯೋಗಿಸಿಕೊಳ್ಳಲು ಅನುವಾಗುವಂತೆ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ **2013** ರಡಿ ಬಳಕೆಯಾಗದೆ ಇರುವ ಮೊತ್ತ ಯೋಜನೆಯಡಿ **(ಲೆಕ್ಕ ಶೀರ್ಷಿಕೆ: 2401-00-001-02-10)** ಒಟ್ಟು ರೂ.**328.97.00** ಲಕ್ಷಗಳನ್ನು ಒದಗಿಸಲಾಗಿದೆ.

# 7. ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ
# Assistance to Boards and Corporation
## ಲೆಕ್ಕ ಶೀರ್ಷಿಕೆ: 2401-00-108-2-52
## ನಿಗದಿಪಡಿಸಿರುವ ಅನುದಾನ: ರೂ.3000.00 ಲಕ್ಷಗಳು

| | | |
|---|---|---|
| 059 | ಇತರೆ ಖರ್ಚುಗಳು | 2000.00 |
| 103 | ಸಹಾಯಾನುದಾನ -ಸಾಮಾನ್ಯ | 1000.00 |
| | ಒಟ್ಟು | **3000.00** |

2018-19 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾದ ರಾಜ್ಯವಲಯ ಯೋಜನೆಯಾದ "ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ" ಯೋಜನೆಯನ್ನು 2019-20 ನೇ ಸಾಲಿಗೆ ಮುಂದುವರೆಸಲು ಉದ್ದೇಶಿಸಿದ್ದು, ರೂ.3000.00 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಯೋಜನೆಯಡಿ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ನಿಗಮ ಮತ್ತು ಮಂಡಳಿವಾರು ಪ್ರಸ್ತಾವನೆ ಈ ಕೆಳಕಂಡಂತಿದೆ.

I. ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ

ಮಾವು ಕರ್ನಾಟಕ ರಾಜ್ಯದಲ್ಲಿನ ಒಂದು ಮಹತ್ವಪೂರ್ಣ ಹಣ್ಣಿನ ಬೆಳೆ. ಇಡೀ ಭಾರತದಲ್ಲಿ ವ್ಯಾಪಕವಾಗಿ ಬೆಳೆಯುವ ಹಣ್ಣುಗಳಲ್ಲಿ ಮಾವಿನ ಹಣ್ಣಿಗೆ ಅಗ್ರಸ್ಥಾನ. ಮಾವಿನ ಹಣ್ಣುಗಳ ಆಕರ್ಷಕ ರೂಪ, ಸ್ವಾದಿಷ್ಟ ರುಚಿ ಹಾಗೂ ಮನಮೋಹಕ ಪರಿಮಳದ ದೆಸೆಯಿಂದಾಗಿ "ಮಾವು ಹಣ್ಣುಗಳ ರಾಜ" ಎಂದು ಕರೆಯುವುದು ವಾಡಿಕೆ.

ಕರ್ನಾಟಕ ರಾಜ್ಯದಲ್ಲಿ ಮಾವಿನ ಬೆಳೆಯನ್ನು ಸುಮಾರು 1.70 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಏರು ಹಂಗಾಮಿನಲ್ಲಿ ವಾರ್ಷಿಕ ಉತ್ಪಾದನೆಯು ಸುಮಾರು 15-16 ಲಕ್ಷ ಟನ್ ಹಾಗೂ ಇಳಿ ಹಂಗಾಮಿನಲ್ಲಿ 13-14 ಲಕ್ಷ ಟನ್‌ಗಳಷ್ಟು ಇರುತ್ತದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಮಾವು ಬೆಳೆಯನ್ನು ಬೆಳೆಯಲಾಗುತ್ತಿದ್ದು, ಮಾವು ಬೇಸಾಯಕ್ಕೆ ಒಣ ಪ್ರದೇಶವು ಅತ್ಯಂತ ಸೂಕ್ತವಾಗಿರುತ್ತದೆ. ಏರು ಹಂಗಾಮಿನಲ್ಲಿ ಸದರಿ ಉತ್ಪಾದನೆಯ ಮೌಲ್ಯವು ಸುಮಾರು 1000 ಕೋಟಿಗಳಷ್ಟಿರುತ್ತದೆ.

ಮಾವಿನ ಹಣ್ಣು ಹೆಚ್ಚು ಲಾಭ ತರುವ ಕಾರಣದಿಂದಾಗಿ ಹಾಗೂ ಸಂಸ್ಕರಣಾ ರಂಗದಲ್ಲಿ ಇದರ ಉಪಯೋಗದ ದೆಸೆಯಿಂದಾಗಿ ಮಾವಿನ ಹಣ್ಣುಗಳ ವಾಣಿಜ್ಯ ಪ್ರಾಮುಖ್ಯತೆ ಬಹುವಾಗಿ ಹೆಚ್ಚುತ್ತಲಿದೆ. ಕರ್ನಾಟಕ ರಾಜ್ಯ ಮಾವು ಬೆಳೆಗಾರರ ಹಿತದೃಷ್ಟಿಯಿಂದ ಮಾವು ಉತ್ಪಾದನೆ ಮತ್ತು ಮಾರಾಟವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆಯು ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕೃತೋಇ/160/ತೋಇವಿ/2010, ದಿನಾಂಕ: 8-6-2010 ರನ್ವಯ ಕಂಪನಿ ಕಾಯ್ದೆ 1956 ರ ಅಡಿ ಒಂದು ಸ್ವತಂತ್ರ ಕಂಪನಿಯನ್ನು ಸ್ಥಾಪಿಸಲಾಗಿರುತ್ತದೆ

ಕರ್ನಾಟಕ ರಾಜ್ಯದಲ್ಲಿ ಕಂಪನಿ ಕಾಯ್ದೆ 1956 ರ ಅಡಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ.) ಎಂಬ ಹೆಸರಿನಲ್ಲಿ ನೋಂದಣಿ ಮಾಡಿದ್ದು, ದಿನಾಂಕ:19-01-2011 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಮಾವು ಅಭಿವೃದ್ಧಿ ನಿಗಮವು ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿದ್ದು, 2010-11 ನೇ ಸಾಲಿನಿಂದ ನಿಗಮಕ್ಕೆ ಒದಗಿಸಲಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

| ವರ್ಷ | ಅನುದಾನ ನೀಡಲಾದ ಉದ್ದೇಶ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 2010-11 | ಕಾರ್ಪಸ್ ಅನುದಾನ (Initial Corpus Fund) | 511.16 |
| 2011-12 | ಕಾರ್ಪಸ್ ಅನುದಾನ | 275.00 |
| | ಅಭಿವೃದ್ಧಿ ಅನುದಾನ | 100.00 |
| 2012-13 | ಕಾರ್ಪಸ್ ಅನುದಾನ | 400.00 |
| | ಅಭಿವೃದ್ಧಿ ಅನುದಾನ | 100.00 |
| 2013-14 | ಕಾರ್ಪಸ್ ಅನುದಾನ | 250.00 |
| | ಅಭಿವೃದ್ಧಿ ಅನುದಾನ | 215.00 |
| | ಸಿಬ್ಬಂದಿ ವೇತನ ಮತ್ತುಇತರೆ ವೆಚ್ಚ | 100.00 |
| 2014-15 | ಕಾರ್ಪಸ್ ಅನುದಾನ | 164.00 |
| | ಅಭಿವೃದ್ಧಿ ಅನುದಾನ | 490.00 |
| | ಸಿಬ್ಬಂದಿ ವೇತನ ಮತ್ತು ಇತರೆ ವೆಚ್ಚ | 100.00 |

| | | |
|---|---|---|
| 2015-16 | ಕಾರ್ಪಸ್ ಅನುದಾನ | 104.00 |
| | ಅಭಿವೃದ್ಧಿ ಅನುದಾನ | 550.00 |
| | ಸಿಬ್ಬಂದಿ ವೇತನ ಮತ್ತು ಇತರೆ ವೆಚ್ಚ | 100.00 |
| 2016-17 | ಅಭಿವೃದ್ಧಿ ಅನುದಾನ | 826.00 |
| 2017-18 | ಅಭಿವೃದ್ಧಿ ಅನುದಾನ | 1231.00 |
| 2018-19 | ಅಭಿವೃದ್ಧಿ ಅನುದಾನ | 150.00 |

2019-20 ನೇ ಸಾಲಿನಲ್ಲಿ ರೂ.200.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

**ಅನುದಾನದ ಮೂಲ ಮತ್ತು ಲೆಕ್ಕ ಶೀರ್ಷಿಕೆ:**

2019-20 ನೇ ಸಾಲಿನ ವಾರ್ಷಿಕ ಆಯವ್ಯಯದ ಲೆಕ್ಕ ಶೀರ್ಷಿಕೆ:2401-00-108-2-52(ಯೋಜನೆ) ಯ ತೋಟಗಾರಿಕೆ ನಿಗಮ ಮತ್ತು ಮಂಡಳಿಗಳ ಯೋಜನೆ ಅಡಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತಕ್ಕೆ ರೂ.200.00 ಲಕ್ಷಗಳ ಅನುದಾನವನ್ನು ಪ್ರಸ್ತಾಪಿಸಲಾಗಿದೆ.

**II.** ಕರ್ನಾಟಕ ದ್ರಾಕ್ಷಾರಸ ಮಂಡಳಿ

ಕರ್ನಾಟಕ ರಾಜ್ಯವು ವಿವಿಧ ತಳಿಯ ದ್ರಾಕ್ಷಿಯನ್ನು ಬೆಳೆಯುತ್ತಿರುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಕೊಪ್ಪಳ, ಗದಗ, ಬಳ್ಳಾರಿ ಮತ್ತು ಗುಲ್ಬರ್ಗಾ ಜಿಲ್ಲೆಗಳು ರಾಜ್ಯದ ಪ್ರಮುಖ ದ್ರಾಕ್ಷಿ ಬೆಳೆಯುವ ಜಿಲ್ಲೆಗಳಾಗಿವೆ. ಉತ್ತರ ಕರ್ನಾಟಕದ ಪ್ರಗತಿಪರ ದ್ರಾಕ್ಷಿ ಬೆಳೆಗಾರರು ಉತ್ತಮ ಗುಣಮಟ್ಟದ ದ್ರಾಕ್ಷಿ ಬೆಳೆಯುತ್ತಿದ್ದು ಅದನ್ನು ಯುರೋಪ್, ರಷ್ಯ ಮತ್ತು ಮಧ್ಯಪ್ರಾಚ್ಯ ದೇಶಗಳಿಗೆ ರಫ್ತು ಮಾಡುತ್ತಿದ್ದಾರೆ.

ಕರ್ನಾಟಕದಲ್ಲಿ ದ್ರಾಕ್ಷಿ ಬೆಳೆಯನ್ನು 19764 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಅಂದಾಜು ಉತ್ಪಾದನೆಯು ಸುಮಾರು 292653 ಟನ್‌ಗಳಷ್ಟಾಗಿದೆ (2012-13 ನೇ ಸಾಲಿನ ಕರ್ನಾಟಕ ರಾಜ್ಯದ ತೋಟಗಾರಿಗೆ ಬೆಳೆಗಳ ಅಂಕಿ ಅಂಶಗಳನ್ವಯ). ರಾಜ್ಯದಲ್ಲಿ ಉತ್ಪಾದನೆಯಾಗುವ ದ್ರಾಕ್ಷಿ ಬೆಳೆಯಲ್ಲಿ ಹೆಚ್ಚಿನ ಪ್ರಮಾಣವು ಸ್ಥಳೀಯ ಮಾರುಕಟ್ಟೆಯಲ್ಲಿ ತಾಜಾ ಹಣ್ಣಿನ ರೂಪದಲ್ಲಿ ಮಾರಾಟವಾಗುತ್ತಿದ್ದು, ಸಣ್ಣ ಪ್ರಮಾಣದಲ್ಲಿ ಒಣ ದ್ರಾಕ್ಷಿಯನ್ನು ಮಾರಾಟ ಮಾಡಲಾಗುತಿದೆ. ತಾಜಾ ಹಣ್ಣುಗಳು ಅತ್ಯಂತ ವೇಗವಾಗಿ ಹಾಳಾಗುವುದರಿಂದ ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟವಾಗದಿದ್ದಲ್ಲಿ, ರೈತರಿಗೆ ಆರ್ಥಿಕ ನಷ್ಟ ಉಂಟಾಗುವ ಸಾಧ್ಯತೆಗಳಿವೆ. ದ್ರಾಕ್ಷಿ ಬೆಳೆಯನ್ನು ಬೆಳೆಯಲು ಅಧಿಕ ಬಂಡವಾಳ ಹೂಡಿಕೆಯ ಅಗತ್ಯತೆ ಇರುತ್ತದೆ. ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ದ್ರಾಕ್ಷಿ ಬೆಳೆಯ ಮೌಲ್ಯವರ್ಧನೆ ಮಾಡಿ, ಮೌಲ್ಯವರ್ಧಿತ ಉತ್ಪನ್ನಗಳನ್ನು ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲು ಉತ್ತೇಜನ ನೀಡಬೇಕಾಗಿರುತ್ತದೆ. ದ್ರಾಕ್ಷಾರಸವು ಅಂತಹ ಪ್ರಮುಖ ಉತ್ಪನ್ನಗಳಲ್ಲಿ ಒಂದಾಗಿದೆ. ಕರ್ನಾಟಕ ರಾಜ್ಯದಲ್ಲಿ ದ್ರಾಕ್ಷಾರಸ ಉತ್ಪಾದಿಸಲು ಅವಶ್ಯವಿರುವ ತಳಿಗಳನ್ನು ಬೆಳೆಯಲು ವಿಪುಲ ಅವಕಾಶಗಳಿದ್ದು, ಇಲ್ಲಿನ ಹವಾಮಾನವು ಇದಕ್ಕೆ ಪೂರಕವಾಗಿತ್ತದೆ.

ವೈನ್ ಉತ್ಪಾದನೆ ಮತ್ತು ಮಾರಾಟವನ್ನು ಪ್ರೇರೇಪಿಸಲು ಹಾಗೂ ದ್ರಾಕ್ಷಿ ಉತ್ಪಾದನೆ ಮತ್ತು ಸಂಸ್ಕರಣೆಗೆ ಸಂಪರ್ಕ ಕಲ್ಪಿಸುವ ಮೂಲಕ ದ್ರಾಕ್ಷಿ ಬೆಳೆಗಾರರು ಮಾರುಕಟ್ಟೆ ಅನಿಶ್ಚಿತತೆಯನ್ನು ಎದುರಿಸಿ ಹೆಚ್ಚಿನ ಲಾಭ ಪಡೆಯಲು ಅನುಕೂಲವಾಗುವಂತೆ "ದ್ರಾಕ್ಷಾರಸ ನೀತಿ" ಯನ್ನು ಸರ್ಕಾರದ ಆದೇಶ ಸಂ: ಕೃತೋಇ 513 ತೋಸವಿ 2005 ದಿನಾಂಕ:14/03/2007 ಅನುಷ್ಠಾನಗೊಳಿಸಲು ಪ್ರತ್ಯೇಕವಾಗಿ ಸರ್ಕಾರದ ಆದೇಶ ಸಂ: ಕೃತೋಇ 403 ತೋಇವಿ 2007 ದಿನಾಂಕ: 24/08/2007 ರಲ್ಲಿ, ದ್ರಾಕ್ಷಿ ಸಂಸ್ಕರಣಾ ಕೈಗಾರಿಕೆಗಳ, ದ್ರಾಕ್ಷಿ ಬೆಳೆಗಾರರ, ರಾಜ್ಯ ಸರ್ಕಾರ ಮತ್ತು ಸಂಶೋಧನಾ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಂತೆ ಕರ್ನಾಟಕ ದ್ರಾಕ್ಷಾರಸ ಮಂಡಳಿಯನ್ನು ಸ್ಥಾಪಿಸಲಾಗಿದೆ.

**ಕರ್ನಾಟಕ ದ್ರಾಕ್ಷಾರಸ ಮಂಡಳಿಯ ಅಭಿವೃದ್ಧಿ ಚಟುವಟಿಕೆಗಳಿಗೆ ಅನುದಾನ ಒದಗಿಸುವುದು:**

"ಕರ್ನಾಟಕ ದ್ರಾಕ್ಷಿ ಸಂಸ್ಕರಣೆ ಮತ್ತು ದ್ರಾಕ್ಷಾರಸ ನೀತಿ-**2007**" ಅನ್ನು ಕರ್ನಾಟಕ ದ್ರಾಕ್ಷಾರಸ ಮಂಡಳಿಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು ದ್ರಾಕ್ಷಾರಸ ನೀತಿಯಲ್ಲಿ ನೀಡಿರುವ ಎಲ್ಲಾ ಉದ್ದೇಶಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ದ್ರಾಕ್ಷಾರಸ ಮಂಡಳಿಗೆ ಅಧಿಕಾರ ನೀಡಲಾಗಿದೆ. ಕರ್ನಾಟಕ

ದ್ರಾಕ್ಷಾರಸ ಮಂಡಳಿಯು ತೋಟಗಾರಿಕೆ ಇಲಾಖೆಯ ಆಡಳಿತಾತ್ಮಕ ನಿಯಂತ್ರಣದಲ್ಲಿದ್ದು 2007 ರಿಂದ ಈ ಮಂಡಳಿಗೆ ಇಲಾಖೆ ವತಿಯಿಂದ ರೂ.10.00 ಕೋಟಿಗಳ ಷೇರುಧನ ಒದಗಿಸಲಾಗಿರುತ್ತದೆ.

ಕರ್ನಾಟಕ ದ್ರಾಕ್ಷಾರಸ ಮಂಡಳಿಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ತೋಟಗಾರಿಕೆ ಇಲಾಖೆ ವತಿಯಿಂದ ಅನುದಾನ ಒದಗಿಸಲಾಗಿರುತ್ತದೆ. ಇಲಾಖೆಯಿಂದ ಒದಗಿಸಲಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ವರ್ಷ | ಕಾರ್ಯಕ್ರಮಗಳು | ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 2010-11 | ವೈನ್ ಉತ್ಸವ | 25.00 |
| 2011-12 | ವೈನ್ ಉತ್ಸವ | 50.00 |
| 2012-13 | ಅಭಿವೃದ್ಧಿ ಚಟುವಟಿಕೆಗಳು | 50.00 |
| 2013-14 | ಅಭಿವೃದ್ಧಿ ಚಟುವಟಿಕೆಗಳು | 50.00 |
| 2014-15 | ಅಭಿವೃದ್ಧಿ ಚಟುವಟಿಕೆಗಳು | 200.00 |
| 2015-16 | ಅಭಿವೃದ್ಧಿ ಚಟುವಟಿಕೆಗಳು | 200.00 |
| 2016-17 | ಅಭಿವೃದ್ಧಿ ಚಟುವಟಿಕೆಗಳು | 200.00 |
| 2017-18 | ಅಭಿವೃದ್ಧಿ ಚಟುವಟಿಕೆಗಳು | 195.00 |
| 2018-19 | ಅಭಿವೃದ್ಧಿ ಚಟುವಟಿಕೆಗಳು | 350.00 |

2019-20 ನೇ ಸಾಲಿನಲ್ಲಿಯೂ "ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ" ಯೋಜನೆಯಡಿ ಈ ಕಾರ್ಯಕ್ರಮವನ್ನು ಮುಂದುವರೆಸಲು ರೂ300.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

<u>ಅನುದಾನದ ಮೂಲ ಮತ್ತು ಲೆಕ್ಕ ಶೀರ್ಷಿಕೆ:</u>

2019-20 ನೇ ಸಾಲಿನ ಆಯವ್ಯಯದಲ್ಲಿ "ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ" ಯೋಜನೆಯಡಿ "ಕರ್ನಾಟಕ ದ್ರಾಕ್ಷಾರಸ ಮಂಡಳಿ" ಅಭಿವೃದ್ಧಿ ಚಟುವಟಿಕೆಗಳಿಗೆ ಅನುದಾನ ನೀಡಲು ಲೆಕ್ಕ ಶೀರ್ಷಿಕೆ 2401-00-108-2-52 (ಯೋಜನೆ) ಅಡಿ ರೂ.300.00 ಲಕ್ಷಗಳ ಅನುದಾನ ನಿಗದಿಪಡಿಸಿದೆ.

### III. ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾ ಮಂಡಳ (ನಿ) (ಕೆ.ಹೆಚ್.ಎಫ್)

ಆಧುನಿಕ ಬೇಸಾಯ ಪದ್ಧತಿಯ ಪಾಲನೆಯಿಂದಾಗಿ ರಾಜ್ಯದ ತೋಟಗಾರಿಕೆ ಉತ್ಪಾದನೆಯು ಹೆಚ್ಚುತ್ತಿದೆ. ಉತ್ಪಾದನೆಯಾಗುವ ಹಣ್ಣು ಮತ್ತು ತರಕಾರಿಗಳ ಮಾರಾಟಕ್ಕಾಗಿ ಸಮಗ್ರ ಮಾರುಕಟ್ಟೆ ಸೌಲಭ್ಯಗಳ ಅವಶ್ಯಕತೆ ಇರುತ್ತದೆ. 2019-20 ನೇ ಸಾಲಿನ ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ ಯೋಜನೆಯಡಿ ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾ ಮಂಡಳ (ನಿ), ಬೆಂಗಳೂರು ರವರಿಗೆ ಆಡಳಿತಾತ್ಮಕ ವೆಚ್ಚ ಹಾಗೂ ಹಣ್ಣು ಮತ್ತು ತರಕಾರಿಗಳ ಮಾರಾಟಕ್ಕಾಗಿ ಸಮಗ್ರ ಮಾರುಕಟ್ಟೆ ಸೌಲಭ್ಯಗಳ ಕಾರ್ಯಕ್ರಮಗಳಿಗೆ ರೂ200.00 ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ. 2019-20 ನೇ ಸಾಲಿಗೆ ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯ ಯೋಜನೆಯಡಿ ಅಧಿಕಾರಿ/ಸಿಬ್ಬಂದಿಗಳ ವೇತನ ಮತ್ತು ಅನುಷ್ಠಾನಗೊಳಿಸಲಾಗುವ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಿಗದಿಪಡಿಸಲು ಮಂಜೂರು ಮಾಡಲು ಪ್ರಸ್ತಾಪಿಸಲಾಗಿದೆ.

<u>ಅನುದಾನದ ಮೂಲ ಮತ್ತು ಲೆಕ್ಕ ಶೀರ್ಷಿಕೆ:</u>

2019-20 ನೇ ಸಾಲಿನ ಆಯವ್ಯಯದಲ್ಲಿ "ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ" ಯೋಜನೆಯಡಿ "ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾ ಮಂಡಳ **(ನಿ) (ಕೆ.ಹೆಚ್.ಎಫ್)"** ದ ಆಡಳಿತ ವೆಚ್ಚ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಅನುದಾನ ನೀಡಲು ಲೆಕ್ಕಶೀರ್ಷಿಕೆ 2401-00-108-2-52 (ಯೋಜನೆ) ಅಡಿ ರೂ.200.00 ಲಕ್ಷಗಳ ಅನುದಾನ ನಿಗದಿಪಡಿಸಿದೆ.

### IV. ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ

ಕರ್ನಾಟಕ ರಾಜ್ಯವು ಅನಾದಿ ಕಾಲದಿಂದಲೂ ಸಾಂಬಾರು ಬೆಳೆಗಳಿಗೆ ಹೆಸರುವಾಸಿಯಾಗಿದೆ. ರಾಜ್ಯದಲ್ಲಿ ಮುಖ್ಯವಾಗಿ ಒಣಮೆಣಸಿನಕಾಯಿ, ಕಾಳುಮೆಣಸು, ಹುಣಸೆ, ಶುಂಠಿ, ಅರಿಷಿಣ, ಕೊತ್ತಂಬರಿ, ಬೆಳ್ಳುಳ್ಳಿ, ಮೆಂತ್ಯೆ, ಜೀರಿಗೆ, ಲವಂಗ, ಜಾಯಿಕಾಯಿ, ದಾಲ್ಚಿನ್ನಿ, ವೆನಿಲ್ಲಾ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಈ ಎಲ್ಲಾ ಬೆಳೆಗಳಿಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಉತ್ತಮ ಬೇಡಿಕೆಯಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಈ ಬೆಳೆಗಳನ್ನು ಸುಮಾರು 2.21 ಲಕ್ಷ ಹೆ. ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು ಸುಮಾರು 7.07 ಲಕ್ಷ ಟನ್ ಗಳಷ್ಟು ಉತ್ಪಾದನೆ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಸಾಂಬಾರು ಬೆಳೆಗಳ ಪ್ರದೇಶ ವಿಸ್ತರಣೆ, ಉತ್ಪಾದನೆಯ ಹೆಚ್ಚಳ, ಉತ್ಪಾದಕತೆಯಲ್ಲಿ ಅಭಿವೃದ್ಧಿ, ಗುಣಮಟ್ಟದ ಉತ್ಪಾದನೆ, ಮಾರುಕಟ್ಟೆ ಮೂಲಸೌಕರ್ಯಗಳು ಹಾಗೂ ಮೌಲ್ಯವರ್ಧನೆಗೆ ಉತ್ತೇಜನ ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲು ಹೆಚ್ಚಿನ ಗಮನ ಹರಿಸುವ ಅವಶ್ಯಕತೆ ಇರುವ ಹಿನ್ನಲೆಯಲ್ಲಿ ರೈತರಿಗೆ ಸಾಂಬಾರು ಬೆಳೆಗಳ ಉತ್ಪಾದನೆಯ ಆಧುನಿಕ ಮಾಹಿತಿಯನ್ನು ನೀಡಿ, ಅವರ ಕುಶಲತೆಯನ್ನು ವೃದ್ಧಿಪಡಿಸುವ ಮೂಲಕ ಉತ್ತಮ ಆದಾಯವನ್ನು ಗಳಿಸಬಹುದಾಗಿರುತ್ತದೆ.

ಸಾಂಬಾರು ಪದಾರ್ಥಗಳ ಮೌಲ್ಯವರ್ಧನೆಗೆ ವಿಪುಲ ಅವಕಾಶಗಳಿದ್ದು, ಈ ಸಾಮರ್ಥವನ್ನು ಸಂಪೂರ್ಣವಾಗಿ ಬಳಸಿ ಹೆಚ್ಚಿನ ಲಾಭ ಪಡೆಯಲು ಒಂದು ಪ್ರತ್ಯೇಕ ಸಂಸ್ಥೆ/ಮಂಡಳಿಯನ್ನು ಸ್ಥಾಪಿಸುವ ಹಿನ್ನಲೆಯಲ್ಲಿ 2013-14 ನೇ ಸಾಲಿನಲ್ಲಿ ದಿ:29-3-2014 ರಂದು ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿಯನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಯಿತು. ಇದರ ಸ್ಥಾಪನೆಯಿಂದ ಸಾಂಬಾರು ಬೆಳೆಗಳ ಉತ್ಪಾದಕರ ಮಾರುಕಟ್ಟೆ ಸಮಸ್ಯೆಗಳ ಬಗ್ಗೆ ವಿಶೇಷ ಗಮನಹರಿಸಲು ಸಾಧ್ಯವಾಗುತ್ತದೆ.

**<u>ಅನುದಾನದ ಮೂಲ ಮತ್ತು ಲೆಕ್ಕ ಶೀರ್ಷಿಕೆ:</u>**

2019-20 ನೇ ಸಾಲಿನ ಆಯವ್ಯಯದಲ್ಲಿ "ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ" ಯೋಜನೆಯಡಿ "<u>ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ</u>" ಅಭಿವೃದ್ಧಿಚಟುವಟಿಕೆಗಳಿಗೆ ಅನುದಾನ ನೀಡಲು ಲೆಕ್ಕ ಶೀರ್ಷಿಕೆ 2401-00-108-2-52 (ಯೋಜನೆ) ಅಡಿ ರೂ.200.00 ಲಕ್ಷಗಳ ಅನುದಾನ ನಿಗದಿಪಡಿಸಿದೆ.

**<u>V. ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ</u>**

ಕರ್ನಾಟಕ ರಾಜ್ಯದಲ್ಲಿ ಲಿಂಬೆಯನ್ನೊಳಗೊಂಡಂತೆ ಕಿತ್ತಳೆ ಹಾಗೂ ಮೋಸಂಬಿ ಬೆಳೆಗಳಲ್ಲಿ ವಿವಿಧ ಸುಧಾರಿತ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ಪಾದನೆ ಮತ್ತು ವ್ಯಾಪಾರದ ಉತ್ತೇಜನವನ್ನು ಸರಳೀಕರಿಸುವುದು, ಸಂಬಂಧಪಟ್ಟ ವಿವಿಧ ಸಂಸ್ಥೆಗಳ ಸಹಕಾರ ಪಡೆಯುವುದರ ಮೂಲಕ ಬೆಳೆಗಾರರು ಮತ್ತು ಸಂಸ್ಕರಣಾದಾರರ ಒಳಿತಿಗಾಗಿ ಶ್ರಮಿಸುವುದು, ಸ್ಥಳೀಯ ಹಾಗೂ ರಫ್ತು ಮಾರುಕಟ್ಟೆಯನ್ನು ಉತ್ತೇಜಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತೋಟಗಾರಿಕೆ ಇಲಾಖೆಯಿಂದ ಅನುದಾನವನ್ನು ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿಗೆ ನೀಡಲಾಗುವುದು.

ಕರ್ನಾಟಕ ರಾಜ್ಯ ಲಿಂಬೆ ಬೆಳೆಗಾರರ ಹಿತದೃಷ್ಠಿಯಿಂದ ಲಿಂಬೆ ಉತ್ಪಾದನೆ ಮತ್ತು ಮಾರಾಟವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ: ತೋಇ 146 ತೋಸವಿ 2016, ಬೆಂಗಳೂರು, ದಿನಾಂಕ 15.02.2017 ರನ್ವಯ “ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ” ಗೆ ಮಂಜೂರಾತಿ ದೊರಕಿರುತ್ತದೆ.

**<u>ಅನುದಾನದ ಮೂಲ ಮತ್ತು ಲೆಕ್ಕ ಶೀರ್ಷಿಕೆ:</u>**

2019-20 ನೇ ಸಾಲಿನ ಆಯವ್ಯಯದಲ್ಲಿ "ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ" ಯೋಜನೆಯಡಿ " ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ " ಅಭಿವೃದ್ಧಿ ಚಟುವಟಿಕೆಗಳಿಗೆ ಅನುದಾನ ನೀಡಲು ಲೆಕ್ಕ ಶೀರ್ಷಿಕೆ 2401-00-108-2-52 (ಯೋಜನೆ) ಅಡಿ ರೂ.100.00 ಲಕ್ಷಗಳ ಅನುದಾನ ನಿಗದಿಪಡಿಸಿದೆ.

ಘೋಷ್ವಾರೆ **(Rs. In Lakh)**

| **Sl. No.** | ನಿಗಮ/ ಮಂಡಳಿ | ನಿಗದಿ ಪಡಿಸಲಾದ ಅನುದಾನ |
|---|---|---|
| **1.** | ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ | **200.00** |
| **2.** | ಕರ್ನಾಟಕ ದ್ರಾಕ್ಷಾರಸ ಮಂಡಳಿ | **300.00** |
| **3.** | ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾ ಮಂಡಳ (ನಿ) (ಕೆ.ಹೆಚ್.ಎಫ್) | **200.00** |
| **4.** | ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ | **200.00** |
| **5.** | ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ | **100.00** |
| | ಒಟ್ಟು | **1000.00** |

ಮೇಲ್ಕಂಡ ಕಾರ್ಯಕ್ರಮಗಳಿಗೆ ರೂ.**1000.00** ಲಕ್ಷಗಳ ಅನುದಾನವನ್ನು ನಿಗದಿಪಡಿಸಿದೆ. ರೂ.**2000.00** ಲಕ್ಷಗಳ ಅನುದಾನವನ್ನು **2019-20** ನೇ ಸಾಲಿನ ಆಯವ್ಯಯ ಕಂಡಿಕೆ **66** ರಲ್ಲಿ ಘೋಷಿಸಿರುವ ಕಾರ್ಯಕ್ರಮಕ್ಕೆ ನಿಗದಿಪಡಿಸಲಾಗಿದ್ದು ಪ್ರತ್ಯೇಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯತಕ್ಕದ್ದು.

## 8. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ
## Comprehensive Horticulture Development
## [ಲೆಕ್ಕ ಶೀರ್ಷಿಕೆ:2401-00-111-0-08]
## ನಿಗದಿಪಡಿಸಿದ ಅನುದಾನ : ರೂ.13000.00 ಲಕ್ಷಗಳು

| | | |
|---|---|---|
| 059 | ಇತರೆ ಖರ್ಚುಗಳು | 9235.00 |
| 133 | ವಿಶೇಷ ಅಭಿವೃದ್ಧಿ ಯೋಜನೆ | 491.00 |
| 422 | ಪರಿಶಿಷ್ಟ ಜಾತಿ ಉಪ ಯೋಜನೆ | 2463.00 |
| 423 | ಗಿರಿಜನ ಉಪ ಯೋಜನೆ | 811.00 |
| | ಒಟ್ಟು | **13000.00** |

ಪೀಠಿಕೆ **:**

ಕರ್ನಾಟಕ ರಾಜ್ಯವು ತೋಟಗಾರಿಕೆ ಅಭಿವೃದ್ಧಿ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಹಾದಿಯಲ್ಲಿ ಕೆಲವು ಕುಂದು ಕೊರತೆಗಳಿವೆ. ಈ ಹಿನ್ನೆಲೆಯಲ್ಲಿ ಉತ್ಪಾದನಾ ವಲಯದಲ್ಲಿ ನಿಖರ ಬೇಸಾಯದ ತಂತ್ರಜ್ಞಾನ ಹಾಗೂ ವೈಜ್ಞಾನಿಕ ಹಾಗೂ ಪರಿಣಾಮಕಾರಿಯಾದ ನೀರಿನ ನಿರ್ವಹಣೆ, ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ, ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆ, ಮಾರುಕಟ್ಟೆ ಮತ್ತು ರಫ್ತು ನಿರ್ವಹಣೆ ಮುಂತಾದ ಕ್ಷೇತ್ರದಲ್ಲಿ ಸುಧಾರಣೆಯ ಅಗತ್ಯವಿರುತ್ತದೆ ಇದನ್ನು ಸಾಧಿಸಲು "ಸಮಗ್ರ ಅಭಿವೃದ್ಧಿ" ಪರಿಕಲ್ಪನೆಯು ಒಂದು ಪ್ರಮುಖ ಸಾಧನವಾಗಿದ್ದು ತೋಟಗಾರಿಕೆ ವಲಯದಲ್ಲಿ ಪ್ರಸ್ತುತ ಈ ಪರಿಕಲ್ಪನೆಯ ಅಳವಡಿಕೆ ಅಗತ್ಯತೆ ಇರುತ್ತದೆ. ಆದ್ದರಿಂದ, ರಾಜ್ಯದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯನ್ನು 2012-13 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ತೋಟಗಾರಿಕೆ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಗಾಗಿ ರೂ.**13000.00** ಲಕ್ಷಗಳ ಅನುದಾನ ನಿಗದಿಪಡಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, 2019-20 ನೇ ಸಾಲಿಗೆ "ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ" ಲೆಕ್ಕಶೀರ್ಷಿಕೆ**:2401-00-111-0-08** ಅಡಿಯಲ್ಲಿ ರೂ.**13000.00** ಲಕ್ಷಗಳಿಗೆ 15 ಉಪ-ಯೋಜನೆ (Sub-Schems) ಗಳಿಗೆ ಈ ಕೆಳಕಂಡಂತೆ ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ

**(ರೂ.ಲಕ್ಷಗಳಲ್ಲಿ)**

| ಕ್ರ.ಸಂ | ಉಪ-ಯೋಜನೆಗಳು | ಒಟ್ಟು ಅನುದಾನ |
|---|---|---|
| 1. | ಸಮಗ್ರ ತೋಟಗಾರಿಕೆ ಅಭಿವೃದ್ಧಿ | 6976.00 |
| 2. | ಆಲೂಗಡ್ಡೆ ವಿಶೇಷ ಪ್ಯಾಕೇಜ್ | 450.00 |
| 3. | ತೋಟಗಾರಿಕೆ ಗಣತಿ/ಮೂಲಧಾರ ಸಮೀಕ್ಷೆ (Horticulture census) | 50.00 |
| 4. | ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ | 100.00 |
| 5. | ಕೇಂದ್ರ ಪುರಸ್ಕೃತ ಯೋಜನೆ (NHM & RKVY Drip)ಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರವರೆಗೆ ಸಹಾಯಧನ ನೀಡಲು ಹೊಂದಾಣಿಕೆ ಮೊತ್ತವನ್ನು ನೀಡುವುದು. | 1574.00 |
| 6. | ತಾರಸಿ ತೋಟಗಳ ಅಭಿವೃದ್ಧಿ ಮತ್ತು ಹೈಡ್ರೋಪೋನಿಕ್ಸ್. | 100.00 |
| 7. | ತೋಟಗಾರಿಕಾ ವಿಸ್ತರಣೆ | 500.00 |
| 8. | ಹೂ ಕೃಷಿಗೆ ಉತ್ತೇಜನ | 250.00 |
| 9. | ರೈತ ಉತ್ಪಾದಕರ ಸಂಸ್ಥೆಗಳಿಗೆ (FPO) ಸಹಾಯಧನ | 1000.00 |
| 10. | ಉತ್ಕೃಷ್ಟ ಕೇಂದ್ರಗಳಲ್ಲಿ ಪ್ರಾತ್ಯಕ್ಷತೆ, ನಿರ್ವಹಣೆ ಹಾಗೂ ತರಬೇತಿ ಕಾರ್ಯಕ್ರಮ | 100.00 |
| 11. | ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ ಸ್ವಯಂಚಾಲಿತ ಯಾಂತ್ರೀಕರಣ (Automation) | 100.00 |
| 12. | ಗೇರು ಪ್ರದೇಶ ವಿಸ್ತರಣೆ | 650.00 |
| 13. | ನೀರಿನ ಟ್ಯಾಂಕರ್ ಗಳ ಖರೀದಿಸಲು ಸಹಾಯಧನ | 1000.00 |

| | | |
|---|---|---|
| 14. | ಅಣಬೆ ಬೀಜ ಮತ್ತು ಅಣಬೆ ಉತ್ಪಾದನಾ ಘಟಕಗಳಿಗೆ ಸಹಾಯಧನ. | 100.00 |
| 15. | ಅಪ್ರಧಾನ ಹಾಗೂ ಅಪರೂಪದ (ಎಕ್ಸಾಟಿಕ್) ಹಣ್ಣುಗಳ ಉತ್ತೇಜನ | 50.00 |
| | ಒಟ್ಟು | **13000.00** |

ಈ ಪ್ರಸ್ತಾವನೆಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಮೇಲಿನ ಎಲ್ಲಾ ಉಪ-ಯೋಜನೆಗಳ ಅಗತ್ಯತೆಯನ್ವಯ ಆಂತರಿಕ ಬದಲಾವಣೆಗಳನ್ನು ಮಾಡಿಕೊಳ್ಳಲು ತೋಟಗಾರಿಕೆ ನಿರ್ದೇಶಕರಿಗೆ ಅನುಮತಿ ನೀಡಿದೆ.

**1.**<u>ಸಮಗ್ರ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳು:</u>

ರಾಜ್ಯದಲ್ಲಿನ ತೋಟಗಾರಿಕೆಯ ಅಭಿವೃದ್ಧಿ ಸರಪಳಿಯಲ್ಲಿ ಹಲವಾರು ಕುಂದು ಕೊರತೆಗಳಿವೆ. ಮುಖ್ಯವಾಗಿ ಉತ್ಪಾದನಾ ರಂಗದಲ್ಲಿ ನಿಖರ ಬೇಸಾಯ ಕ್ರಮಗಳ ಅಳವಡಿಕೆ, ನೀರಿನ ವೈಜ್ಞಾನಿಕ ಮತ್ತು ಪರಿಣಾಮಕಾರಿ ನಿರ್ವಹಣೆ, ತರಬೇತಿ, ಕೊಯ್ಲೋತ್ತರ ನಿರ್ವಹಣೆ, ಯಾಂತ್ರೀಕರಣ, ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆ ಮತ್ತು ರಫ್ತು ನಿರ್ವಹಣೆಯಲ್ಲಿ ಹೆಚ್ಚಿನ ಬದಲಾವಣೆಗಳನ್ನು ತರುವುದರ ಅಗತ್ಯತೆ ಇದೆ. ಇದನ್ನು ಸಾಧಿಸಲು ರಾಜ್ಯದಲ್ಲಿ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ

<u>ಯೋಜನೆಯ ಉದ್ದೇಶಗಳು:</u>

1. ರಾಜ್ಯದಲ್ಲಿನ ತೋಟಗಾರಿಕೆಯನ್ನು ಸಮಗ್ರವಾಗಿ ವೈಜ್ಞಾನಿಕ ಅಭಿವೃದ್ಧಿ ತಳಹದಿಯ ಮೇಲೆ ನೆಲೆಗೊಳಿಸಿ, ತೋಟಗಾರಿಕೆ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು.
2. ತೋಟಗಾರಿಕೆ ಉತ್ಪನ್ನಗಳ ಗುಣಮಟ್ಟವನ್ನು ವರ್ಧಿಸಿ ಕೊಯ್ಲೋತ್ತರ ಸರಪಳಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸುವುದು.
3. ತೋಟಗಾರಿಕೆ ಉತ್ಪನ್ನಗಳ ಮಾರುಕಟ್ಟೆಯನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ವ್ಯವಸ್ಥೆಗೊಳಿಸುವುದು.
4. ತೋಟಗಾರಿಕೆ ಉತ್ಪನ್ನಗಳ ಹಾಳಾಗುವಿಕೆಯನ್ನು ಕಡಿಮೆ ಮಾಡಿ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಕ್ರಮಗಳನ್ನು ಅಳವಡಿಸಲು ಪ್ರೋತ್ಸಾಹಿಸುವುದು
5. ಅಂತಿಮವಾಗಿ ತೋಟಗಾರಿಕೆಯನ್ನು ಅವಲಂಬಿಸಿರುವ ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಬಲಪಡಿಸುವುದು.

ಸದರಿ ಯೋಜನೆಯಡಿ ಈ ಕೆಳಕಂಡ ಘಟಕ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು

**1.** <u>ತೋಟಗಾರಿಕೆ ಪ್ರದೇಶ ಅಭಿವೃದ್ಧಿ ಹಾಗೂ ನಿರ್ವಹಣೆ :</u>

ತಾಲ್ಲೂಕುಗಳ ಅಗತ್ಯತೆ ಮತ್ತು ಭೌಗೋಳಿಕ ಸನ್ನಿವೇಶಗಳಿಗೆ ಅನುಗುಣವಾಗಿ ಆಯ್ಕೆಯಾದ ಗುಚ್ಛಗಳಿಗೆ ಬೆಳೆಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆಯಾದ ತೋಟಗಾರಿಕೆ ಬೆಳೆಗಳನ್ನು ನಿಗದಿಗೊಳಿಸಿದ ಗುಚ್ಛಗಳಲ್ಲಿ ಭೌಗೋಳಿಕ ಮತ್ತು ಕೃಷಿ ಆಧಾರಿತ ಹವಾಗುಣಕ್ಕನುಸಾರವಾಗಿ ಬೆಳೆಯಲು ಉತ್ತೇಜನ ನೀಡಲಾಗುವುದು. ಆ ಪ್ರದೇಶದ ಬೆಳೆಗಾರರಿಗೆ ಸೂಕ್ತ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಇರುವ ಇಚ್ಛಾಶಕ್ತಿ, ಮಾರುಕಟ್ಟೆ ಸಾಮಿಪ್ಯ ಹಾಗೂ ಗುಚ್ಛಗಳ ಅಭಿವೃದ್ಧಿ ಸಾಮರ್ಥ್ಯ ಇತ್ಯಾದಿ ಅಂಶಗಳನ್ನು ಆಧರಿಸಿ ಗುಚ್ಛಗಳನ್ನು ಆಯ್ಕೆ ಮಾಡಲಾಗುತ್ತದೆ.

ಆಯ್ಕೆಯಾದ ಗುಚ್ಛ ಪರದೇಶಗಳಲ್ಲಿ ಬಹುವಾರ್ಷಿಕ ಪ್ರಮುಖ ಹಣ್ಣಿನ ಬೆಳೆಗಳಾದ ಮಾವು, ಸಪೋಟ, ಸೀಬೆ, ನಿಂಬೆ ಜಾತಿಯ ಹಣ್ಣುಗಳು, ಅನಾನಸ್, ಪಪ್ಪಾಯ, ಬಾಳೆ, ಇತ್ಯಾದಿ ಹಾಗೂ ಭೌಗೋಳಿಕವಾಗಿ ಗುರುತಿಸಲ್ಪಟ್ಟ ಬೆಳೆಗಳಾದ (G.I.Crops) ಮೈಸೂರು ಮಲ್ಲಿಗೆ, ಮೈಸೂರು ವೀಳ್ಯದೆಲೆ, ನಂಜನಗೂಡು ರಸಬಾಳೆ, ಹಡಗಲಿ ಮಲ್ಲಿಗೆ, ಅಪ್ಪೆಮಿಡಿ ಮಾವು, ಕಮಲಾಪುರ ಕೆಂಪುಬಾಳೆ, ಉಡುಪಿ ಮಲ್ಲಿಗೆ, ಮಟ್ಟುಗುಳ್ಳ ಬದನೆ, ಕೊಡಗು ಕಿತ್ತಲೆ, ಗುಲಾಬಿ ಈರುಳ್ಳಿ (Rose Onion), ಬೆಂಗಳೂರು ನೀಲಿದ್ರಾಕ್ಷಿ, ದೇವನಹಳ್ಳಿ ಚಕ್ಕೋತ ಇತ್ಯಾದಿ ಮತ್ತು ಹೊರಾವರಣದಲ್ಲಿ ಸಾಗುವಳಿ (Open Cultivation) ಮಾಡಲ್ಪಡುವ ತರಕಾರಿ, ಹೂವಿನ ಬೆಳೆಗಳು, ತಾಳೆ ತೋಟದಲ್ಲಿ ಅಂತರ ಬೆಳೆಯನ್ನಾಗಿ ಬಾಳೆ ಮತ್ತು ಕಾಳುಮೆಣಸು ಇತ್ಯಾದಿ ಬೆಳೆಗಳಿಗೆ ಸಹಾಯಧನ ನೀಡಲಾಗುವುದು. 2016-17, 2017-18 ಹಾಗೂ 2018-19 ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಿದ ತೋಟಗಾರಿಕೆ ಬೆಳೆಗಳ ನಿರ್ವಹಣೆ ಹಾಗೂ 2019-20 ನೇ ಸಾಲಿನಲ್ಲಿ ವಿವಿಧ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ

ಈಗಾಗಲೇ ನೋಂದಾಯಿತವಾಗಿರುವ, ಹೊಸದಾಗಿ ಸ್ಥಾಪಿಸುವ ರೈತ ಉತ್ಪಾದಕರ ಸಂಸ್ಥೆಗಳ ಅಗತ್ಯತೆ ಹಾಗೂ ಇತರೆ ಪ್ರದೇಶಗಳಲ್ಲಿ ಬೇಡಿಕೆಯ ಅನುಸಾರ ಗುಚ್ಛ ಗ್ರಾಮಗಳನ್ನು ಆಯ್ಕೆ ಮಾಡಲಾಗುವುದು. ಪ್ರತಿ

ಗುಚ್ಛ ಗ್ರಾಮದಲ್ಲಿ ಆಯ್ಕೆಯಾದ ತೋಟಗಾರಿಕೆ ಬೆಳೆಗಳನ್ನು ಕನಿಷ್ಠ 5 ಹೆಕ್ಟೇರ್ ನಿಂದ ಗರಿಷ್ಠ 40 ಹೆಕ್ಟೇರ್ ವರೆಗೆ ಬೆಳೆಯಬಹುದಾಗಿದೆ. ಸದರಿ ಕಾರ್ಯಕ್ರಮದಡಿ ಪ್ರತಿ ಫಲಾನುಭವಿಗೆ ಕನಿಷ್ಠ ½ ಎಕರೆ (0.20 ಹೆ.) ಇಂದ ಗರಿಷ್ಠ 5 ಎಕರೆ (2.0 ಹೆ.) ವರೆಗೆ ಸಹಾಯಧನ ನೀಡಬಹುದಾಗಿದೆ.

ಆಯ್ಕೆಯಾದ ಅರ್ಹ ರೈತ ಫಲಾನುಭವಿಗಳಿಗೆ 2019-20 ನೇ ಸಾಲಿನ ಬೆಳೆವಾರು ಇಲಾಖೆಯ cost norms ಮಾರ್ಗಸೂಚಿಯಂತೆ ಸಹಾಯಧನವನ್ನು ಪ್ರತಿ ಘಟಕದ ಗರಿಷ್ಠ ಮೊತ್ತಕ್ಕೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತ ಫಲಾನುಭವಿಗಳಿಗೆ ಶೇ.**90** ರಷ್ಟು, ಸಣ್ಣ ಮತ್ತು ಅತೀ ಸಣ್ಣ ರೈತ ಫಲಾನುಭವಿಗಳಿಗೆ ಹಾಗೂ ಸಾಮಾನ್ಯ/ಇತರೆ ರೈತ ಫಲಾನುಭವಿಗಳಿಗೆ ಶೇ.**50** ರಷ್ಟು ಸಹಾಯಧನ ನೀಡಲಾಗುವುದು.

**2.** ಮಳೆ ನೀರು ಕೊಯ್ಲು/ನೀರು ಸಂಗ್ರಹಣ ಸ್ಥಾವರಗಳ ನಿರ್ಮಾಣ:

ರೈತರ ಕ್ಷೇತ್ರದಲ್ಲಿ/ಬೆಳೆ ಗುಚ್ಛಗಳಲ್ಲಿ ಮಳೆಗಾಲದಲ್ಲಿ ನೀರನ್ನು ಸಂಗ್ರಹಿಸಿ ಮತ್ತು ಶೇಖರಿಸಿಕೊಂಡು ಅದೇ ನೀರನ್ನು ಬೆಳೆಗಳ ಬೆಳವಣಿಗೆಗಾಗಿ ಸಂದಿಗ್ಧ ಪರಿಸ್ಥಿತಿಯಲ್ಲಿ ಬಳಸಿಕೊಳ್ಳಲು ಹಾಗೂ ಜಮೀನಿನಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಅನುವಾಗುವಂತೆ ಮಳೆ ನೀರು ಕೊಯ್ಲು ಸ್ಥಾವರಗಳನ್ನು ನಿರ್ಮಾಣ ಮಾಡಲು ಕಾರ್ಯಕ್ರಮ ರೂಪಿಸಲಾಗಿದೆ **2019-20** ನೇ ಸಾಲಿಗೆ **MIDH** ಮಾರ್ಗಸೂಚಿಯನ್ವಯ ಸಹಾಯಧನ ನೀಡಲಾಗುವುದು.

**3.**ಕೊಯ್ಲೋತ್ತರ ನಿರ್ವಹಣೆ:

ಗುಚ್ಛ ಗ್ರಾಮದಲ್ಲಿ ಬೆಳೆಯುವ ತೋಟಗಾರಿಕೆ ಬೆಳೆಗಳ ಕೊಯ್ಲೋತ್ತರ ನಿರ್ವಹಣೆಗಾಗಿ ರೈತರಿಗೆ ಪ್ಯಾಕ್ ಹೌಸ್ ನಿರ್ಮಾಣ ಮಾಡಿಕೊಳ್ಳಲು ಈರುಳ್ಳಿ ಸಂಗ್ರಹಣ ಘಟಕ ನಿರ್ಮಾಣ ಮಾಡಲು ಹಾಗೂ ತೋಟಗಾರಿಕೆ ಉತ್ಪನ್ನಗಳನ್ನು ಸೂಕ್ತ ರೀತಿಯಲ್ಲಿ ಮಾರುಕಟ್ಟೆಗೆ ಸಾಗಿಸಲು ಅನುವಾಗುವಂತೆ ಪ್ಲಾಸ್ಟಿಕ್ ಕ್ರೇಟ್ಸ್ ಗಳನ್ನು ಖರೀದಿಸಲು ಸಹಾಯಧನ ನೀಡಲಾಗುವುದು.

**4.**ತರಬೇತಿ ಕಾರ್ಯಕ್ರಮ:

ಗುಚ್ಛ ಗ್ರಾಮದಲ್ಲಿನ ರೈತರಿಗೆ, ರೈತ ಅನುವುಗಾರರಿಗೆ ಹಾಗೂ ಇಲಾಖಾ ಅಧಿಕಾರಿಗಳಿಗೆ ವಿವಿಧ ತೋಟಗಾರಿಕೆ ಬೆಳೆಗಳ ಹೊಸ ವೈಜ್ಞಾನಿಕ ತಾಂತ್ರಿಕತೆಯ ಮಾಹಿತಿಯನ್ನು ನೀಡುವುದು.

**5.**ಗುತ್ತಿಗೆ ಆಧಾರದ ಮೇಲೆ ಸಂಪನ್ಮೂಲ ವ್ಯಕ್ತಿಗಳ ಸೇವೆ ಪಡೆಯುವುದು :

ರೈತ ಅನುವುಗಾರರ ಸೇವೆಯನ್ನು ಆಯಾ ತೋಟಗಾರಿಕೆ ಪ್ರದೇಶದ ಸಾಮರ್ಥಕ್ಕೆ ಅನುಗುಣವಾಗಿ ಗುರುತಿಸಿದ ಹೋಬಳಿಗಳಿಗೆ ಅನುವುಗಾರರ ಸಂಖ್ಯೆ ಕನಿಷ್ಠ ಒಬ್ಬ ರಿಂದ ಗರಿಷ್ಠ ಇಬ್ಬರನ್ನು ಮೀರದಂತೆ ಗರಿಷ್ಠ 10 ತಿಂಗಳಿಗೆ ನೇಮಿಸಿಕೊಳ್ಳಲಾಗುವುದು. ರೈತ ಅನುವುಗಾರರಿಂದ CHD ಯೋಜನೆಯೊಂದಿಗೆ ಇಲಾಖೆಯ ಇತರೆ ಯೋಜನೆಗಳಿಗೂ ಸೇವೆ ಪಡೆದುಕೊಳ್ಳಲಾಗುವುದು. ಸದರಿ ಸೇವೆಗಾಗಿ ಪ್ರತಿ ಮಾಹೆಯಾನ ರೂ.10000.00 ಗಳ ಗೌರವಧನ ನೀಡಲಾಗುವುದು (ಸಂಪನ್ಮೂಲ ವ್ಯಕ್ತಿಗಳನ್ನು ಒದಗಿಸುವ ಸಂಸ್ಥೆಗಳ ಸೇವೆ ವೆಚ್ಚ ಹಾಗೂ ಇತರೆ ತೆರಿಗೆಗಳು ಒಳಗೊಂಡಂತೆ).

**6.**ಆಡಳಿತಾತ್ಮಕ ವೆಚ್ಚಗಳು :

ಸದರಿ ಯೋಜನೆಯಡಿ ಪ್ರಚಾರ ಮತ್ತು ಸಾಹಿತ್ಯ, ವಾಹನ ಬಾಡಿಗೆ, ಪ್ರವಾಸ ಭತ್ಯೆ, ಪೀಠೋಪಕರಣಗಳು, ಗಣಕಯಂತ್ರದ ಪರಿಕರಗಳು, ಸಾಕ್ಷ್ಯಾಚಿತ್ರ, ದಾಖಲಾತಿ ಹಾಗೂ ಲೇಖನ ಸಾಮಗ್ರಿಗಳ ಖರೀದಿ ಹಾಗೂ ನಿರ್ದೇಶನಾಲಯದ ಹಂತದಲ್ಲಿ ಒಬ್ಬರು ಕಂಪ್ಯೂಟರ್ ಆಪರೇಟರ್ ರವರ ಸೇವೆಯನ್ನು ಪಡೆದುಕೊಳ್ಳಲು ಯೋಜನೆಯ ಒಟ್ಟು ಅನುದಾನದಲ್ಲಿ ಶೇ.**2** ರಷ್ಟು ಆಡಳಿತಾತ್ಮಕ ವೆಚ್ಚವನ್ನು ಮೀಸಲಿಡಲಾಗಿದೆ.

**2019-20** ನೇ ಸಾಲಿನಲ್ಲಿ **CHD** ಯೋಜನೆಯಡಿ ಅನುಷ್ಠಾನಗೊಳಿಸಬೇಕಾಗಿರುವ ಆರ್ಥಿಕ/ಭೌತಿಕ ಘಟಕ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ.

**(ರೂ.ಲಕ್ಷಗಳಲ್ಲಿ)**

| ಕ್ರ. ಸಂ | ಘಟಕ ಕಾರ್ಯಕ್ರಮ | ಘಟಕ | **2019-20** ನೇ ಸಾಲಿಗೆ ವಾರ್ಷಿಕ ಗುರಿ | |
|---|---|---|---|---|
| | | | ಭೌತಿಕ | ಆರ್ಥಿಕ |
| 1 | ಪ್ರದೇಶ ವಿಸ್ತರಣೆ ಹಾಗೂ ನಿರ್ವಹಣೆ | ಹೆಕ್ಟೇರ್ | 5375 | 5478.50 |
| 2 | ಮಳೆ ನೀರು ಕೊಯ್ಲು/ನೀರು ಸಂಗ್ರಹಣ ಸ್ಥಾವರಗಳ ನಿರ್ಮಾಣ | ಸಂಖ್ಯೆ | 250 | 187.50 |

| | | | | |
|---|---|---|---|---|
| 3. | ಕೊಯ್ಲೋತ್ತರ ನಿರ್ವಹಣೆ | | | |
| ಅ. | ಪ್ಯಾಕ್ ಹೌಸ್ ನಿರ್ಮಾಣ | ಸಂಖ್ಯೆ | 350 | 700.00 |
| ಆ | ಈರುಳ್ಳಿ ಸಂಗ್ರಹಣ ಘಟಕ | ಸಂಖ್ಯೆ | 40 | 35.00 |
| ಇ. | ಪ್ಲಾಸ್ಟಿಕ್ ಕ್ರೇಟ್ಸ್ ಗಳನ್ನು ಖರೀದಿಸಲು ಸಹಾಯಧನ | ಸಂಖ್ಯೆ | | 140.00 |
| 4 | ತರಬೇತಿ ಕಾರ್ಯಕ್ರಮ | | | 150.00 |
| 5 | ಗುತ್ತಿಗೆ ಆಧಾರದ ಮೇಲೆ ಸಂಪನ್ಮೂಲ ವ್ಯಕ್ತಿಗಳ ಸೇವೆ ಪಡೆಯುವುದು | ಸಂಖ್ಯೆ | 160 | 160.00 |
| 6 | ಆಡಳಿತಾತ್ಮಕ ವೆಚ್ಚ | | | 125.00 |
| ಒಟ್ಟು | | | | **6976.00** |

ಷರಾ: ಘಟಕ ಕಾರ್ಯಕ್ರಮಗಳಿಗೆ ನಿಗದಿಪಡಿಸಲಾದ ಅನುದಾನವನ್ನು ಜಿಲ್ಲಾವಾರು ಬೇಡಿಕೆ ಮತ್ತು ಅಗತ್ಯತೆ ಅನುಸಾರ ಬದಲಾವಣೆಗಳಾದಲ್ಲಿ, ನಿರ್ದೇಶಕರ ಹಂತದಲ್ಲಿ ಬದಲಾವಣೆ ಮಾಡಿಕೊಳ್ಳಲಾಗುವುದು.

ಮೇಲ್ಕಂಡ "ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ" ಘಟಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕಾಗಿ ಲೆಕ್ಕಶೀರ್ಷಿಕೆ: 2401-00-111-0-08 ಅಡಿ 2019-20 ನೇ ಸಾಲಿನಲ್ಲಿ ಒಟ್ಟು ರೂ.**6976.00** ಲಕ್ಷಗಳನ್ನು ಒದಗಿಸಿದೆ.

## **2**. ಆಲೂಗಡ್ಡೆ ವಿಶೇಷ ಪ್ಯಾಕೇಜ್ ಮತ್ತು ಬೀಜ ಸಹಾಯಧನಕ್ಕೆ ಕಾರ್ಯಕ್ರಮ:

ಕರ್ನಾಟಕ ರಾಜ್ಯದಲ್ಲಿ ಆಲೂಗಡ್ಡೆ ಒಂದು ಪ್ರಮುಖವಾದ ವಾಣಿಜ್ಯ ಬೆಳೆ. ಕಡಿಮೆ ಅವಧಿಯಲ್ಲಿ ಕಟಾವಿಗೆ ಬರುವ ತಂಪು ಹವಾಗುಣವನ್ನು ಬಯಸುವ ಈ ಬೆಳೆಯನ್ನು ನಿಯಮಿತ ಪ್ರದೇಶದಲ್ಲಿ ಮಾತ್ರ ಬೆಳೆಯಲಾಗುತ್ತಿದೆ. ಹಾಸನ, ಚಿಕ್ಕಮಗಳೂರು, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಮುಂಗಾರಿನ ಹಂಗಾಮಿನಲ್ಲಿಯೂ ಹಾಗೂ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹಿಂಗಾರು ಹಂಗಾಮಿನಲ್ಲಿ ನೀರಾವರಿಯಲ್ಲಿ ಹೆಚ್ಚಾಗಿ ಆಲೂಗಡ್ಡೆ ಬೆಳೆಯನ್ನು ಬೆಳೆಯುತ್ತಾರೆ.

ಆಲೂಗಡ್ಡೆ ಬೆಳೆಗಾರರ ಸಮಸ್ಯೆಗಳು:

ಆಲೂಗಡ್ಡೆ ಬೆಳೆಯನ್ನು ಹಲವಾರು (ಮೊದಲ ಅಂಗಮಾರಿ ರೋಗ, ಕೊನೆ ಅಂಗಮಾರಿ ರೋಗ, ದುಂಡಾಣು, ಕೊಳೆ, ನಂಜು ರೋಗ ಇತ್ಯಾದಿ) ರೋಗಗಳು ಹೆಚ್ಚಾಗಿ ಬಾಧಿಸುತ್ತವೆ. ಹಾಗೂ ಇದರಲ್ಲಿ ಇತ್ತೀಚಿನ ದಿನಗಳಲ್ಲಿ ಕೊನೆ ಅಂಗಮಾರಿ ರೋಗವು ಮುಖ್ಯವಾಗಿರುತ್ತದೆ. ಈ ರೋಗ ಬಾಧೆಯಿಂದ ತೀವ್ರವಾಗಿ ಬೆಳೆ ಹಾನಿಯಾದ ಕಾರಣ ಆಲೂಗಡ್ಡೆ ಬೆಳೆಗಾರರು ನಷ್ಟವನ್ನು ಅನುಭವಿಸುತ್ತಾರೆ. ರೋಗದ ಜೊತೆಗೆ ಉತ್ತಮ ಗುಣಮಟ್ಟದ ದೃಢೀಕರಿಸಿದ ಮತ್ತು ರೋಗರಹಿತ ಆಲೂಗಡ್ಡೆ ಬಿತ್ತನೆ ಬೀಜ, ಮಳೆಯ ಅಭಾವ, ಮಾರುಕಟ್ಟೆ ದರದಲ್ಲಿ ಏರಿಳಿತ ಇತ್ಯಾದಿ ಸಮಸ್ಯೆಗಳು ಸಹ ರೈತರನು ಕಾಡುತ್ತಿವೆ.

ಮುಂದುವರೆದು, ದಿನಾಂಕ:19-4-2012 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದ್ದ ಸರ್ವ ಪಕ್ಷಗಳ ಸಭೆಯಲ್ಲಿ ಚರ್ಚಿಸಿದಂತೆ ಆಲೂಗಡ್ಡೆ ಬೆಳೆಗಾರರ ಕುಂದು ಕೊರತೆಯನ್ನು ನಿವಾರಿಸಲು ವಿಶೇಷ ಪ್ಯಾಕೇಜ್ ನೀಡುವುದು ಸೂಕ್ತವೆಂದು ಪರಿಗಣಿಸಿ ಸರ್ಕಾರದ ಆದೇಶ ಸಂ: ತೋಇ 119 ತೋಸವಿ 2012 (ಭಾಗ) ಬೆಂಗಳೂರು ದಿನಾಂಕ: 09-5-2012 ರನ್ವಯ 2012-13 ನೇ ಸಾಲಿನಿಂದ ರಾಜ್ಯವಲಯ ಯೋಜನೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ಅಡಿ ಆಲೂಗಡ್ಡೆ ಬೆಳೆಗೆ ವಿಶೇಷ ಪ್ಯಾಕೇಜ್ (ಲೆಕ್ಕಶೀರ್ಷಿಕೆ: 2401-00-111-0-08) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ 2019-20 ನೇ ಸಾಲಿಗೆ ಆಲೂಗಡ್ಡೆ ಬೆಳೆಗಾರರಿಗೆ ಆಲೂಗಡ್ಡೆ ಬೆಳೆಗೆ ವಿಶೇಷ ಪ್ಯಾಕೇಜ್ ಕಾರ್ಯಕ್ರಮಕ್ಕೆ ಭೌತಿಕ ಗುರಿ 9000 ಹೆಕ್ಟೇರ್ ಪ್ರದೇಶಕ್ಕೆ ಆರ್ಥಿಕ ಗುರಿ ರೂ.450.00 ಲಕ್ಷಗಳನ್ನು ನಿಗದಿಪಡಿಸಲು ಹಾಗೂ ಸದರಿ ಕಾರ್ಯಕ್ರಮದಡಿ ಶೇ2 ರಷ್ಟು ಅನುದಾನವನ್ನು ಆಡಳಿತಾತ್ಮಕ ವೆಚ್ಚವಾಗಿ ವಿನಿಯೋಗಿಸಿಕೊಳ್ಳಲು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಆಲೂಗಡ್ಡೆ ಬೆಳೆಗೆ ಮೇಲೆ ವಿವರಿಸಿದಂತೆ ವಿವಿಧ ತೊಂದರೆಗಳಿಂದ ನಷ್ಟವನ್ನು ಅನುಭವಿಸುತ್ತಿರುವ ರೈತರ ಹಿತದೃಷ್ಟಿಯಿಂದ ಆಲೂಗಡ್ಡೆ ಬೆಳೆಗೆ ವಿಶೇಷ ಪ್ಯಾಕೇಜ್ ನೀಡುವುದರಿಂದ ರೈತರಿಗೆ ಆರ್ಥಿಕವಾಗಿ ಸಹಾಯ ಮಾಡುವುದು ಸೂಕ್ತವೆಂದು ಪರಿಗಣಿಸಿ 2019-20 ನೇ ಸಾಲಿನಲ್ಲಿ ಆಲೂಗಡ್ಡೆ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ಕಾರ್ಯಕ್ರಮದಡಿ ಆಲೂಗಡ್ಡೆ ಬೆಳೆಗಾರರಿಗೆ ಶೇ50 ರಂತೆ ರೂ.5000.00 ಪ್ರತಿ ಹೆಕ್ಟೇರ್ ಗೆ ಫಲಾನುಭವಿಗೆ ಗರಿಷ್ಠ 2 ಹೆಕ್ಟೇರ್ ವರೆಗೂ ಮಿತಿಗೊಳಿಸಿ, ಸಹಾಯಧನವನ್ನು ವಿತರಿಸಲು ಒಟ್ಟು ರೂ.450.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಸದರಿ ಕಾರ್ಯಕ್ರಮದಡಿ ನಿಗದಿಪಡಿಸಿದ ಅನುದಾನಕ್ಕನುಗುಣವಾಗಿ ಕಾರ್ಯಕ್ರಮವನ್ನು ಅಂದಾಜು ಒಟ್ಟಾರೆ 9000 ಹೆಕ್ಟೇರ್ ಆಲೂಗಡ್ಡೆ ಬೆಳೆಯುವ ಪ್ರದೇಶದಲ್ಲಿ ಅನುಷ್ಠಾನಗೊಳಿಸಬಹುದಾಗಿದೆ.

ಕಾರ್ಯಕ್ರಮದ ಉದ್ದೇಶಗಳು:

1. ಕೊನೆ ಅಂಗಮಾರಿ ರೋಗ ನಿಯಂತ್ರಣದ ಬಗ್ಗೆ ರೈತರಲ್ಲಿ ಅರಿವು ಮೂಡಿಸುವುದು.
2. ಆಲೂಗಡ್ಡೆ ಬೆಳೆಗೆ ತಗಲುವ ಕೊನೆ ಅಂಗಮಾರಿ ರೋಗ ಹಾಗೂ ಇತರ ರೋಗ ಬಾಧೆಯನ್ನು ತಡೆಗಟ್ಟಲು ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ರೈತರಿಗೆ ಸಹಾಯಧನವನ್ನು ನೀಡುವುದು.
3. ಆಲೂಗಡ್ಡೆ ಬೆಳೆಯ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಿ, ರೈತರ ಆರ್ಥಿಕ ಮಟ್ಟವನ್ನು ಸುಧಾರಿಸಲು ನೆರವು ನೀಡುವುದು.
4. ಬೆಳೆ ವಿಮೆಗೆ ಸಹಾಯಧನ ನೀಡುವುದು.

ಸದರಿ ಕಾರ್ಯಕ್ರಮದ ಘಟಕವಾರು ವಿವರಗಳು ಈ ಕೆಳಕಂಡಂತಿವೆ

| ಕ್ರ.ಸಂ | ಕಾಂಪೊನೆಂಟ್ ಗಳು | ಶೇಕಡಾವಾರು ಸಹಾಯಧನ | ಸಹಾಯಧನ ಒದಗಿಸಬಹುದಾದ ಮೊತ್ತ **(ರೂ. ಪ್ರತಿ ಹೆಕ್ಟೇರ್ ಗೆ)** |
|---|---|---|---|
| 1 | ಜೈವಿಕ ಗೊಬ್ಬರ ವಿತರಣೆ ಟ್ರೈಕೋಡರ್ಮ, ಸುಡೋಮೋನಾಸ್, ಪಿ.ಎಸ್.ಬಿ | ಶೇ.100 ರಂತೆ | 410.00 |
| 2 | ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ರೈತರಿಗೆ ಸಹಾಯಧನ | ಶೇ.50 ರಂತೆ | 3090.00 |
| 3 | ಬೆಳೆ ವಿಮೆಗೆ ಸಹಾಯಧನ | ಶೇ.50 ರಂತೆ | 1500.00 |
| | | ಒಟ್ಟು | **5000.00** |

2019-20 ನೇ ಸಾಲಿಗೆ ಆಲೂಗಡ್ಡೆ ಬೆಳೆಗೆ ವಿಶೇಷ ಪ್ಯಾಕೇಜ್ ಕಾರ್ಯಕ್ರಮಕ್ಕೆರೂ**. 450.00** ಲಕ್ಷಗಳ ಅನುದಾನವನ್ನು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ (ಲೆಕ್ಕಶೀರ್ಷಿಕೆ: 2401-00-111-0-08) ಅಡಿ ಒದಗಿಸಿದೆ.

## 3. ತೋಟಗಾರಿಕೆ ಗಣತಿ/ಮೂಲಧಾರ ಸಮೀಕ್ಷೆ (Horticulture census):

ಇತ್ತೀಚಿನ ದಿನಗಳಲ್ಲಿ ತೋಟಗಾರಿಕೆ ಬೆಳೆಗಳ ಮಹತ್ವವು ಅಧಿಕಗೊಳ್ಳುತ್ತಿದೆ. ರೈತರಿಗೆ ತೋಟಗಾರಿಕೆ ಬೆಳೆಗಳಿಂದ ಅಧಿಕ ಆದಾಯ ಬರುತ್ತಿರುವುದರಿಂದ ರೈತರಲ್ಲಿ ಹೆಚ್ಚಿನ ಆಶಾ ಭಾವನೆ ಹಾಗೂ ನಂಬಿಕೆ ಬಲಗೊಂಡು ತೋಟಗಾರಿಕೆ ಬೆಳೆಗಳನ್ನು ಬೆಳೆಯುವಲ್ಲಿ ಆಸಕ್ತಿ ಮೂಡಿರುವುದರಿಂದ ತೋಟಗಾರಿಕೆ ಬೆಳೆಗಳ ಪ್ರದೇಶ ವರ್ಷದಿಂದ ವರ್ಷಕ್ಕೆ ಅಧಿಕಗೊಳ್ಳುತ್ತಿದೆ. ರಾಜ್ಯದಲ್ಲಿ ತೋಟಗಾರಿಕೆ ಬೆಳೆಯನ್ನು ಬೆಳೆಯುವ ರೈತರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ, ಅವರ ಜೀವನಮಟ್ಟವನ್ನು ಸುಧಾರಿಸುವ ಹಾಗೂ ತೋಟಗಾರಿಕೆ ಕೈಗಾರಿಕೋಧ್ಯಮವನ್ನು ಮುಂಬರುವ ವರ್ಷಗಳಲ್ಲಿ ವೃದ್ಧಿಗೊಳಿಸುವ ಗುರಿ ಹೊಂದಲಾಗಿದೆ. ವೈಜ್ಞಾನಿಕ ಪದ್ಧತಿ ಆಧಾರಿತ ಮಾದರಿ ಹಾಗೂ ತೋಟಗಾರಿಕೆ ಬೆಳೆ ಬೆಳೆಯುವ ರೈತರ ಸಂಪೂರ್ಣ ಮೂಲಭೂತ ಮಾಹಿತಿಗಳನ್ನು ಮೂಲಾಧಾರ ಸಮೀಕ್ಷೆ ಮೂಲಕ ಸಂಗ್ರಹಿಸಿ ಸರಿಯಾದ ರೀತಿಯಲ್ಲಿ ನಿಷ್ಕರಿಸಿ ಅವಶ್ಯಕ ಮಾಹಿತಿಗಳಾದ ಹಾಗೂ ಪ್ರಮುಖ ಋತುವಿನಲ್ಲಿ ಬೆಳೆಯುವ ಬೆಳೆಗಳ ವಿವರಗಳನ್ನೊಳಗೊಂಡಿರುವ ಪ್ರದೇಶ, ಉತ್ಪಾದನೆ, ಉತ್ಪಾದಕತೆಗಳ ಮಹತ್ವದ ಮಾಹಿತಿಗಳು ಪ್ರಮುಖ ಪಾತ್ರ ವಹಿಸುತ್ತಿದೆ.

ತೋಟಗಾರಿಕೆ ಬೆಳೆಗಳ ಮಾಹಿತಿ (Data base) ಯನ್ನು ಸರಿಯಾಗಿ ತಿಳಿಯಲು ಕೆಲವು ಆತಂಕಗಳಾದ ಕಂದಾಯ ಇಲಾಖೆಯ ಪಹಣಿಯಲ್ಲಿ ತೋಟಗಾರಿಕೆ ಬೆಳೆಗಳ ಮಾಹಿತಿಯು ದಾಖಲಾಗದಿರುವುದು, ತೋಟಗಾರಿಕೆ ಇಲಾಖೆ ಹಾಗೂ ಸಾಂಖ್ಯಿಕ ಇಲಾಖೆಯಲ್ಲಿ ವರದಿಯಾಗಿರುವ ದಾಖಲೆಗಳಲ್ಲಿ ವ್ಯತ್ಯಾಸ ಕಂಡುಬಂದಿರುವುದು, ಈ ದೃಷ್ಟಿಕೋನದಲ್ಲಿ ಪಸಕ್ತ ಅಭಿವೃದ್ಧಿ ಸ್ಥಿತಿಯ ಫಲಿತಾಂಶಗಳನ್ನು ಅರಿತುಕೊಳ್ಳಲು ತೋಟಗಾರಿಕೆ ಬೆಳೆಗಳ ಮೂಲಾಧಾರ ಸಮೀಕ್ಷೆಯ ಅವಶ್ಯಕತೆಯ ಕಾರಣ 2013-14 ನೇ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳ ಮೂಲಾಧಾರ ಸಮೀಕ್ಷೆ (ಗಣತಿ) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ಸದರಿ ಕಾರ್ಯಕ್ರಮದಡಿ ಆಯ್ಕೆಯಾದ ಜಿಲ್ಲೆಗಳಲ್ಲಿ ಸಮೀಕ್ಷೆ ಕಾರ್ಯವು ಪ್ರಗತಿಯಲ್ಲಿದ್ದು, 2019-20 ನೇ ಸಾಲಿನಲ್ಲಿ ಸದರಿ ಜಿಲ್ಲೆಗಳಲ್ಲಿ ಸಮೀಕ್ಷಾ ಕಾರ್ಯ ಪೂರ್ಣಗೊಳಿಸಲು ರೂ.50.00 ಲಕ್ಷಗಳ ಅನುದಾನವನ್ನು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಒದಗಿಸಲು ಪ್ರಸ್ತಾಪಿಸಲಾಗಿದೆ.

ಉದ್ದೇಶ**:**

- ಪ್ರತಿ ಜಿಲ್ಲೆಗಳ ಗ್ರಾಮಗಳಲ್ಲಿ ತೋಟಗಾರಿಕೆ ಬೆಳೆಗಳ (ತರಕಾರಿ, ಹಣ್ಣು, ಪುಷ್ಪಗಳು ಮತ್ತು ಔಷಧಿ ಬೆಳೆ ಇತ್ಯಾದಿ) ಪ್ರದೇಶ ವಿಸ್ತೀರ್ಣ, ಉತ್ಪಾದನೆಯ ಮಾಹಿತಿಗಳನ್ನು ನಿಖರವಾಗಿ ತಿಳಿದುಕೊಳ್ಳುವುದು.
- ತೋಟಗಾರಿಕೆ ಬೆಳೆಗಳನ್ನು ಋತುವಾರು ಬೆಳೆಯುವ ರೈತರ ವಿವರ, ಸರ್ವೆ ನಂಬರ್, ಮಳೆ ಆಧಾರಿತ, ನೀರಾವರಿ ಆಧಾರಿತ, ಜಮೀನಿನಲ್ಲಿ ಬೆಳೆಯುವ ಬೆಳೆಗಳ ಮಾಹಿತಿಯನ್ನು ಸಂಗ್ರಹಿಸುವುದು.
- ಪ್ರತಿ ಗ್ರಾಮಗಳಲ್ಲಿ ತೋಟಗಾರಿಕೆ ಬೆಳೆ ಬೆಳೆಯುವ ವಿವಿಧ ವರ್ಗವಾರು ಹಿಂದುಳಿದ, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪುರುಷ ಮತ್ತು ಮಹಿಳಾ ರೈತರ ಮಾಹಿತಿ ಸಂಗ್ರಹಿಸುವುದು.
- ರೈತರು ಬೆಳೆದ ಬೆಳೆಗಳ ಮಾರುಕಟ್ಟೆ ವ್ಯವಸ್ಥೆಗೆ ಬೆಲೆಗಳ ಸ್ಥಿರತೆಗೆ ಸಹಾಯವಾಗುವ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಾಯಕಾರಿಯಾಗುವ ಮಾಹಿತಿಗಳನ್ನು ನಿರ್ವಹಿಸುವುದು.

ಪ್ರಸ್ತುತವರೆಗಿನ ಮೂಲಾಧಾರ ಸಮೀಕ್ಷೆ ಸಂಕ್ಷಿಪ್ತ ವಿವರ**:**

ಮೊದಲನೇ ಹಂತದ ತೋಟಗಾರಿಕೆ ಬೆಳೆಗಳ ಮೂಲಾಧಾರ ಸಮೀಕ್ಷೆಯನ್ನು 11 ಜಿಲ್ಲೆಗಳಾದ ತುಮಕೂರು, ಬಾಗಲಕೋಟೆ, ದಾವಣಗೆರೆ, ಬೆಳಗಾವಿ, ಶಿವಮೊಗ್ಗ, ಹಾಸನ, ಕೋಲಾರ, ಚಿತ್ರದುರ್ಗ, ಮೈಸೂರು, ಬಳ್ಳಾರಿ ಮತ್ತು ಕಲಬುರಗಿ ಆಯ್ಕೆಯಾಗಿರುತ್ತದೆ. ಅದರಲ್ಲಿ 5 ಜಿಲ್ಲೆಗಳಲ್ಲಿ (ದಾವಣಗೆರೆ, ಕಲಬುರಗಿ, ಶಿವಮೊಗ್ಗ, ತುಮಕೂರು ಮತ್ತು ಬೆಳಗಾವಿ) ಸಮೀಕ್ಷಾ ಕಾರ್ಯ ಪೂರ್ಣಗೊಂಡಿರುತ್ತದೆ. ಉಳಿದ ಜಿಲ್ಲೆಗಳಲ್ಲಿ ಸಮೀಕ್ಷಾ ಕಾರ್ಯ ಅಂತಿಮ ಹಂತದಲ್ಲಿರುತ್ತದೆ ಹಾಗೂ ಎರಡನೇ ಹಂತದ ತೋಟಗಾರಿಕೆ ಬೆಳೆಗಳ ಮೂಲಾಧಾರ ಸಮೀಕ್ಷೆಯಡಿ 10 ಜಿಲ್ಲೆಗಳನ್ನು (ಬೆಂಗಳೂರು (ಗ್ರಾ), ಬಿಜಾಪುರ, ಬೀದರ್, ಚಿಕ್ಕಬಳ್ಳಾಪುರ, ಚಾಮರಾಜನಗರ, ಗದಗ, ಕೊಪ್ಪಳ, ಮಂಡ್ಯ, ಉಡುಪಿ ಮತ್ತು ಉತ್ತರ ಕನ್ನಡ) ಆಯ್ಕೆ ಮಾಡಲಾಗಿರುತ್ತದೆ. ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲು 18 ಬಾಹ್ಯ ಮೂಲ ಸಂಸ್ಥೆಗಳನ್ನು ಕೇಂದ್ರ ಕಛೇರಿಯಿಂದ ಇ-ಟೆಂಡರ್ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. ಆದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ 2 ತಾಲ್ಲೂಕುಗಳಾದ ದೇವನಹಳ್ಳಿ ಮತ್ತು ಹೊಸಕೋಟೆ, ಬೀದರ್, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗೆ ಆಯ್ಕೆಯಾದ ಬಾಹ್ಯಮೂಲ ಸಂಸ್ಥೆಯವರು ಸಮೀಕ್ಷೆ ಕಾರ್ಯವನ್ನು ಪ್ರಾರಂಭಿಸಿರುವುದಿಲ್ಲ. ಆದುದರಿಂದ 2019-20 ನೇ ಸಾಲಿನಲ್ಲಿ 13 ಜಿಲ್ಲೆಗಳಲ್ಲಿ ಸಮೀಕ್ಷಾ ಕಾರ್ಯವನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಸಲ್ಲಿಸಲು ಸಂಬಂಧಿಸಿದ 20 ಬಾಹ್ಯ ಮೂಲ ಸಂಸ್ಥೆಗಳು ಸಮೀಕ್ಷಾ ಕಾರ್ಯ ಕೈಗೊಳ್ಳಬೇಕಾಗಿರುತ್ತದೆ ಹಾಗೂ ಪೂರ್ಣಗೊಳ್ಳುವ ವರದಿಗಳನ್ನು ಅಂಗೀಕರಿಸಿ ಹಣ ಪಾವತಿ ಮಾಡಲು ರೂ.50.00 ಲಕ್ಷಗಳ ಅನುದಾನ ನಿಗದಿಪಡಿಸಿ ಕಾರ್ಯಕ್ರಮವನ್ನು ಮುಂದುವರೆಸಲು ಅನುಮೋದನೆ ಕೋರಿದೆ.

**2019-20** ನೇ ಸಾಲಿನ ತೋಟಗಾರಿಕೆ ಬೆಳೆಗಳ ಮೂಲಾಧಾರ ಸಮೀಕ್ಷೆಯ ಘಟಕವಾರು ಪ್ರಸ್ತಾಪಿತ ಆಯವ್ಯಯದ ಅಂದಾಜುಗಳು**:**

| | ಘಟಕವಾರು ವಿವರಗಳು | ಆಯವ್ಯಯದ ಅಂದಾಜಗಳು **(ರೂ.ಲಕ್ಷಗಳಲ್ಲಿ)** |
|---|---|---|
| 1 | **ಅ)** 2013-14ರ ಸಾಲಿನಿಂದ ಪ್ರಥಮ ಹಂತದಲ್ಲಿ ಮೂಲಾಧಾರ ಸಮೀಕ್ಷೆಯನ್ನು ಆಯ 11 ಜಿಲ್ಲೆಗಳಲ್ಲಿ ಪೂರ್ಣಗೊಳಿಸದ 6 ಜಿಲ್ಲೆಗಳಿಗೆ 2019-20 ನೇ ಸಾಲಿನಲ್ಲಿ ಪೂರ್ಣಗೊಳಿಸಲು ಬಾಹ್ಯಮೂಲ ಸಂಸ್ಥೆಗಳಿಗೆ ಅನುದಾನದ ಪಾವತಿಸಬೇಕಾಗಿರುತ್ತದೆ. (ಬಾಗಲಕೋಟೆ, ಹಾಸನ, ಕೋಲಾರ, ಚಿತ್ರದುರ್ಗ, ಮೈಸೂರು, ಬಳ್ಳಾರಿ)<br>**ಆ)** ಪ್ರಥಮ ಹಂತದ ಸಮೀಕ್ಷೆಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪಾಲ್ಗೊಂಡಿರುವ ತೋಟಗಾರಿಕೆ ಕೇಂದ್ರ ಕಚೇರಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಹಾಗೂ ಜಿಲ್ಲಾ ಹಂತದ ತೋಟಗಾರಿಕೆ ಅಧಿಕಾರಿಗಳಿಗೆ ಸಂಭಾವನೆಯನ್ನು ನಿಗದಿಪಡಿಸುವುದು. | 30.00 |

| | | |
|---|---|---|
| 2 | ಅ) ಎರಡನೇ ಹಂತದ ತೋಟಗಾರಿಕೆ ಬೆಳೆಗಳ ಮೂಲಾಧಾರ ಸಮೀಕ್ಷೆಯನ್ನು ಆಯ್ದ 10 ಜಿಲ್ಲೆಗಳಲ್ಲಿ 2015-16 ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ಸದರಿ ಜಿಲ್ಲೆಗಳಿಗೂ ಸಹ ಪೂರ್ಣ ಪ್ರಮಾಣದಲ್ಲಿ ಪ್ರಗತಿ ಸಾಧಿಸಿದ ಬಾಹ್ಯಮೂಲ ಸಂಸ್ಥೆಯವರಿಗೆ 2019-20 ನೇ ಸಾಲಿನಲ್ಲಿ ಅನುದಾನ ಪಾವತಿಸಬೇಕಾಗಿರುತ್ತದೆ. (ಬೆಂಗಳೂರು(ಗ್ರಾ), ಬಿಜಾಪುರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಗದಗ, ಕೊಪ್ಪಳ, ಮಂಡ್ಯ)<br>ಆ) ಎರಡನೇ ಹಂತದ ಸಮೀಕ್ಷೆಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪಾಲ್ಗೊಂಡಿರುವ ತೋಟಗಾರಿಕೆ ಕೇಂದ್ರ ಕಚೇರಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಹಾಗೂ ಜಿಲ್ಲಾ ಹಂತದ ತೋಟಗಾರಿಕೆ ಅಧಿಕಾರಿಗಳಿಗೆ ಸಂಭಾವನೆಯನ್ನು ನಿಗದಿಪಡಿಸುವುದು. | 20.00 |
| | ಸಮೀಕ್ಷೆಯ ಒಟ್ಟು ಪ್ರಸ್ತಾಪಿತ ಆಯವ್ಯಯ | **50.00** |

## 4. ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಕಾರ್ಯಕ್ರಮ:

ಭಾರತ ದೇಶದಲ್ಲಿ ಕರ್ನಾಟಕ ರಾಜ್ಯವು ತೋಟಗಾರಿಕೆ ವಲಯದ ಪ್ರಗತಿಪರ ರಾಜ್ಯವೆಂದು ಪ್ರಖ್ಯಾತಗೊಂಡಿದೆ. ರಾಜ್ಯದಲ್ಲಿ ಒಟ್ಟು 20.36 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ಒಟ್ಟು ಉತ್ಪನ್ನ 191.24 ಲಕ್ಷ ಟನ್ ಗಳಷ್ಟಿರುತ್ತದೆ. ತೋಟಗಾರಿಕೆ ಉತ್ಪನ್ನಗಳು ಅದರಲ್ಲೂ ವಿಶೇಷವಾಗಿ ಹಣ್ಣು ಮತ್ತು ತರಕಾರಿಗಳು ಅತೀ ಶೀಘ್ರವಾಗಿ ಹಾಳಾಗುವ ಗುಣವನ್ನು ಹೊಂದಿದ್ದು, ಕೊಯ್ಲೋತ್ತರ ನಿರ್ವಹಣೆಯ ಹಂತದಲ್ಲಿ ಸಂಸ್ಕರಣೆಯು ಪ್ರಮುಖ ಪಾತ್ರ ವಹಿಸುತ್ತದೆ ಸಂಸ್ಕರಣೆಗಳಿಂದ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಮಾರುಕಟ್ಟೆಯಲ್ಲಿ ತೋಟಗಾರಿಕೆ ಉತ್ಪನ್ನಗಳ ಸರಬರಾಜು ಮತ್ತು ಬೆಲೆ ನಿಯಂತ್ರಣ ಸಾಧ್ಯವಾಗಲಿದೆ ಈ ಹಿನ್ನೆಲೆಯಲ್ಲಿ <2% ರಷ್ಟು ತೋಟಗಾರಿಕೆ ಉತ್ಪಾದನಾ ಸಂಸ್ಕರಣೆಯಾಗುತ್ತಿದ್ದು, ಇನ್ನು ಹೆಚ್ಚಿನ ಉತ್ತೇಜನಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆಗೆ ಮಹತ್ವ ನೀಡುತ್ತಿದ್ದು, ಇದಕ್ಕಾಗಿ ಸದರಿ ಯೋಜನೆಯನ್ನು ರೂಪಿಸಲಾಗಿದೆ.

2. ಯೋಜನೆಯ ಉದ್ದೇಶಗಳು:

1. ತೋಟಗಾರಿಕೆ ಬೆಳೆಗಳ ಕೊಯ್ಲೋತ್ತರ ನಿರ್ವಹಣೆ ಹಾಗೂ ಸಂಸ್ಕರಣೆಗೆ ಹೆಚ್ಚಿನ ಒತ್ತು ನೀಡುವುದು ಹಾಗೂ ರೈತರು/ರೈತ ಗುಂಪುಗಳು/ಸ್ವಸಹಾಯ ಗುಂಪುಗಳು/ಅರೆ ಸರ್ಕಾರಿ ಸಂಸ್ಥೆಗಳು/ಸಹಕಾರ ಸಂಘಗಳು/ ಉದ್ದಿಮೆದಾರರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಸಹಾಯಧನ ನೀಡುವುದು.
2. ತೋಟಗಾರಿಕೆ ಉತ್ಪಾದನೆ ಮತ್ತು ಗ್ರಾಹಕರ ಬೇಡಿಕೆಯನ್ನಾಧರಿಸಿ ಕ್ಷೇತ್ರ ಮಟ್ಟದ ರೈತರ ಸಮೂಹ ಹಾಗೂ ಉದ್ದಿಮೆದಾರರಿಗೆ ಅಗತ್ಯವಾದಂತಹ ಸಂಸ್ಕರಣೆ ಘಟಕಗಳನ್ನು ಅಳವಡಿಸಿಕೊಳ್ಳಲು ಉತ್ತೇಜಿಸುವುದು.
3. ತೋಟಗಾರಿಕೆ ಉತ್ಪನ್ನಗಳ ಕೊಯ್ಲೋತ್ತರ ಹಾನಿ ಮತ್ತು ನಷ್ಟವನ್ನು ತಡೆಯಲು ಪ್ರಥಮ ಹಂತದ ಸಂಸ್ಕರಣೆಯನ್ನು ಕೈಗೊಳ್ಳಲು ಉತ್ತೇಜಿಸುವುದು.
4. ಈ ಯೋಜನೆಯಡಿ ಸಂಸ್ಕರಣಾ ಘಟಕದ ಮೂಲ ಬಂಡವಾಳವಾದ (Capital Investment) ಶೇ.25 ರಷ್ಟು ಸಹಾಯಧನವನ್ನು ವಿವಿಧ ತೋಟಗಾರಿಕೆ ಬೆಳೆಗಳ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ನೀಡಲಾಗುವುದು. 2018-19 ನೇ ಸಾಲಿನಲ್ಲಿ ಅಥವಾ ತದನಂತರ ಕಾರ್ಯಾರಂಭಗೊಂಡಿರುವಂತಹ ಹೊಸ ಸಂಸ್ಕರಣಾ ಘಟಕಗಳನ್ನು ಮಾತ್ರ ಸಹಾಯಧನಕ್ಕೆ ಪರಿಗಣಿಸಲಾಗುವುದು.

**3.** ಆರ್ಥಿಕ ಅನುದಾನದ ಅವಶ್ಯಕತೆ **(Financial Implication)**

2019-20 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ “ ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ” ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರೂ100.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

**4.** ಯೋಜನಾ ಅನುಷ್ಠಾನ ವ್ಯಾಪ್ತಿ

ಈ ಯೋಜನೆಯ ಅನುಷ್ಠಾನದ ವ್ಯಾಪ್ತಿಯು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ಅನ್ವಯಿಸುತ್ತದೆ.

**5.** ಯೋಜನೆ ಅನುಷ್ಠಾನ ಜವಾಬ್ದಾರಿ

ಆಯಾ ಜಿಲ್ಲೆಯ ಅನುಮೋದಿತ ಕ್ರಿಯಾ ಯೋಜನೆ, ಮೀಸಲಾತಿ ಹಾಗೂ ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾ ಪಟ್ಟಿ (MPIC) ಯಂತೆ ನಿಗದಿಯಾಗಿರುವ ಅನುದಾನ ಮೀರದಂತೆ ಈ ಯೋಜನೆ ಅನುಷ್ಠಾನವನ್ನು ತೋಟಗಾರಿಕೆ ಇಲಾಖೆ ನಿರ್ವಹಿಸುವುದು ಹಾಗೂ ಪ್ರಸ್ತುತ ಸಾಲಿನಲ್ಲಿ ತಯಾರಿಸಲಾಗುವ ಮಾರ್ಗಸೂಚಿಯನ್ವಯ ಅನುಷ್ಠಾಗೊಳಿಸುವುದು.

**6.** ಯೋಜನೆಯ ಫಲಶೃತಿ:

- ತೋಟಗಾರಿಕೆ ಬೆಳೆಗಳ ಕೋಯ್ಲೋತ್ತರ ನಿರ್ವಹಣೆ ಹಾಗೂ ಸಂಸ್ಕರಣೆಗೆ ಹೆಚ್ಚಿನ ಒತ್ತು ನೀಡುವುದು ಹಾಗೂ ರೈತರು /ರೈತ ಗುಂಪುಗಳು/ಸ್ವಸಹಾಯ ಗುಂಪುಗಳು/ಅರೆ ಸರ್ಕಾರಿ ಸಂಸ್ಥೆಗಳು/ಸಹಕಾರ ಸಂಘಗಳು/ ಉದ್ಯಮಿದಾರರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಸಹಾಯಧನ ನೀಡುವುದು.
- ತೋಟಗಾರಿಕೆ ಉತ್ಪಾದನೆ ಮತ್ತು ಗ್ರಾಹಕರ ಬೇಡಿಕೆಯನ್ನಾಧರಿಸಿ ಕ್ಷೇತ್ರ ಮಟ್ಟದ ರೈತರ ಸಮೂಹ ಹಾಗೂ ಉದ್ದಿಮೆದಾರರಿಗೆ ಅಗತ್ಯವಾದಂತಹ ಸಂಸ್ಕರಣೆ ಘಟಕಗಳನ್ನು ಅಳವಡಿಸಿಕೊಳ್ಳಲು ಉತ್ತೇಜಿಸುವುದು.
- ತೋಟಗಾರಿಕೆ ಉತ್ಪನ್ನಗಳ ಕೊಯ್ಲೋತ್ತರ ಹಾನಿಯನ್ನು ಮತ್ತು ನಷ್ಟವನ್ನು ತಡೆಯಲು ಪ್ರಥಮ ಹಂತದ ಸಂಸ್ಕರಣೆಯನ್ನು ಕೈಗೊಳ್ಳಲು ಉತ್ತೇಜಿಸುವುದು.
- ಈ ಕಾರ್ಯಕ್ರಮದಿಂದ ತೋಟಗಾರಿಕೆ ಉತ್ಪನ್ನಗಳ glut ಅನ್ನು ತಡೆಯುವುದಲ್ಲದೇ, ಸಂಸ್ಕರಿಸಿ ಪದಾರ್ಥಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಬಹುದಾಗಿರುತ್ತದೆ.
- ಈ ಪದಾರ್ಥಗಳ ಗುಣಮಟ್ಟದ ಮೇರೆಗೆ ರಫ್ತನ್ನು ಉತ್ತೇಜಿಸಿ ರೈತ ಸಮೂಹ/ ಉದ್ದಿಮೆದಾರರ ಆರ್ಥಿಕ ಮಟ್ಟವನ್ನು ಹೆಚ್ಚಿಸಬಹುದು.
- ಸ್ಥಳೀಯವಾಗಿ ತೋಟಗಾರಿಕೆ ಉತ್ಪನ್ನಗಳ ಪ್ರಾಥಮಿಕ ಸಂಸ್ಕರಣಾ ಘಟಕಗಳನ್ನು ಉತ್ತೇಜಿಸಿ ಅಭಿವೃದ್ಧಿಪಡಿಸಿದಲ್ಲಿ, ಸ್ಥಳೀಯ ಯುವಕರು ಮತ್ತು ಮಹಿಳೆಯರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಬಹುದಾಗಿರುತ್ತದೆ.

**5.** <u>ಕೇಂದ್ರ ಪುರಸ್ಕೃತ ಯೋಜನೆ **(RKVY, Drip & MIDH)** ಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.**90** ರವರೆಗೆ ಸಹಾಯಧನ ನೀಡಲು **Matching grants** ನೀಡುವುದು **(To meet up overall 90% subsidy for SCP & TSP Beneficiaries under Central Sponsored Scheme)**</u>**:**

ಕೇಂದ್ರ ಪುರಸ್ಕೃತ ಯೋಜನೆಯಡಿ ಶೇ.40 ಅಥವಾ ಶೇ.50ರ ಸಹಾಯಧನ ಪಡೆಯುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಶೇ.40 ಅಥವಾ ಶೇ.50ರ Matching grants ನೀಡುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90ರ ಸಹಾಯಧನ ನೀಡಲು ಕ್ರಮವಹಿಸುವುದು. ಹಿಂದಿನ ಸಾಲಿನ ಬಾಕಿ ಹಾಗೂ 2019-20 ಸಾಲಿಗೆ ಸದರಿ ಯೋಜನೆಗೆ ಒಟ್ಟು ರೂ.1574.00 ಲಕ್ಷಗಳನ್ನು ಒದಗಿಸಿದೆ.

**6.** <u>**ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿ:**</u>

ಹಣ್ಣು ಮತ್ತು ತರಕಾರಿಗಳು ಖನಿಜಾಂಶ, ಜೀವಸತ್ವಗಳು, ನಾರಿನಾಂಶ ಮತ್ತು ಸೂಕ್ಷ್ಮ ಪೋಷಕಾಂಶಗಳನ್ನು ಹೇರಳವಾಗಿ ಹೊಂದಿರುವುದರಿಂದ, ಸಮತೋಲನ ಆಹಾರ ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಹಲವು ದಶಕಗಳ ಹಿಂದೆ ಗ್ರಾಮೀಣ, ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಬಹಳಷ್ಟು ಪೂರೈಸಿಕೊಳ್ಳುತ್ತಿದ್ದವು ಕಾಲ ಕ್ರಮೇಣ ನಗರೀಕರಣ ಮತ್ತು ಆಧುನಿಕ ಜೀವನ ಶೈಲಿಯ ಪರಿಣಾಮವಾಗಿ ಕೈತೋಟಗಳು ಕಡಿಮೆಯಾಗಿ ಬಹುತೇಕ ಕುಟುಂಬಗಳು ಹಣ್ಣು ತರಕಾರಿಗಳನ್ನು ಸಂತೆ ಮತ್ತು ಮಾರುಕಟ್ಟೆಗಳ ಮೂಲಕ ಪೂರೈಸಿಕೊಳ್ಳುತ್ತಿವೆ. ಬದಲಾದ ಜೀವನ ಶೈಲಿಯ ಪರಿಣಾಮವಾಗಿ, ನಗರವಾಸಿಗಳು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಕಡಿಮೆಯಾಗಿದ್ದು, ಸಕ್ಕರೆ ಕಾಯಿಲೆ, ಹೃದಯ ಸಂಬಂಧಿ ಅಸಮತೋಲನಗಳು ಮತ್ತು ರಕ್ತ ಒತ್ತಡ ಸಮಸ್ಯೆಗಳು ಉಲ್ಬಣಗೊಂಡಿವೆ. ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿ ಚಟುವಟಿಕೆಗಳಿಗೆ ಉತ್ತೇಜನ ನೀಡಿದಲ್ಲಿ, ನಾಗರೀಕರು ಉತ್ತಮ ಗುಣಮಟ್ಟದ ಹಣ್ಣು ತರಕಾರಿಗಳನ್ನು ಉತ್ಪಾದಿಸುವುದರ ಜೊತೆಗೆ, ತೋಟದ ಸಾಗುವಳಿ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ದೈಹಿಕ ಮತ್ತು ಮಾನಸಿಕ ಆರೋಗ್ಯ ಸುಧಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ

ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ, ನಗರ ಮತ್ತು ಪಟ್ಟಣ ಪ್ರದೇಶದ ಕುಟುಂಬ ಸದಸ್ಯರ ಮತ್ತು ಮಕ್ಕಳ ಒತ್ತಡ ನಿರ್ವಹಣೆಗೆ ಇದು ಸಹಕಾರಿಯಾಗುವುದಲ್ಲದೆ, ಮನೆಯಲ್ಲಿ ದಿನನಿತ್ಯ ದೊರೆಯುವ ಸಾವಯವ ಉಳಿಕೆ ಪದಾರ್ಥಗಳನ್ನು ಕೈತೋಟದ ಉತ್ಪಾದನಾ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಮಣ್ಣು ರಹಿತ ಬೇಸಾಯ ಪದ್ಧತಿಯು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತಿದ್ದು, ಈ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಹಿನ್ನಲೆಯಲ್ಲಿ ಇಲಾಖಾ ವ್ಯಾಪ್ತಿಯ ಕ್ಷೇತ್ರಗಳಲ್ಲಿ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿರುತ್ತದೆ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದ ನಾಗರೀಕರಿಗೆ ಕೈತೋಟ ಮತ್ತು ತಾರಸಿ ತೋಟಗಳ ಪ್ರಾಮುಖ್ಯತೆ ಮತ್ತು ಅನುಕೂಲಗಳ ಅರಿವು ಮೂಡಿಸಲು ಹಾಗೂ ಅಗತ್ಯ ತರಬೇತಿ/ಪರಿಕರ/ಮೂಲಭೂತ ಸೌಕರ್ಯ ಕಲ್ಪಿಸುವ ಉದ್ದೇಶದಿಂದ <u>"ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿಗಾಗಿ ಉತ್ತೇಜನ"</u> ಕಾರ್ಯಕ್ರಮವನ್ನು ರೂಪಿಸಲಾಗಿದೆ.

1. <u>**ಯೋಜನೆಯ ಉದ್ದೇಶಗಳು:**</u>

I.
ನಗರ ಮತ್ತು ಪಟ್ಟಣ ಪ್ರದೇಶದ ನಾಗರೀಕರಲ್ಲಿ ಸಮತೋಲನ ಆಹಾರ ಒದಗಿಸುವಲ್ಲಿ ಹಣ್ಣು ತರಕಾರಿಗಳ ಪಾತ್ರದ ಬಗ್ಗೆ ಅರಿವು ಮೂಡಿಸುವುದು.

II.
ಕೈತೋಟ ಮತ್ತು ತಾರಸಿ ತೋಟಗಳಲ್ಲಿ ತರಕಾರಿ ಬೆಳೆಗಳನ್ನು ಸ್ವತಃ ಸಾವಯವ ಪದ್ಧತಿಯಲ್ಲಿ ಉತ್ಪಾದಿಸಲು ತಾಂತ್ರಿಕ ಮಾರ್ಗದರ್ಶನ ಮತ್ತು ಉತ್ತೇಜನ ನೀಡುವುದು.

III.
ಹೈಡ್ರೋಪೋನಿಕ್ಸ್ ಮಾದರಿಯಲ್ಲಿ ತರಕಾರಿ ಬೆಳೆಗಳನ್ನು ಬೆಳೆಯಲು ತಾಂತ್ರಿಕ ಮಾರ್ಗದರ್ಶನ ಮತ್ತು ಉತ್ತೇಜನ ನೀಡುವುದು.

IV.
ಸಾವಯವ ಉಳಿಕೆ ಪದಾರ್ಥಗಳನ್ನು ಬಳಸಿಕೊಂಡು ಎರೆಹುಳು ಗೊಬ್ಬರ, ಕಾಂಪೋಸ್ಟ್ ಇತ್ಯಾದಿಗಳನ್ನು ತಯಾರಿಸಿಕೊಂಡು ಮರುಬಳಕೆ ಮಾಡುವ ಬಗ್ಗೆ ಉತ್ತೇಜನ ಹಾಗೂ ಮಳೆ ನೀರು ಕೊಯ್ಲು ಹಾಗೂ ಅಡಿಗೆ ಮನೆಯಲ್ಲಿ ಬಳಕೆಯಾದ ನೀರನ್ನು ಸದ್ಬಳಕೆ ಮಾಡುವ ಬಗ್ಗೆ ಮಾಹಿತಿ ನೀಡುವುದು.

V.
ಕುಟುಂಬದ ಸದಸ್ಯರು ಅದರಲ್ಲೂ ಮಹಿಳೆಯರು ಮತ್ತು ಮಕ್ಕಳಲ್ಲಿ ಕೈತೋಟ ಮತ್ತು ತಾರಸಿ ತೋಟಗಳಲ್ಲಿ ಪ್ರಾರಂಭದಿಂದಲ್ಲೇ ಆಸಕ್ತಿ ಮೂಡಿಸಿ ದೈಹಿಕ/ಮಾನಸಿಕ ಆರೋಗ್ಯದ ಪ್ರಾಮುಖ್ಯತೆ, ಸಮತೋಲನ ಆಹಾರ, ಒತ್ತಡ ನಿರ್ವಹಣೆ, ಪರಿಸರ ಕಾಳಜಿ ಬಗ್ಗೆ ಅರಿವು ಮೂಡಿಸುವುದು.

**2019-20** ನೇ ಸಾಲಿನ ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ದಿಗಾಗಿ ಉತ್ತೇಜನ ಯೋಜನೆಯ ಘಟಕಗಳು**,** ಅದಕ್ಕೆ ತಗಲುವ ಕಾಂಪೋನೆಂಟ್ ವಾರು ವೆಚ್ಚಗಳು ಇತ್ಯಾದಿ ವಿವರಗಳು ಕೆಳಕಂಡಂತಿದೆ**.**

| ಕ್ರ.ಸಂ | ಘಟಕ | ಭೌತಿಕ ಗುರಿ (ಸಂಖ್ಯೆ) | ಘಟಕ ವೆಚ್ಚ (ರೂ.ಲಕ್ಷಗಳಲ್ಲಿ) | ಆರ್ಥಿಕ ಗುರಿ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಕೈತೋಟ ತರಬೇತಿ ಮತ್ತು ಕಿಟ್ ವಿತರಣೆ -100 ಸಂಖ್ಯೆ | 31 ಘಟಕ (310 ಸಂಖ್ಯೆ ಸದಸ್ಯರು) | 0.75 | 23.25 |
| 2 | ತಾರಸಿ ತೋಟದ ತರಬೇತಿ ಮತ್ತು ಕಿಟ್ ವಿತರಣೆ – 100 ಸಂಖ್ಯೆ | 100 ಘಟಕ (1000 ಸಂಖ್ಯೆ ಸದಸ್ಯರು) | 0.75 | 75.00 |
| 3 | ಆಡಳಿತಾತ್ಮಕ ವೆಚ್ಚ | | | 1.75 |
| ಒಟ್ಟು | | | | **100.00** |

**7.** ತೋಟಗಾರಿಕಾ ವಿಸ್ತರಣೆ**:**

ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಗೆ ವಿಪುಲ ಅವಕಾಶಗಳಿರುತ್ತವೆ. ರಾಜ್ಯದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಪಕವಾಗಿ ತೋಟಗಾರಿಕೆ ಅಭಿವೃದ್ಧಿಯಲ್ಲಿ ಬಳಸಲು ಆಧುನಿಕ ತಂತ್ರ ಜ್ಞಾನದ ಪ್ರಸರಣ ಅತಿ ಅವಶ್ಯಕವಾಗಿರುತ್ತದೆ. ಈ ದಿಸೆಯಲ್ಲಿ ತಂತ್ರ ಜ್ಞಾನ ಮತ್ತು ಮಾಹಿತಿಯನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ರೈತರಿಗೆ ಉಪಯೋಗವಾಗುವ ರೀತಿಯಲ್ಲಿ ತಿಳಿಯಪಡಿಸಲು ಹಲವಾರು ಮಾಧ್ಯಮಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಇಲಾಖೆಯು 'ತೋಟಗಾರಿಕೆ ವಿಸ್ತರಣೆ' ಎಂಬ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕೆಳಕಂಡ **7** ಪ್ರಮುಖ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

1. ತೋಟಗಾರಿಕೆ ಮಾಹಿತಿ ಕೇಂದ್ರದ ಚಟುವಟಿಕೆಗಳು
2. ತೋಟಗಾರಿಕೆ ತರಬೇತಿ ಕಾರ್ಯಕ್ರಮಗಳು
3. ಹಾರ್ಟಿ ಕ್ಲಿನಿಕ್ ಚಟುವಟಿಕೆಗಳು
4. ಫಲಪುಷ್ಪ ಪ್ರದರ್ಶನ
5. ಕೌಶಲ್ಯ ಅಭಿವೃದ್ಧಿ ತರಬೇತಿ
6. ನೋಂದಾಯಿತ ರೈತರುಗಳಿಗೆ ಮೊಬೈಲ್ ಸಂದೇಶಗಳ ಮೂಲಕ ಮಾಹಿತಿ ರವಾನೆ (e-SAP: Electronic Solutions against Agricultural Pest Management)

7. ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ತೋಟಗಾರಿಕೆ ವಿಸ್ತರಣೆ (PPP- Extension: Public Private Partnership for Horticulture Extension)

**I .** ತೋಟಗಾರಿಕೆ ಮಾಹಿತಿ ಕೇಂದ್ರದ ಚಟುವಟಿಕೆಗಳು

1. ತೋಟಗಾರಿಕೆಯಲ್ಲಿ ಆದ ನೂತನ ತಾಂತ್ರಿಕತೆ ಬಗ್ಗೆ ಆಸಕ್ತ ರೈತರಿಗೆ ಮತ್ತು ಸಾರ್ವಜನಿಕರಿಗೆ ಮಾಹಿತಿ ನೀಡುವುದು ಇದರ ಸಲುವಾಗಿ ಜಿಲ್ಲಾ ಮಟ್ಟದಲ್ಲಿ/ ರಾಜ್ಯ ಮಟ್ಟದಲ್ಲಿ/ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ/ ತರಬೇತಿ/ ತೋಟಗಾರಿಕಾ ಫಲಪುಷ್ಪ ಪ್ರದರ್ಶನಗಳನ್ನು ಏರ್ಪಡಿಸುವುದು.
2. ತೋಟಗಾರಿಕೆ ಬೆಳೆಗಳ ಬೇಸಾಯದ ಬಗ್ಗೆ ತಾಂತ್ರಿಕ ಕೈಪಿಡಿಗಳ ಮತ್ತು ಇಲಾಖಾ ಯೋಜನೆಗಳ ಬಗ್ಗೆ ಸಿ.ಡಿ. ಗಳು/ ಹಸ್ತ ಪ್ರತಿ/ ಕಿರು ಹೊತ್ತಿಗೆಗಳನ್ನು ಮುದ್ರಿಸಿ ರೈತರಿಗೆ ತೋಟಗಾರಿಕೆ ಇಲಾಖಾ ತಾಂತ್ರಿಕ ವಿಸ್ತರಣಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಉನ್ನತ ಮಟ್ಟದ ತರಬೇತಿಯನ್ನು ನೀಡಿ, ತಾಂತ್ರಿಕ ಜ್ಞಾನವನ್ನು ವೃದ್ಧಿಸುವುದು.
3. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಫಲಪುಷ್ಪ ಪ್ರದರ್ಶನ, ಮಾವು ಮತ್ತು ಹಲಸು ಪ್ರದರ್ಶನ ಹಾಗೂ ಮಾರಾಟ ಮೇಳ, ಇಂಟರ್ ನ್ಯಾಷನಲ್ ಫ್ಲೋರಾ ಎಕ್ಸ್‌ಪೋ, ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನ, ದಸರಾ ವಸ್ತು ಪ್ರದರ್ಶನ, ಕೃಷಿ ಮೇಳ, ತೋಟಗಾರಿಕೆ ಟ್ರೇಡ್‌ಫೇರ್ ಇತ್ಯಾದಿ ಪ್ರದರ್ಶನಗಳಲ್ಲಿ ಇಲಾಖಾ ಮಳಿಗೆ ಏರ್ಪಡಿಸಿ ಭಾಗವಹಿಸುವುದು ಹಾಗೂ ಇಲಾಖೆಯ ಸಾಧನೆ /ಪ್ರಗತಿಯನ್ನು ಪ್ರತಿಬಿಂಭಿಸುವುದು.
4. ಸಭೆ/ಸಮಾರಂಭ, ತರಬೇತಿ, ತೋಟಗಾರಿಕೆ ದಿನಾಚರಣೆ, ವಿಚಾರ ಸಂಕಿರಣ, ಕಾರ್ಯಾಗಾರಗಳನ್ನು ಏರ್ಪಡಿಸುವುದು.
5. ಪ್ರಚಾರ ಸಾಮಗ್ರಿ, ತೋಟಗಾರಿಕೆ ತರಬೇತಿ ಕೇಂದ್ರಗಳ ಕೈಪಿಡಿ, ತಾಂತ್ರಿಕ ಕೈಪಿಡಿ, ಮೊಬೈಲ್ ಸಂದೇಶ, ಗೋಡೆ ಕ್ಯಾಲೆಂಡರ್, ಡೆಸ್ಕ್ ಟಾಪ್ ಕ್ಯಾಲೆಂಡರ್, ಬ್ಲೋ-ಆಪ್ಸ್, ಚಾರ್ಟ್, ಸಿ.ಡಿ. ಹಾಗೂ ಸಂಬಂಧಿತ ವಿದ್ಯುನ್ಮಾನ ಉಪಕರಣಗಳ ಖರೀದಿ, Electronic Gadgets-LED, Interactive Display systems, TV, ಇತ್ಯಾದಿಗಳ ಖರೀದಿ, ಜಾಹೀರಾತು ವೆಚ್ಚ ಇಲಾಖಾ ಪ್ರಕಟಣೆಗಳು ಇತ್ಯಾದಿಗಳ ತಯಾರಿಕೆ, ಮುದ್ರಣ ಹಾಗೂ ವಿತರಣೆ.
6. ದೂರವಾಣಿ/ ಕಂಪ್ಯೂಟರ್/ ಇಂಟರ್ ನೆಟ್, ಲೇಖನ ಸಾಮಗ್ರಿ ವೆಚ್ಚ, ಇಂಧನ ವೆಚ್ಚ, ಸಾದಿಲ್ವಾರು ವೆಚ್ಚ.
7. ಬೆಳಗಾವಿ ಅಧೀವೇಶನದಲ್ಲಿ ಮಾಹಿತಿ ಒದಗಿಸಲು ಸಾದಿಲ್ವಾರು ವೆಚ್ಚದಲ್ಲಿ ಖರ್ಚು ಭರಿಸುವುದು.
8. ಹಿಸತೋನಿ (ಹುಳಿಮಾವು)ರ ತರಬೇತಿ ಹಾಗೂ ತೋಜಂನಿ (ಯೋಜನೆ) ಶಾಖೆಯ ವೆಚ್ಚ, ಸಾದಿಲ್ವಾರು ವೆಚ್ಚ, ಕಂಪ್ಯೂಟರ್ ಆಪರೇಟರ್ ವೇತನ, ಮುದ್ರಣ ವೆಚ್ಚ ಇತ್ಯಾದಿ.

**II.** ಹಾರ್ಟಿಕ್ಲಿನಿಕ್ ನಿರ್ವಹಣೆ:

ರಾಜ್ಯದಲ್ಲಿ 29 (ರಾಜ್ಯ ಮಟ್ಟ-1, ಜಿಲ್ಲಾ ಮಟ್ಟ-28) ಹಾರ್ಟಿಕ್ಲಿನಿಕ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

1. ಹಾರ್ಟಿಕ್ಲಿನಿಕ್‌ಗಳು ಆಧುನಿಕ ಮಾಹಿತಿ ತಂತ್ರಜ್ಞಾನ ಬಳಸಿಕೊಂಡು ರೈತರಿಗೆ ಅಪೇಕ್ಷಿತ ತಾಂತ್ರಿಕ ಸಲಹೆ ನೀಡಲಾಗುವುದು.
2. ಹಾರ್ಟಿಕ್ಲಿನಿಕ್‌ಗಳು ತೋಟಗಾರಿಕೆ ಅಭಿವೃದ್ಧಿಗೆ ಏಕಗವಾಕ್ಷಿ ರೂಪದ ಸಲಹಾ ಸೇವಾ ಕೇಂದ್ರಗಳಾಗಿರುತ್ತವೆ.
3. ಕ್ಷೇತ್ರ ಮಟ್ಟದಲ್ಲಿ ತೋಟಗಾರಿಕೆ ಮಾಹಿತಿ ಮತ್ತು ತಾಂತ್ರಿಕತೆಗಳ ವಿಸ್ತರಣೆ ತೋಟಗಾರಿಕೆ ಬೆಳೆಗಳ ಮಾರುಕಟ್ಟೆ ಮತ್ತು ಹವಮಾನ ಆಧಾರಿತ ಮಾಹಿತಿಗಳ ಪೂರೈಕೆ, ನೂತನ ಸಂಪರ್ಕ ಜಾಲ ಸೌಕರ್ಯಗಳಿಂದ ಅಗತ್ಯ ಮಾಹಿತಿಗಳನ್ನು ಲಭ್ಯ ಪಡಿಸಲಾಗುವುದು.
4. ಆಧುನಿಕ ತಂತ್ರಜ್ಞಾನವನ್ನು ಮತ್ತು ಇಲಾಖೆಯ ಯೋಜನಾ ಚಟುವಟಿಕೆಗಳನ್ನು ಸಾಕ್ಷ್ಯ ಚಿತ್ರ ಮುಖೇನ ತೋರಿಸುವುದು.
5. ವಿಷಯ ತಜ್ಞರು/ ಪ್ರಗತಿಪರ ರೈತರು/ ಸಂಸ್ಥೆಗಳಿಂದ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ / ಸಂವಾದಗಳ ಆಯೋಜನೆ.
6. ರೈತರಿಗೆ ಬೇಕಾದ ಮಾಹಿತಿಯನು ಸಂಗ್ರಹಿಸುವುದು, ಯೋಜನಾ ಪ್ರಸ್ತಾವನೆಗಳನ್ನು ತಯಾರಿಸುವುದು, ರೈತರಿಗಾಗಿ ಸಭೆಗಳನ್ನು ಏರ್ಪಡಿಸುವುದು.
7. ಹಾರ್ಟಿ ಕ್ಲಿನಿಕ್ ಕಟ್ಟಡ ದುರಸ್ತಿ ಮತ್ತು ನವೀಕರಣ ಮತ್ತು ನಿರ್ವಹಣೆ.
8. ವಿಷಯತಜ್ಞರ ಸಂಭಾವನೆ (ರೂ.20,000/-)/ಕಂಪ್ಯೂಟರ್ ಆಪರೇಟರ್ ಸಂಭಾವನೆ (ರೂ.8,000/-) ಪ್ರತಿ ತಿಂಗಳಿಗೆ) ಮತ್ತು ನಿರ್ವಹಣೆ, ವಾಹನ ಬಾಡಿಗೆ ಮತ್ತು ಸಾದಿಲ್ವಾರು ವೆಚ್ಚ.
9. ರೈತರಿಗೆ/ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು, ಅಧ್ಯಯನ ಪ್ರವಾಸ ಏರ್ಪಡಿಸುವುದು, ಅಧಿಕಾರಿಗಳಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ತ್ರೈಮಾಸಿಕ ತರಬೇತಿ ಕಾರ್ಯಾಗಾರಗಳನ್ನು ಏರ್ಪಡಿಸುವುದು.

10. ತೋಟಗಾರಿಕೆ ಅಭಿವೃದ್ಧಿಗೆ ತಾಂತ್ರಿಕ ಸಿಬ್ಬಂದಿಯನ್ನು ಗುರುತಿಸಿ ಒದಗಿಸುವ ನೋಡಲ್ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ.

**III.** ತೋಟಗಾರಿಕೆ ತರಬೇತಿ ಕಾರ್ಯಕ್ರಮಗಳು:

ರೈತ ಮಕ್ಕಳಿಗಾಗಿ **10** ತಿಂಗಳ ವಸತಿ ಸಹಿತ ತೋಟಗಾರಿಕೆಯಲ್ಲಿ ಪ್ರಾಯೋಗಿಕ ತರಬೇತಿ ಕಾರ್ಯಕ್ರಮ:

1. ರಾಜ್ಯದ 11 ತೋಟಗಾರಿಕೆ ತರಬೇತಿ ಕೇಂದ್ರಗಳಲ್ಲಿ ರೈತರ ಮಕ್ಕಳಿಗೆ ಹತ್ತು ತಿಂಗಳ ತೋಟಗಾರಿಕೆ ತರಬೇತಿ ನೀಡುವುದು. (432 ವಿದ್ಯಾರ್ಥಿಗಳು)
2. ತರಬೇತಿ ಕೇಂದ್ರಗಳಲ್ಲಿ ರೈತರಿಗೆ/ರೈತ ಮಹಿಳೆಯರಿಗೆ/ಅಧಿಕಾರಿಗಳಿಗೆ ಅಲ್ಪಾವಧಿ ತರಬೇತಿ ಕಾರ್ಯಕ್ರಮ/ ಸುಧಾರಿತ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
3. ತರಬೇತಿ ಕಾರ್ಯಕ್ರಮದ ಘಟಕವಾರು ವೆಚ್ಚಗಳನ್ನು ಸರ್ಕಾರಿ ಆದೇಶದ ಸಂಖ್ಯೆ ತೋಇ 47 ತೋಯೋಕಾ 2016, ದಿ:03-03-2017 ರ ಅನ್ವಯ ನಿಗದಿಪಡಿಸಲಾಗಿದೆ.

ತರಬೇತಿ ಕಾರ್ಯಕ್ರಮದ ಘಟಕವಾರು ವೆಚ್ಚದ ವಿವರಗಳು

| ಕ್ರ. ಸಂ | ಘಟಕ | ದರ (ರೂ. ಗಳಲ್ಲಿ) | ಒಟ್ಟು (ರೂ. ಲಕ್ಷಗಳಲ್ಲಿ) |
|---|---|---|---|
| 1 | ಶಿಷ್ಯ ವೇತನ/ವಿದ್ಯಾರ್ಥಿಗೆ (10 ತಿಂಗಳು X 432) | 1250.00 | 54.00 |
| 2 | ಪೂರಕ ತರಬೇತಿ 50 ದಿನ ಪ್ರತಿ ವಿದ್ಯಾರ್ಥಿಗೆ (432) | 70.00 | 15.120 |
| 3 | ಮಿನಿಕಿಟ್/ವಿದ್ಯಾರ್ಥಿಗೆ (432 ವಿದ್ಯಾರ್ಥಿಗಳು) | 400.00 | 1.728 |
| 4 | ಶೈಕ್ಷಣಿಕ ಪ್ರವಾಸ (432 ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ) | 1600.00 | 6.912 |
| 5 | ವಿಷಯ ತಜ್ಞರಿಗೆ ಸಂಭಾವನೆ (15 ಸಂ. X 11 ತರಬೇತಿ ಕೇಂದ್ರ) | 500.00 | 0.825 |
| 6 | ಭೋದನಾ ಸಾಮಗ್ರಿ (11 ತರಬೇತಿ ಕೇಂದ್ರ) | 10000.00 | 1.100 |
| 7 | ಅಲ್ಪಾವಧಿ ತರಬೇತಿ /ಸಾದಿಲ್ವಾರು ವೆಚ್ಚ/ಮೂಲಭೂತ ಸೌಕರ್ಯ | - | 39.47 |
| 8 | RKVY ಯೋಜನೆಯಡಿ ಉನ್ನತೀಕರಣಗೊಳಿಸಿದ 5 ತರಬೇತಿ ಕೇಂದ್ರಗಳ ನಿರ್ವಹಣೆ, (5 ತರಬೇತಿ ಕೇಂದ್ರಗಳು x1.00 ಲಕ್ಷ ) | 100000.00 | 5.000 |
| ಒಟ್ಟು | | | **124.16** |

**IV.** ಫಲಪುಷ್ಪ ಪ್ರದರ್ಶನ

ರಾಜ್ಯದ 28 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ ರೂ.3.00 ಲಕ್ಷದಂತೆ ಒಟ್ಟು 28 ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಫಲಪುಷ್ಪ ಪ್ರದರ್ಶನ/ತೋಟಗಾರಿಕೆ ಪ್ರದರ್ಶನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು. 3 ದಿನಗಳ ಪ್ರದರ್ಶನದಲ್ಲಿ ಪ್ರತಿ ದಿನಕ್ಕೆ ಅಂದಾಜು 3,000 ರಿಂದ 4,000 ಸಾರ್ವಜನಿಕರು ಫಲಪುಷ್ಪ ಪ್ರದರ್ಶನ /ತೋಟಗಾರಿಕೆ ಪ್ರದರ್ಶನ ವೀಕ್ಷಣೆಗೆ ಅನುಕೂಲ ಮಾಡಲಾಗುವುದು. ಇದರಿಂದ ಇಲಾಖೆಯ ಯೋಜನೆ ಹಾಗೂ ಪ್ರಗತಿಯ ಬಗ್ಗೆ ಹೆಚ್ಚಿನ ಪ್ರಚಾರ ನೀಡಿದಂತಾಗುವುದು ಹಾಗೂ ಅಲಂಕಾರಿಕ ಉದ್ಯಾನಕಲೆ, ಪರಿಸರ ಸಂರಕ್ಷಣೆ ಬಗ್ಗೆ ಸಾರ್ವಜನಿಕರಲ್ಲಿ ಕಾಳಜಿ ಮೂಡಿಸಲಾಗುವುದು. ಮೈಸೂರು ಫಲಪುಷ್ಪ ಪ್ರದರ್ಶನಕ್ಕೆ ಹೆಚ್ಚುವರಿ ಅನುದಾನವನ್ನು ನೀಡುವುದು.

ವಿವಿಧ ಜಿಲ್ಲೆಗಳ ಫಲಪುಷ್ಪ ಪ್ರದರ್ಶನಕ್ಕೆ ಹೆಚ್ಚುವರಿ ಅನುದಾನವನ್ನು ಬೇಡಿಕೆ ಅನುಸಾರ ಅನುದಾನ ಲಭ್ಯತೆ ಆಧರಿಸಿ ನೀಡುವುದು ಹಾಗೂ ನಿರ್ದೇಶನಾಲಯದಿಂದ ಅನುಮೋದನೆ ಪಡೆದು ಅವಶ್ಯಕತೆಗನುಗುಣವಾಗಿ ಘಟಕಗಳಲ್ಲಿ ಮಾರ್ಪಡು ಮಾಡಿಕೊಂಡು ಅನುಷ್ಠಾನಗೊಳಿಸುವುದು.

**VI.** ಕೌಶಲ್ಯ ಅಭಿವೃದ್ಧಿ ತರಬೇತಿ

ಗ್ರಾಮೀಣ ಯುವಕರಿಗೆ ಕೌಶಲಾಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ತನ್ಮೂಲಕ ಸ್ವಯಂ ಉದ್ಯೋಗ/ ಉದ್ದಿಮೆದಾರರ ಅಡಿಯಲ್ಲಿ ಕಾರ್ಯನಿರ್ವಹಿಸುವ ತರಬೇತಿ ಕಾರ್ಯಕ್ರಮಗಳನ್ನು

ರೂಪಿಸುವುದು. ಕೌಶಲಾಭಿವೃದ್ಧಿ ತರಬೇತಿಗಳನ್ನು ಆಯೋಜಿಸಿ ಸ್ವಯಂ ಉದ್ಯೋಗ/ಉದ್ದಿಮೆದಾರರ ಅಡಿಯಲ್ಲಿ ಕಾರ್ಯನಿರ್ವಹಿಸಲು ಗ್ರಾಮೀಣ ಯುವಜನತೆಗೆ ಅನುವು ಮಾಡಿಕೊಡುವುದು.

ಯೋಜನೆಯ ಮುಖ್ಯ ಉದ್ದೇಶಗಳು:

1. ತೋಟಗಾರಿಕೆ ಕ್ಷೇತ್ರದಲ್ಲಿ ಉದ್ಯಮ ಬೆಳವಣಿಗೆಗೆ ಅವಶ್ಯವಿರುವ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು.
2. ಗ್ರಾಮೀಣ ಯುವ ಜನತೆಯಲ್ಲಿ ಕೌಶಲಾಭಿವೃದ್ಧಿಪಡಿಸುವ ಸ್ವಯಂ ಉದ್ಯೋಗ/ತೋಟಗಾರಿಕೆ ಉದ್ದಿಮೆದಾರರ ಅಡಿಯಲ್ಲಿ ಅವರ ಜೀವನೋಪಾಯವನ್ನು ಕಂಡುಕೊಳ್ಳಲು ಅನುವು ಮಾಡಿಕೊಡುವುದು.
3. ಆಧುನಿಕ ತೋಟಗಾರಿಕೆ ತಂತ್ರಜ್ಞಾನವನ್ನು ಅಳವಡಿಸಿಕೊಂಡು ರೈತರ ಆದಾಯವನ್ನು ವೃದ್ಧಿಸಿಕೊಳ್ಳಲು ತರಬೇತಿ ನೀಡುವುದು.

ಕೌಶಲಾಭಿವೃದ್ಧಿ ತರಬೇತಿಗಳನ್ನು 5 ಉತ್ಕೃಷ್ಟ ಕೇಂದ್ರಗಳು, ತರಬೇತಿ ಕೇಂದ್ರ, ಲಾಲ್‌ಬಾಗ್ ಮತ್ತು ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು ಇಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ತರಬೇತಿಯಲ್ಲಿ 20 ರಿಂದ 30 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು ಹಾಗೂ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ರವರ ಅಧಿಕೃತ ವೆಬ್‌ಸೈಟ್‌ನಲ್ಲಿ ತೋಟಗಾರಿಕೆ ತರಬೇತಿಗಳಿಗಾಗಿ ದಾಖಲಿಸಿರುವ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡುವುದು. ರೈತರ ಮಕ್ಕಳಿಗೆ ಆದ್ಯತೆ ನೀಡಲಾಗುವುದು.

ಈ ತರಬೇತಿ ಕಾರ್ಯಕ್ರಮಗಳ ಅವಧಿ ಒಂದು ವಾರದಿಂದ ನಾಲ್ಕು ವಾರಗಳಾಗಿರುತ್ತದೆ ಹಾಗೂ ತರಬೇತಿಯಲ್ಲಿ ಪ್ರತಿ ಅಭ್ಯರ್ಥಿಗೆ ಪ್ರತಿ ದಿನಕ್ಕೆ ರೂ.400/-ಗಳ ವೆಚ್ಚ ಭರಿಸುವುದು. ಸದರಿ ವೆಚ್ಚದಲ್ಲಿ ದಿನಭತ್ಯೆ, ಪ್ರವಾಸ ಭತ್ಯೆ, ವಿಷಯ ತಜ್ಞರಿಗೆ ಸಂಭಾವನೆ, ಪ್ರಚಾರ & ತಾಂತ್ರಿಕ ಹೊತ್ತಿಗೆಗಳು (Study Material)/ಲೇಖನ ಸಾಮಗ್ರಿ ಇತ್ಯಾದಿಗಳಿಗೆ ಅನುದಾನವನ್ನು ನಿಯಮಾನುಸಾರ ಭರಿಸುವುದು.

2019-20 ನೇ ಸಾಲಿನಲ್ಲಿ ಕೌಶಲಾಭಿವೃದ್ಧಿ ತರಬೇತಿಗಳನ್ನು ಏರ್ಪಡಿಸಲು ಒಟ್ಟಾರೆಯಾಗಿ ರೂ.25.00 ಲಕ್ಷಗಳ ಅನುದಾನದಲ್ಲಿ ನೀಡಲು ಯೋಜಿಸಲಾಗಿದೆ.

## VII. ನೋಂದಾಯಿತ ರೈತರುಗಳಿಗೆ ಮೊಬೈಲ್ ಸಂದೇಶಗಳ ಮೂಲಕ ಮಾಹಿತಿ ರವಾನೆ (e-SAP: Electronic Solutions against Agricultural Pest Management)

ರಾಜ್ಯದ ತೋಟಗಾರಿಕೆ ಬೆಳೆಗಾರರಿಗೆ ಆಧುನಿಕ ತೋಟಗಾರಿಕೆ ಬೇಸಾಯ ಪದ್ಧತಿ, ಸಮಗ್ರ ಕೀಟ/ರೋಗ ನಿರ್ವಹಣಾ ಪದ್ಧತಿ ಹಾಗೂ ಇತರೆ ತೋಟಗಾರಿಕೆ ಚಟುವಟಿಕೆಗಳ ಕುರಿತು ಸಕಾಲದಲ್ಲಿ ಸಮರ್ಪಕ ತಾಂತ್ರಿಕ ಹಾಗೂ ಮಾರುಕಟ್ಟೆ ಮಾಹಿತಿಯನ್ನು ನೀಡುವುದು ಪ್ರಮುಖ ಉದ್ದೇಶವಾಗಿರುತ್ತದೆ.

e-SAP ಚಟುವಟಿಕೆ ಒಂದು ಆಧುನಿಕ ಮತ್ತು ಮಹತ್ತರದ ವಿಧಾನವಾಗಿರುತ್ತದೆ. ಈ ತಂತ್ರಾಂಶ ರೈತರಿಗೆ ಸಕಾಲದಲ್ಲಿ ಕೀಟ/ ರೋಗ ಭಾದೆ ಮತ್ತು ಪೋಷಕಾಂಶಗಳ ನಿರ್ವಹಣೆಯನ್ನು ನೀವಾರಿಸಲು ಮಾಹಿತಿ ಪ್ರಸಾರ ಮಾಡುವ ತಂತ್ರಜ್ಞಾನವಾಗಿರುವುದರಿಂದ, ರೈತರಿಗೆ ಸಕಾಲದಲ್ಲಿ ಮಾಹಿತಿ ದೊರೆತು ತನ್ಮೂಲಕ ಬೆಳೆಗಳ ಇಳುವರಿ ಮತ್ತು ಉತ್ಪಾದಕತೆಯನ್ನು ಹೆಚ್ಚುಸುವಲ್ಲಿ ಸಹಕಾರಿಯಾಗಿರುತ್ತದೆ. ಈ ತಂತ್ರಜ್ಞಾನದಿಂದ ನೀತಿ ನಿರೂಪಕರಿಗೆ, ಆಡಳಿತಗಾರರಿಗೆ ಸಂಶೋಧನಾ ನಿರತರಿಗೆ ಕ್ಷೇತ್ರ ಮಟ್ಟದ ಸ್ಥಿತಿಗತಿಗಳನ್ನು ಅರಿಯಲು ಅತ್ಯುತ್ತಮ ವೇದಿಕೆಯಾಗಿರುತ್ತದೆ. ವಿಸ್ತರಣಾ ಕಾರ್ಯಕರ್ತರಿಗೆ, ವಿಜ್ಞಾನಿಗಳಿಗೆ, ಅಧಿಕಾರಿಗಳಿಗೆ ತರಬೇತಿಯನ್ನು ಸಹ ನೀಡಲಾಗುವುದು.

### e-SAP ಚಟುವಟಿಕೆಗಳ ವಿವರಗಳು:

| ಕ್ರ. ಸಂ | ಚಟುವಟಿಕೆಗಳು | ಭೌತಿಕ (ಸಂಖ್ಯೆ) | ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| 1 | 30 ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು/ವಿಷಯ ಪರಿಣಿತರು/8 ಇಲಾಖಾಧಿಕಾರಿಗಳು ಒಟ್ಟಾರೆಯಾಗಿ 370 SIM ಮಾಸಿಕ ನಿರ್ವಹಣಾ ವೆಚ್ಚ ರೂ. 500/- ಪ್ರತಿ ತಿಂಗಳಿಗೆ, 12 ತಿಂಗಳ ಕಾಲ (ಏಪ್ರಿಲ್- 2019 ರಿಂದ ಮಾರ್ಚ 2020) (500x370x12) ಇತ್ಯಾದಿ. | **370** | **22.20** |

## VII. ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ತೋಟಗಾರಿಕೆ ವಿಸ್ತರಣೆ
**(PPP- Extension: Public Private Partnership for Horticulture Extension)**

ತೋಟಗಾರಿಕೆ ಕ್ಷೇತ್ರವು ತೀವ್ರಗತಿಯಲ್ಲಿ ಬೆಳೆಯುತ್ತಿದ್ದು ಆಧುನಿಕ ತಾಂತ್ರಿಕತೆ, ಆವಿಷ್ಕಾರಗಳು, ಮಾರುಕಟ್ಟೆ ಮಾಹಿತಿ, ರಫ್ತು ಗುಣಮಟ್ಟದ ತೋಟಗಾರಿಕೆ ಉತ್ಪನ್ನಗಳ ಉತ್ಪಾದನೆಗೆ ಆಧ್ಯತೆಯನ್ನು ನೀಡಿ, ರೈತರ ಆದಾಯವನ್ನು ಹೆಚ್ಚಿಸಲು ಸಕಾಲದಲ್ಲಿ ಸಮಯೋಚಿತವಾಗಿ ರೈತರಿಗೆ ಮಾರ್ಗದರ್ಶನ ನೀಡಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ತೋಟಗಾರಿಕೆ ವಿಸ್ತರಣಾ ಚಟುವಟಿಕೆಗಳನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರ ರೈತರಿಗೆ ಸಕಾಲದಲ್ಲಿ ಮಾರ್ಗದರ್ಶನ ನೀಡುವ ಸಲುವಾಗಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ತೋಟಗಾರಿಕೆ ವಿಸ್ತರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು 2016-17 ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ನಿರ್ದೇಶನಾಲಯದ ಹಂತದಲ್ಲಿ ಸಲಹಾ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯ ಸಲಹೆ ಮೇರೆಗೆ ಕಾರ್ಯಕ್ರಮದ ರೂಪುರೇಷಗಳನ್ನು ಸಿದ್ಧಪಡಿಸಲಾಗಿರುವ ಹಿನ್ನೆಲೆಯಲ್ಲಿ ಈ ಘಟಕ ಕಾರ್ಯಕ್ರಮ ಹೊಸ ಚಟುವಟಿಕೆಯಾಗಿರುವುದರಿಂದ ಸರ್ಕಾರಕ್ಕೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆಯನ್ನು ಪಡೆಯಲಾಗಿದೆ. ಪ್ರಮುಖಾಂಶಗಳು ಕೆಳಕಂಡಂತೆ ಇವೆ.

1. Pilot Basis ಆಧಾರದ ಮೇಲೆ ಪ್ರಾಯೋಗಿಕವಾಗಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ತೋಟಗಾರಿಕೆ ವಿಸ್ತರಣೆ (PPP-Extension) ಯೋಜನೆಯನ್ನು ವಿಜಯಪುರ, ಚಿತ್ರದುರ್ಗ, ಕೋಲಾರ, ಮೈಸೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು.
2. ಖಾಸಗಿ ವಿಸ್ತರಣಾ ಸಂಸ್ಥೆಗಳ/ಪರಿಣಿತರ ಸೇವೆಯನ್ನು ಈಗಾಗಲೇ ಪಟ್ಟಿ ಮಾಡಿದ 17 ಸಂಸ್ಥೆಗಳ ವತಿಯಿಂದ ಅಥವಾ ಸಂಬಂಧಿಸಿದ ಜಿಲ್ಲೆಗಳ ಹಾಗೂ ಆಯ್ಕೆ ಮಾಡಿದ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ರವರ ಅನುಭವದ ಆಧಾರದ ಮೇಲೆ ಗುರುತಿಸಿದ ಖಾಸಗಿ ಸಂಸ್ಥೆಗಳು/ಪರಿಣಿತರಿಂದ ವಿಸ್ತರಣೆ ಸೇವೆಯನ್ನು ಪಡೆಯಬಹುದಾಗಿರುತ್ತದೆ.
3. ಖಾಸಗಿ ವಿಸ್ತರಣಾ ಸೇವೆ ನೀಡುವ ಸಂಸ್ಥೆ/ಪರಿಣಿತರು, ರೈತರ ಬೇಡಿಕೆಯನ್ವಯ ತಾಕುಗಳಿಗೆ ಭೇಟಿ ನೀಡಿ Geo Tagged Photos ನೊಂದಿಗೆ ತಾವು ಸಹಿ ಮಾಡಿದ ಸಲಹೆ-ಸೂಚನೆಗಳ ಪತ್ರ ಹಾಗೂ ರೈತರಿಂದ ತೃಪ್ತಿಕರ ಪತ್ರವನ್ನು ಪಡೆದು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರ/ತಾಲ್ಲೂಕು/ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರುಗಳಿಗೆ ನೀಡಿ, ಅವರಿಂದ ಅರ್ಹ ಸೇವಾ ಶುಲ್ಕವನ್ನು ಪಡೆಯಬಹುದಾಗಿರುತ್ತದೆ.
4. ಪ್ರಾಯೋಗಿಕವಾಗಿ ಖಾಸಗಿ ವಿಸ್ತರಣಾ ಸೇವೆ ನೀಡುವ ಸಂಸ್ಥೆಗಳು/ ಪರಿಣಿತರಿಗೆ ನೀಡುವ ಶುಲ್ಕವನ್ನು ಒಂದು ಭೇಟಿಗೆ (Per visit) ಶೇ.50 ರಷ್ಟು ಸಹಾಯಧನ (ಗರಿಷ್ಠ ಮಿತಿ ರೂ.500/- ವರೆಗೆ) ಸೇವಾ ಶುಲ್ಕವನ್ನು ನೀಡಬಹುದಾಗಿರುತ್ತದೆ. ಉಳಿದ ಶುಲ್ಕವನ್ನು ರೈತರ ವತಿಯಿಂದ ಭರಿಸಬಹುದಾಗಿರುತ್ತದೆ. ಪ್ರತಿ ಜಿಲ್ಲೆಯಲ್ಲಿ 1000 ರೈತರ ತಾಕುಗಳ ಭೇಟಿ, ಪ್ರತಿ ಬೇಟಿಗೆ ರೂ.500/- ರಂತೆ ಒಂದು ಜಿಲ್ಲೆಗೆ ಒಟ್ಟು ರೂ.5.00 ಲಕ್ಷಗಳು ಬೇಕಾಗುತ್ತದೆ.

ಈ ಯೋಜನೆಯನ್ನು ಮೇಲ್ಕಂಡ ಐದು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ತಲಾ ಒಂದು ಜಿಲ್ಲೆಗೆ ರೂ.5.00 ಲಕ್ಷಗಳಂತೆ ಒಟ್ಟಾರೆ ರೂ.25.00 ಲಕ್ಷಗಳ ಅನುದಾನ ಬೇಕಾಗಿರುತ್ತದೆ. ಈ ಅನುದಾನವನ್ನು ಸಮಗ್ರ ತೋಟಗಾರಿಕೆ ಅಭಿವೃದ್ಧಿ- ತೋಟಗಾರಿಕೆ ವಿಸ್ತರಣೆ ಯೋಜನೆಯಡಿಯಲ್ಲಿ ಭರಿಸಲಾಗುವುದು.

2019-20 ನೇ ಸಾಲಿನಲ್ಲಿ PPP-Extension ಕಾರ್ಯಕ್ರಮಕ್ಕೆ ಪ್ರತಿ ಜಿಲ್ಲೆಗೆ ರೂ5.00 ಲಕ್ಷದಂತೆ ಒಟ್ಟಾರೆಯಾಗಿ ರೂ.25.00 ಲಕ್ಷಗಳ ಅನುದಾನದಲ್ಲಿ ನೀಡಲು ಯೋಜಿಸಲಾಗಿದೆ.

ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳಿಗೆ ಒಟ್ಟಾರೆಯಾಗಿ ರೂ500.00 ಲಕ್ಷಗಳು ಬೇಕಾಗಿರುತ್ತದೆ. 2019-20 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ (**CHD**) ಯೋಜನೆ - ತೋಟಗಾರಿಕೆ ವಿಸ್ತರಣೆ ಕಾರ್ಯಕ್ರಮ (ಲೆಕ್ಕಶೀರ್ಷಿಕೆ: 2401-00-111-0-08) ದಡಿಯಲ್ಲಿ ರೂ.500.00 ಲಕ್ಷಗಳ ಅನುದಾನವನ್ನು ನೀಡಿದೆ.

## 8. <u>ಹೂ ಕೃಷಿ ಉತ್ತೇಜನ</u>:

ಕರ್ನಾಟಕ ರಾಜ್ಯದಲ್ಲಿ ಉನ್ನತ ತಂತ್ರಜ್ಞಾನದ ಪುಷ್ಪ ಬೇಸಾಯವು 1990ರ ದಶಕದಲ್ಲಿ ಪ್ರಾರಂಭವಾಯಿತು. ಆಗ ನಮ್ಮ ರಾಜ್ಯದ ಸಾಧನೆಯು ಇಡೀ ದೇಶದ ಗಮನವನ್ನು ಸೆಳೆದಿತ್ತು. ಉನ್ನತ ತಂತ್ರಜ್ಞಾನ ಬಳಸಿ ಹಸಿರು ಮನೆಗಳಲ್ಲಿ ಗುಲಾಬಿ, ಕಾರ್ನೇಷನ್, ಜರ್ಬೆರಾ, ಸೇವಂತಿಗೆ, ಆರ್ಕಿಡ್, ಆಂಥೂರಿಯಂ ಮುಂತಾದ ಪುಷ್ಪಗಳನ್ನು ಬೆಳೆಸಿ ಆಂತರಿಕ ಮಾರುಕಟ್ಟೆಯಲ್ಲಿ ಹಾಗೂ ವಿದೇಶಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಪ್ರಯತ್ನಗಳು ಹೆಚ್ಚು ಹೆಚ್ಚು ರೈತರ ಆಸಕ್ತಿಯನ್ನು ಸೆಳೆದವು.

ಪ್ರಾರಂಭದಲ್ಲಿ ಇಂತಹ ಉನ್ನತ ತಂತ್ರಜ್ಞಾನದ ಪುಷ್ಪ ಬೇಸಾಯವು ಸಾಕಷ್ಟು ಆದಾಯವನ್ನು ಬೆಳೆಗಾರರಿಗೆ ತಂದರು, ನಂತರದ ದಿನಗಳಲ್ಲಿ ಹಲವಾರು ಕಾರಣಗಳಿಂದಾಗಿ ಈ ರಂಗದ ಬೆಳವಣಿಗೆ ಹಿಮ್ಮುಖವಾಗುವುದರ ಜೊತೆಗೆ ಇವುಗಳನ್ನು ಅವಲಂಭಿಸಿದವರಿಗೆ ನಷ್ಟ ಸಹ ಉಂಟಾಗಿ, ಅಂತಹ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕುವಂತಾಯಿತು. ಈ ಹಿನ್ನಡೆ ಮತ್ತು ಸಂಕಷ್ಟಕ್ಕೆ ಪ್ರಮುಖವಾದ ಕಾರಣಗಳೆಂದರೆ:

1. ಪ್ರಾರಂಭದಲ್ಲಿನ ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ಇದಕ್ಕಾಗಿ ತೆಗೆದುಕೊಂಡ ಸಾಲಕ್ಕೆ ಹೆಚ್ಚಿನ ಬಡ್ಡಿದರ.
2. ಸ್ಥಳೀಯ ಭಾಗಕ್ಕೆ ಸರಿ ಹೊಂದುವ ತಂತ್ರಜ್ಞಾನದ ಕೊರತೆ
3. ರಫ್ತು ಮಾರುಕಟ್ಟೆಯಲ್ಲಿ ಬೇಡಿಕೆಯ ಏರಿಳಿತಗಳು
4. ವಿಮಾನ ಮೂಲಕ ಪುಷ್ಪಗಳನ್ನು ಸಾಗಾಣಿಕೆ ಮಾಡುವ ದರ ಬಹಳ ಹೆಚ್ಚಾಗಿದ್ದು, ಇದು ರಫ್ತುದಾರರಿಗೆ ತೀವ್ರ ಹೊರೆಯಾಗಿ ಪರಿಣಮಿಸಿತು.
5. ಹಸಿರು ಮನೆಗಳ ನಿರ್ವಹಣಾ ವೆಚ್ಚದಲ್ಲಿ ತೀವ್ರ ಹೆಚ್ಚಳ.
6. ಆಮದು ಮಾಡಿಕೊಂಡ ಸಸ್ಯ ಸಾಮಗ್ರಿಗಳ ಮೇಲೆ ಹೆಚ್ಚಿನ Royalty ಅಧಿಭಾರ
7. ಹಸಿರುಮನೆ ಉದ್ಯಮಕ್ಕೆ ಬಳಸುವ ವಿದ್ಯುಚ್ಛಕ್ತಿ ಅಧಿಕ ದರ
8. ರಫ್ತು ಮಾಡಲು air cargo ವಿಮಾನಗಳ ಕನಿಷ್ಠ ಲಭ್ಯತೆ

ಈ ಎಲ್ಲಾ ಕಾರಣಗಳಿಂದಾಗಿ ಹೈಟೆಕ್ ಪುಷ್ಪೋದ್ಯಮಗಳು ಹಿನ್ನಡೆ ಅನುಭವಿಸುವುದರ ಜೊತೆಗೆ ಇದನ್ನು ಅವಲಂಬಿಸಿದ ರೈತರು/ಉದ್ದಿಮೆದಾರರು ಹೆಚ್ಚಿನ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಅನೇಕ ಘಟಕಗಳು ರೋಗಗ್ರಸ್ಥವಾಗುವಂತಹ (sick units) ಪರಿಸ್ಥಿತಿ ನಿರ್ಮಾಣವಾಗಿರುತ್ತದೆ.

<u>ಉನ್ನತ ತಂತ್ರಜ್ಞಾನದ ಪುಷ್ಪೋದ್ಯಮ ಘಟಕಗಳ ಪುನಃಶ್ಚೇತನದ ಅವಶ್ಯಕತೆ</u>

ಉನ್ನತ ತಂತ್ರಜ್ಞಾನದ ಪುಷ್ಪೋದ್ಯಮಗಳ ಉಳಿವಿಗಾಗಿ ಹಲವಾರು ಸಂಘ ಸಂಸ್ಥೆಗಳು, ರೈತ ಸಂಘಟನೆಗಳು, ಉದ್ದಿಮೆದಾರರು ಮತ್ತು ರೈತರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಮೇಲೆ ವಿವರಿಸಿದ ಎಲ್ಲಾ ತೊಂದರೆಗಳಿಗೆ ಪರಿಹಾರ ಒದಗಿಸಲು ಕಾಲಕಾಲಕ್ಕೆ ಆಗ್ರಹಿಸಿರುತ್ತಾರೆ. ಈ ಎಲ್ಲಾ ಸಮಸ್ಯೆಗಳನ್ನು ಮನಗಂಡು ತೋಟಗಾರಿಕೆ ಇಲಾಖೆಯು ಉನ್ನತ ತಂತ್ರಜ್ಞಾನದ ಪುಷ್ಪೋದ್ಯಮದ ಘಟಕಗಳ ಪುನಃಶ್ಚೇತನಕ್ಕೆ 2019-20 ನೇ ಸಾಲಿಗೆ ಮುಂದುವರೆಸಿ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಈ ಕೆಳಕಾಣಿಸಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

<u>ಯೋಜನಾ ವಿವರಗಳು</u>**:**

2019-20 ನೇ ಸಾಲಿನಲ್ಲಿ ರೂ.250.00 ಲಕ್ಷಗಳ ಅನುದಾನವನ್ನು ಈ ಕೆಳಕಾಣಿಸಿದ ಕಾರ್ಯಕ್ರಮಗಳಿಗೆ ವಿನಿಯೋಗಿಸಲು ಯೋಜಿಸಲಾಗಿದೆ

**1.** <u>ಹಸಿರು ಮನೆಗಳಲ್ಲಿ ಹಳೆಯ ಗಿಡಗಳನ್ನು ಬದಲಾಯಿಸಿ ಹೊಸ ಗಿಡಗಳನ್ನು ನೆಡಲು ಸಹಾಯಧನ</u> **<u>(Subsidy for Replanting in Greenhouses)</u>**

ಈಗಾಗಲೇ ಇರುವ ಅನೇಕ ಪುಷ್ಪ ಘಟಕಗಳು ಅದರಲ್ಲೂ ಮುಖ್ಯವಾಗಿ ಗುಲಾಬಿ ಬೆಳೆಯುವ ಹಸಿರು ಮನೆಯಲ್ಲಿನ ತಳಿಗಳು ಹಳೆಯದಾಗಿದ್ದು (outdated) ಮತ್ತು ರೋಗ ರುಜಿನಗಳ ಬಾಧೆಯಿಂದ ಹಾಳಾಗಿದ್ದು ಅವುಗಳನ್ನು ಕಿತ್ತು ಹೊಸ ತಳಿ/ಹೊಸ ಗಿಡಗಳನ್ನು ನೆಡುವ ಅವಶ್ಯಕತೆ ಇರುತ್ತದೆ. ಇದರಿಂದ ಈ ಹೂಗಳ ಉತ್ಪಾದಕತೆ ಹೆಚ್ಚುವುದರ ಜೊತೆಗೆ ಇವುಗಳ ಗುಣಮಟ್ಟ ಮತ್ತು ಬೇಡಿಕೆಯಲ್ಲಿ ಸುಧಾರಣೆ ಕಂಡುಬಂದು, ಬೆಳಗಾರರಿಗೆ ಹೆಚ್ಚಿನ ಆದಾಯ ಲಭಿಸುವಲ್ಲಿ ಸಹಕಾರಿಯಾಗುತ್ತದೆ. ಈ ಕ್ರಮಕ್ಕೆ ಹೆಚ್ಚಿನ ವೆಚ್ಚ ತಗಲುವ ಕಾರಣ ಬೆಳೆಗಾರರಿಗೆ ಶೇ.50 ರಷ್ಟು ಸಹಾಯಧನವನ್ನು ರೂ.**5.00** ಲಕ್ಷ ಪ್ರತಿ ಹೆಕ್ಟೇರ್ ಗೆ ಮಿತಿಗೊಳಿಸಿ ಗರಿಷ್ಠ **1** ಹೆಕ್ಟೇರ್ ವರೆಗೂ ನೀಡಲಾಗುವುದು. ರಫ್ತು ಘಟಕಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಈ ಘಟಕದಡಿ ರೂ.100.00 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ.

**2.** <u>ಹಸಿರುಮನೆಗೆ ಹೊದಿಸುವ ಪಾಲಿಥೀನ್ ಶೀಟ್ ಗಳನ್ನು ಬದಲಾಯಿಸಲು ಸಹಾಯಧನ</u> **<u>(Replacement of Polythene sheet of Green House)</u>**

ಹಸಿರುಮನೆ ಛಾವಣಿಗೆ ಹೊದಿಸಿದ UV stabilized polythene sheet ಗಳು ಸತತ ಸೂರ್ಯನ ಪ್ರಕರ ಕಿರಣಗಳು ಮತ್ತು ಮಳೆ ಗಾಳಿಗೆ ಸಿಲುಕಿ ಶಿಥಿಲಗೊಳ್ಳುವ ಕಾರಣ ಹಸಿರು ಮನೆಗಳಿಗೆ ಹೊದಿಸುವ UV stabilized polythene sheet ಅನ್ನು ಗರಿಷ್ಠ ಮೂರು ವರ್ಷಗಳಿಗೊಮ್ಮೆ ಬದಲಿಸುವ ಅವಶ್ಯಕತೆ ಇರುತ್ತದೆ. ಇದಕ್ಕೆ ಹೆಚ್ಚಿನ ವೆಚ್ಚ ತಗಲುತ್ತದೆ. ಈಗಾಗಲೇ ಆರ್ಥಿಕ ಚೈತನ್ಯ ಕಳೆದುಕೊಂಡಿರುವ ಬೆಳೆಗಾರರಿಗೆ ಇದು ಹೊರೆಯಾಗಿರುವ ಕಾರಣ ಹಾಗೂ ಹಸಿರುಮನೆಗಳ ಸದ್ಬಳಕೆಗೆ

ಮಾರ್ಗ ಮಾಡಿಕೊಡುವ ದಿಸೆಯಲ್ಲಿ ಈ ಪಾಲಿಥೀನ್ ಶೀಟ್ ಗಳ ಬದಲಾವಣೆಗೆ ಒಂದು ಹೆಕ್ಟೇರ್ ವಿಸ್ತೀರ್ಣದ ಹಸಿರು ಮನೆ ಛಾವಣಿಗೆ ಶೇ.**50** ರಂತೆ ರೂ. **3.00** ಲಕ್ಷಗಳನ್ನು ಗರಿಷ್ಠ ಮಿತಿಗೊಳಿಸಿ, 1 ಹೆಕ್ಟೇರ್ ಹಸಿರುಮನೆ ವಿಸ್ತಾರಕ್ಕೆ ನೀಡಲಾಗುವುದು. ರಫ್ತು ಘಟಕಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಈ ಘಟಕದಡಿ ರೂ.70.00 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ.

3. <u>ಅ. ಹೂ ಕೃಷಿಯ ಬಗ್ಗೆ ರೈತರಿಗೆ ತರಬೇತಿ ಕಾರ್ಯಕ್ರಮ:</u> ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನಿರ್ಮಾಣಗೊಂಡಿರುವ 3 ಪುಷ್ಪ ಹರಾಜು ಕೇಂದ್ರಗಳಲ್ಲಿ ಮತ್ತು ಉತ್ಕೃಷ್ಟ ಪುಷ್ಪ ಬೆಳೆ ಕೇಂದ್ರದಲ್ಲಿ ಪುಷ್ಪ ಬೆಳೆಯನ್ನು ಬೆಳೆಯಲು ತೊಡಗಿಸಿಕೊಂಡಿರುವ ರೈತರಿಗೆ ಹಾಗೂ ಹೂ ಬೆಳೆಯಲು ಇಚ್ಚಿಸುವ ರೈತರುಗಳಿಗೆ ಆಧುನಿಕ ಪುಷ್ಪ ಬೆಳೆ ತಂತ್ರಜ್ಞಾನಗಳಾದ ಅಧಿಕಸಾಂದ್ರ ಬೇಸಾಯ, ಸಂರಕ್ಷಿತ ಬೇಸಾಯ, ಹನಿ ನೀರಾವರಿ, ಕೊಯ್ಲೋತ್ತರ ತಂತ್ರಜ್ಞಾನ ಹಾಗೂ ಇನ್ನು ಮುಂತಾದ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ಉತ್ತಮ ಜ್ಞಾನ ಹೊಂದಿರುವ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಲು ಯೋಜಿಸಲಾಗಿದೆ. ಈ ಕಾರ್ಯಕ್ರಮದಡಿ ರೂ5.00 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ.

<u>ಆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸ್ಥಾಪಿಸಲಾಗಿರುವ **3** ಪುಷ್ಪ ಹರಾಜು ಕೇಂದ್ರಗಳು, ಪುಷ್ಪ ಬೆಳೆ ಉತ್ಕೃಷ್ಟ ಕೇಂದ್ರ ಶಿವಮೊಗ್ಗ, ಸಂರಕ್ಷಿತ ಬೇಸಾಯ ಉತ್ಕೃಷ್ಟ ಕೇಂದ್ರ, ಸೋಮನಹಳ್ಳಿ ಕಾವಲು, ಹಾಸನ</u> ಮತ್ತು ನಿರ್ದೇಶನಾಲಯದ ಪುಷ್ಪಾಭಿವೃದ್ಧಿ ವಿಭಾಗಕ್ಕೆ ಗುತ್ತಿಗೆ ಆಧಾರದ ಮೇಲೆ ವಾಹನ ಪಡೆಯುವುದು, ಭದ್ರತಾ ಸಿಬ್ಬಂದಿ, ಕಛೇರಿ ಸಹಾಯಕ ಹಾಗೂ ಬೆರಳಚ್ಚುಗಾರರನ್ನು ಪಡೆಯುವುದು, ವಿದ್ಯುತ್ ಚ್ಛಕ್ತಿ, ದೂರವಾಣಿ ವೆಚ್ಚ, ಇತ್ಯಾದಿ ನಿರ್ವಹಣೆ ಮತ್ತು ಆಡಳಿತಾತ್ಮಕ ವೆಚ್ಚಗಳನ್ನು ಭರಿಸುವುದು. ಈ ಘಟಕದಡಿ ರೂ.72.00 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ.

<u>ಇ. ಹೂ ಬೆಳೆಗಳ ಬಗ್ಗೆ ಕರಪತ್ರ ತಾಂತ್ರಿಕ ಕೈಪಿಡಿ ಮತ್ತು ಇತರೆ ಮುದ್ರಣಾ ವೆಚ್ಚಗಳು:</u> ಹೂ ಬೆಳೆಯುತ್ತಿರುವ ರೈತರಿಗೆ/ಪ್ರಾರಂಭಿಕ ಹಂತದಲ್ಲಿರುವ ಪುಷ್ಪ ಕೃಷಿಕರಿಗೆ/ಹೂ ಬೆಳೆಯಲು ಇಚ್ಚಿಸುವ ರೈತರುಗಳಿಗೆ ತಾಂತ್ರಿಕ ಮಾಹಿತಿ ವಿಸ್ತರಣೆಯಲ್ಲಿ ಇನ್ನಷ್ಟು ನೆರವಾಗಲು ಆಧುನಿಕ ಹೂ ಕೃಷಿ ತಂತ್ರಜ್ಞಾನದ ಬಗ್ಗೆ ತಾಂತ್ರಿಕ ಮಾಹಿತಿಯನ್ನು ಕರಪತ್ರ, ಕಿರು ಪುಸ್ತಕ, ತಾಂತ್ರಿಕ ಕೈಪಿಡಿಗಳನ್ನು ಮುದ್ರಿಸಿ ಹಂಚುವ ಮೂಲಕ ಹೂ ಬೇಸಾಯದಲ್ಲಿ ಹೆಚ್ಚಿನ ಯಶಸ್ಸುಗಳಿಸಲು ಉದ್ದೇಶಿಸಿದ್ದು, ಈ ಉದ್ದೇಶಕ್ಕಾಗಿ ಒಟ್ಟುರೂ.5.00 ಲಕ್ಷಗಳನ್ನು ನಿಗದಿಪಡಿಸಿದೆ.

ಈ. <u>ಉತ್ಕೃಷ್ಟ ಪುಷ್ಪ ಬೆಳೆ ಕೇಂದ್ರಕ್ಕೆ ಗುತ್ತಿಗೆ ಆಧಾರದ ಮೇಲೆ ಕ್ಷೇತ್ರದ ಅನುವುಗಾರರು ಮತ್ತು ತಾಂತ್ರಿಕ ಸಲಹೆಗಾರರ ಸೇವೆಗಳು:</u>

ಹೂ ಬೆಳೆಯುತ್ತಿರುವ ರೈತರಿಗೆ ಮತ್ತು ಹೂ ಬೆಳೆಯಲು ಇಚ್ಚಿಸುವ ರೈತರುಗಳಿಗೆ ತಾಂತ್ರಿಕ ಸಲಹೆಗಳನ್ನು ನಿರಂತರವಾಗಿ ತಲುಪಿಸಲು ಹಾಗೂ ಹೂ ಬೆಳೆಯುವ ರೈತರ ತಾಕುಗಳಿಗೆ ಭೇಟಿ ನೀಡಿ ಅವಶ್ಯವಾದ ಮಾಹಿತಿಗಳನ್ನು ನೀಡಲು ಮತ್ತು ಯೋಜನೆ ಅನುಷ್ಠಾನ ಮಾಡುವಲ್ಲಿ ಇಲಾಖೆ ಹಾಗೂ ರೈತರುಗಳ ಮಧ್ಯ ಸಂಪರ್ಕ ಬೆಸೆಯಲು ತಾಂತ್ರಿಕ ಸಲಹೆಗಾರರ ಹಾಗೂ ಕ್ಷೇತ್ರ ಅನುವುಗಾರರ ಸೇವೆ ಅವಶ್ಯಕವಾಗಿರುತ್ತದೆ. ಈ ಉದೇಶಕ್ಕಾಗಿ ತಾಂತ್ರಿಕ ಸಲಹೆಗಾರರನ್ನು ಪಡೆಯಲು ಪ್ರತಿ ತಿಂಗಳಿಗೆ ರೂ.20,000/- ರಂತೆ ಹತ್ತು ತಿಂಗಳಿಗೆ ಒಟ್ಟು ರೂ.2.00 ಲಕ್ಷಗಳು ಮತ್ತು ಕ್ಷೇತ್ರ ಅನುವುಗಾರರನ್ನು ಪಡೆಯಲು ಪ್ರತಿ ತಿಂಗಳಿಗೆ ರೂ.10,000/- ರಂತೆ ಹತ್ತು ತಿಂಗಳಿಗೆ ಒಟ್ಟು ರೂ.1.00 ಲಕ್ಷಗಳಿಗೆ ಅವಕಾಶ ಕಲ್ಪಿಸಲಾಗಿದ್ದು ಒಟ್ಟು ಮೊತ್ತ ರೂ.3.00 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ.

**4.** <u>ಭೌತಿಕ ಮತ್ತು ಆರ್ಥಿಕ ಗುರಿಗಳು</u>

2019-20 ನೇ ಸಾಲಿನಲ್ಲಿ ಮೇಲಾಣಿಸಿದ ಘಟಕ ಕಾರ್ಯಕ್ರಗಳನ್ನು ನಿರ್ವಹಿಸಲು ರೂ.250.00 ಲಕ್ಷಗಳನ್ನು ನಿಗಿದಿಪಡಿಸಿ ಇದರ ಹಂಚಿಕೆ ಈ ಕೆಳಕಂಡತ್ತಿದ್ದು, ಅಗತ್ಯತೆಗೆ ಅನುಗುಣವಾಗಿ ಘಟಕಗಳಡಿ ನಿಗದಿಪಡಿಸಿರುವ ಆರ್ಥಿಕ, ಭೌತಿಕ ಗುರಿಗಳನ್ನು ಬದಲಾಯಿಸಿಕೊಳ್ಳಲು ಅವಕಾಶ ಕಲ್ಪಿಸಲು ಕೋರಿದೆ.

| ಕ್ರ.ಸಂ | ಘಟಕದ ಕಾರ್ಯಕ್ರಮ | ಆರ್ಥಿಕ (ರೂ. ಗಳಲ್ಲಿ) |
|---|---|---|
| 1. | ಹಳೆಯ ಹೂ ಗಿಡಗಳನ್ನು ತೆಗೆಯುವುದು ಮತ್ತು ಹೊಸ ಗಿಡಗಳನ್ನು ನೆಡಲು ಸಹಾಯಧನ | 100.00 |
| 2. | ಹಸಿರು ಮನೆಗಳ Polythene sheet ಹಾಳಾಗಿದ್ದಲ್ಲಿ ಬದಲಾವಣೆಗೆ ಸಹಾಯಧನ | 70.00 |

| | | |
|---|---|---|
| 3. | ಅ. ಪುಷ್ಪ ಬೆಳೆಗಾರರಿಗೆ ತರಬೇತಿ<br>ಆ. ಮೂರು ಪುಷ್ಪ ಹರಾಜು ಕೇಂದ್ರಗಳು, ಉತ್ಕೃಷ್ಟ ಪುಷ್ಪ ಬೆಳೆ ಕೇಂದ್ರ ಶಿವಮೊಗ್ಗ, ಸಂರಕ್ಷಿತ ಬೇಸಾಯ ಉತ್ಕೃಷ್ಟ ಕೇಂದ್ರ, ಸೋಮನಹಳ್ಳಿ ಕಾವಲು, ಹಾಸನ ಮತ್ತು ನಿರ್ದೇಶನಾಲಯದ ಪುಷ್ಪಾಭಿವೃದ್ಧಿ ವಿಭಾಗ ಕೇಂದ್ರಗಳ ಅಭಿವೃದ್ಧಿ, ನಿರ್ವಹಣೆ ಮತ್ತು ಆಡಳಿತಾತ್ಮಕ ವೆಚ್ಚ<br>ಇ. ಹೂ ಬೆಳೆಗಳ ಬಗ್ಗೆ ಕರಪತ್ರ, ತಾಂತ್ರಿಕ ಕೈಪಿಡಿ ಮತ್ತು ಇತರೆ ಮುದ್ರಣಾ ವೆಚ್ಚಗಳು<br>ಈ. ಉತ್ಕೃಷ್ಟ ಪುಷ್ಪ ಬೆಳೆ ಕೇಂದ್ರಕ್ಕೆ ಗುತ್ತಿಗೆ ಆಧಾರದ ಮೇಲೆ ಸೇವೆಗಳು<br>1. ಕ್ಷೇತ್ರ ಅನುವುಗಾರರು<br>2. ತಾಂತ್ರಿಕ ಸಲಹೆಗಾರರು | 80.00 |
| | ಒಟ್ಟು | **250.00** |

## 9. ರೈತ ಉತ್ಪಾದಕರ ಸಂಸ್ಥೆಗಳಿಗೆ (FPO) ಸಹಾಯಧನ:

ರಾಜ್ಯಾದ್ಯಂತ ವಿವಿಧ ಹಂತಗಳಲ್ಲಿ ರೈತರನ್ನು ಅದರಲ್ಲೂ ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಸಂಘಟಿಸಿ ಕ್ಷಿಪ್ರವಾಗಿ ತಾಂತ್ರಿಕ ಮಾಹಿತಿ ಅಳವಡಿಸಿಕೊಂಡು ಉತ್ತಮ ಗುಣಮಟ್ಟದ ಪರಿಕರಗಳು ಹಾಗೂ ಸೇವೆಗಳ ಮೂಲಕ ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿಕೊಂಡು ರೈತರ ಆದಾಯ ಹೆಚ್ಚಿಸಿ, ತೋಟಗಾರಿಕೆ ರಂಗದಲ್ಲಿ ಸ್ವಾವಲಂಬನೆ ಹಾಗೂ ಸದೃಡತೆ ಸ್ಥಾಪಿಸುವುದರ ಜೊತೆಗೆ ತೋಟಗಾರಿಕೆ ಬೆಳೆಗಳ ಉತ್ಪಾದಕರಿಗೆ ಮಾರುಕಟ್ಟೆ ಅವಕಾಶಗಳ ಮಾಹಿತಿ ಒದಗಿಸಿ, ಉತ್ಪಾದಕರು ಹಾಗೂ ಗ್ರಾಹಕರ ನಡುವೆ ನೇರ ಸಂರ್ಪಕದ ಸರಪಳಿ ಏರ್ಪಡಿಸುವುದು ರೈತ ಉತ್ಪಾದಕರ ಸಂಸ್ಥೆ (FPO) ಸ್ಥಾಪನೆಯ ಪ್ರಮುಖ ಉದ್ದೇಶವಾಗಿರುತ್ತದೆ. ರೈತ ಉತ್ಪಾದಕರ ಸಂಸ್ಥೆಗಳನ್ನು ಕಂಪನಿ ಅಧಿನಿಯಮ 2013ರ ಅಡಿಯಲ್ಲಿ ನೋಂದಾಯಿಸಿ, ಪ್ರಜಾಪ್ರಭುತ್ವದ ಮಾದರಿಯ ಸ್ವಯಂ ಅಧಿಕಾರಯುಕ್ತ ಸಂಸ್ಥೆಗಳ ಮೂಲಕ ರೈತರ ಬಹುಮಟ್ಟಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿರುತ್ತದೆ.

ತೋಟಗಾರಿಕೆ ಇಲಾಖೆಯು ಕಳೆದ 4 ವರ್ಷಗಳಲ್ಲಿ ಪ್ರತಿ ಗುಚ್ಚಗ್ರಾಮಗಳಲ್ಲಿನ 20 ಸದಸ್ಯರುಳ್ಳ ರೈತ ಆಸಕ್ತ ಗುಂಪು (FIG) ಗಳನ್ನು ಸಂಯೋಜಿಸಿ 50 ಆಸಕ್ತ ಗುಂಪುಗಳನ್ನು ಒಗ್ಗೂಡಿಸಿ ಸುಮಾರು 1000 ರೈತರುಳ್ಳ 95 ಸಂಸ್ಥೆಗಳನ್ನು ಸ್ಥಾಪಿಸಲಾಗಿರುತ್ತದೆ.

ತೋಟಗಾರಿಕೆ ಇಲಾಖೆಯ ವತಿಯಿಂದ ರಚಿಸಲ್ಪಟ್ಟ **FPO** ಗಳಿಗೆ ಈ ಕೆಳಕಂಡಂತೆ ಸಹಾಯಧನ ನೀಡಲಾಗಿರುತ್ತದೆ.

- ಮೂಲಭೂತ ಸೌಕರ್ಯ ನಿರ್ಮಾಣ ಹಾಗೂ ಬಾಡಿಗೆ ಆಧಾರಿತ ಯಂತ್ರೋಪಕರಣಗಳ ಸೇವಾ ಕೇಂದ್ರ (Custom Hiring Centre) ಸ್ಥಾಪಿಸಲು ತೋಟಗಾರಿಕೆ/ಕೃಷಿ ಯಾಂತ್ರೀಕರಣ ಸಲಕರಣೆಗಳ ಖರೀದಿಗೆ ಶೇ.90 ರಷ್ಟು ಸಹಾಯಧನ ನೀಡುವುದರ ಮೂಲಕ ಅವರನ್ನು ಬೆಂಬಲಿಸಲಾಗಿದೆ.
- ನೋಂದಣಿಯಾದ ರೈತ ಉತ್ಪಾದಕ ಸಂಸ್ಥೆಗಳ ವ್ಯಾಪಾರಾಭಿವೃದ್ಧಿಗಾಗಿ ರೂ.15.00 ಲಕ್ಷಗಳ ವರೆಗೆ ಆವರ್ತನಿಧಿ ರೂಪದಲ್ಲಿ ದುಡಿಯುವ ಬಂಡವಾಳ ಒದಗಿಸಲಾಗಿದೆ.

ಸದರಿ ಯೋಜನೆಯನ್ನು 2019-20ನೇ ಸಾಲಿನಲ್ಲಿಯೂ ಸಹ ಮುಂದುವರೆಸಲು ಉದ್ದೇಶಿಸಲಾಗಿದ್ದು ಕಾರ್ಯಕ್ರಮಗಳ ವಿವರಗಳು ಕೆಳಕಂಡಂತಿದೆ.

**<u>ಯೋಜನೆಯಿಂದ ರೈತರಿಗೆ ಆಗುವ ಪ್ರಯೋಜನಗಳು :-</u> (Benefits to Farmers):**

a) ರೈತರಿಗೆ ಅಗತ್ಯವಾದ ಉತ್ತಮ ಗುಣಮಟ್ಟದ ಬೀಜ, ರಸಗೊಬ್ಬರಗಳು, ಸಸ್ಯ ಸಂರಕ್ಷಣೆ ಔಷಧಿಗಳು ಮತ್ತು ಇತರೆ ಪರಿಕರಗಳನ್ನು ಸ್ಥಳೀಯ ಮಾರುಕಟ್ಟೆ ದರಗಳಿಗಿಂತ ಕಡಿಮೆ ದರದಲ್ಲಿ ಒದಗಿಸುವುದು.

b) ರೈತರಿಗೆ ಬೇಸಾಯಕ್ಕೆ ಅಗತ್ಯವಾದ ಯಂತ್ರೋಪಕರಣಗಳು ಹಾಗೂ ಕೊಯ್ಲೋತ್ತರ ನಿರ್ವಹಣೆಗಾಗಿ ಅಗತ್ಯ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಶೇ.90 ರ ಸಹಾಯಧನ.

c) FPO ಉತ್ಕೃಷ್ಟತಾ ಕೇಂದ್ರದ ಮುಖಾಂತರ FPO ಸದಸ್ಯ ರೈತರಿಗೆ ಸಾಮರ್ಥ್ಯ ಅಭಿವೃದ್ಧಿ ಚಟುವಟಿಕೆಗೆ ತರಬೇತಿ, ವ್ಯಾಪಾರ ಯೋಜನೆ ಅಭಿವೃದ್ಧಿಗೆ ಅಗತ್ಯ ಬೆಂಬಲ.

d) KVK ಮೂಲಕ FPO ಗಳಿಗೆ ತಾಂತ್ರಿಕ ತರಬೇತಿ, ಪ್ರಾತ್ಯಕ್ಷತೆ, ಸುಧಾರಿತ ತಂತ್ರಜ್ಞಾನ ಕುರಿತು ಮಾರ್ಗದರ್ಶನ ಹಾಗೂ ಇತರೆ ಮಾಹಿತಿ ಒದಗಿಸುವುದು.

e) ರೈತರು ಉತ್ಪಾದಿಸಿದ ವಿವಿಧ ತೋಟಗಾರಿಕೆ ಬೆಳೆಗಳಾದ ಆಲೂಗಡ್ಡೆ, ಟೋಮ್ಯಾಟೋ ಇತ್ಯಾದಿಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕನಿಷ್ಠ ಬೆಂಬಲ ಬೆಲೆ ಯೋಜನೆಗಳಡಿಯಲ್ಲಿ ಖರೀದಿಸಲು ಏಜನ್ಸಿಯನ್ನಾಗಿ FPO ಗಳನ್ನು ಅಳವಡಿಸಿಕೊಳ್ಳುವುದು.

f) FPO ಗಳೊಂದಿಗೆ ಖಾಸಗಿ ಕಂಪನಿಗಳ ನೇರ ಒಳಗೊಳ್ಳುವಿಕೆಯಿಂದ ತೋಟಗಾರಿಕೆ ಬೆಳೆಗಳ ಉತ್ಪಾದಕತೆ, ಗುಣಮಟ್ಟ ಮತ್ತು ಮೌಲ್ಯ ಹೆಚ್ಚಿಕೊಳ್ಳಬಹುದಾಗಿದೆ.

g) ರೈತ ಉತ್ಪಾದಿಸಿದ ಉತ್ಪಾದನೆಗಳಿಗೆ brand/label ಅನ್ನು ಒದಗಿಸುವುದರಿಂದ ನಿರ್ದಿಷ್ಠ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುವ ಮೂಲಕ ಹೆಚ್ಚಿನ ಲಾಭ ಪಡೆಯಬಹುದಾಗಿದೆ.

h) FPO ಗಳು ವ್ಯಾಪಾರ ಅಭಿವೃದ್ಧಿಗಾಗಿ ಅಗತ್ಯವಿರುವ ಅನುದಾನವನ್ನು ಆಪತ್ತು ನಿರ್ವಹಣಾ ಬೆಂಬಲದಡಿ ಪಡೆಯಬಹುದಾಗಿದೆ.

ಈ ಮೇಲ್ಕಂಡ ಉದ್ದೇಶಗಳನ್ನು ಕಾರ್ಯಾನುಷ್ಠಾನಗೊಳಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು2019-20 ನೇ ಸಾಲಿನಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿರುತ್ತದೆ.

**ಮುಂದುವರೆದ ಯೋಜನೆಗಳು:**

**1) ರೈತ ಉತ್ಪಾದಕರ ಸಂಸ್ಥೆ (FPO) ಗಳ ರಚನೆ ಮತ್ತು ನಿರ್ವಹಣೆ:**

2014-15 ನೇ ಸಾಲಿನಿಂದ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಾದ RKVY, NHM ಮತ್ತು ಸುಜಲಾ-III ಅಡಿ ಒಟ್ಟು 92 FPO ಗಳನ್ನು SFAC, ನವದೆಹಲಿ ರವರ ಮುಖಾಂತರ ರಚಿಸಲಾಗಿರುತ್ತದೆ. 2018-19 ನೇ ಸಾಲಿನಲ್ಲಿ ಇಲಾಖೆಯ ವತಿಯಿಂದಲೇ 7 FPO ಗಳನ್ನು ರಚಿಸಲು ಕ್ರಮಕೈಗೊಳ್ಳಲಾಗಿದ್ದು, ಸದರಿ FPO ಗಳನ್ನು 2019-20 ನೇ ಸಾಲಿನಲ್ಲಿ ನಿರ್ವಹಿಸಲು ಉದ್ದೇಶಿಸಲಾಗಿದೆ. ಹೊಸ FPO ರಚನೆಗೆ ಬೇಡಿಕೆ ಬಂದಲ್ಲಿ, ಮೂಲಾಧಾರ ಸಮೀಕ್ಷೆಯ ವರದಿಯನ್ನು ಆಧರಿಸಿ ಮುಂದಿನ ಕ್ರಮವಹಿಸಲಾಗುವುದು. 2019-20 ನೇ ಸಾಲಿಗೆ ಸದರಿ ಕಾರ್ಯಕ್ರಮಕ್ಕಾಗಿ ಒಟ್ಟು **ರೂ.210.00 ಲಕ್ಷಗಳ** ಅನುದಾನವನ್ನು ನಿಗದಿಪಡಿಸಿದೆ.

**2) ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಸಹಾಯಧನ:**

ಸದರಿ ಘಟಕವು 2018-19 ನೇ ಸಾಲಿನ ಮುಂದುವರೆದ ಕಾರ್ಯಕ್ರಮವಾಗಿರುತ್ತದೆ FPO ರೈತ ಸದಸ್ಯರು ಬೆಳೆಯುವ ತೋಟಗಾರಿಕೆ ಉತ್ಪನ್ನಗಳ ಕೊಯ್ಲೋತ್ತರ ನಿರ್ವಹಣೆಗಾಗಿ FPO ಮುಖಾಂತರ ನಿರ್ಮಿಸಿ, ನಿರ್ವಹಿಸಲಾಗುವ ಮೂಲಭೂತ ಸೌಕರ್ಯಗಳಿಗೆ ಮತ್ತು ಬಾಡಿಗೆ ಆಧಾರಿತ ಯಂತ್ರೋಪಕರಣಗಳ ಸೇವಾ ಕೇಂದ್ರ (CHC)/ಯಂತ್ರೋಪಕರಣಗಳ ಬ್ಯಾಂಕ್ ಅನ್ನು ನಿರ್ಮಿಸಲು ಖರೀದಿಸುವ ಕೃಷಿ/ತೋಟಗಾರಿಕೆ ಯಂತ್ರೋಪಕರಣಗಳ ಖರೀದಿಗೆ ಹೆಚ್ಚಿನ ವೆಚ್ಚ ವ್ಯಯವಾಗುವುದರಿಂದ ಹಾಗೂ ಪ್ರಾರಂಭಿಕ ಹಂತದಲ್ಲಿ FPO ಗಳು ಆರ್ಥಿಕವಾಗಿ ಸಧೃಢವಾಗಿರದ ಕಾರಣ ಮೂಲಸೌಕರ್ಯಗಳ ನಿರ್ಮಾಣಕ್ಕೆ ಶೇ.90 ರ ಸಹಾಯಧನವನ್ನು ಆಯಾ ಘಟಕಕ್ಕೆ ಕೇಂದ್ರ/ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿ ನಿಗದಿಯಾಗಿರುವ ಘಟಕ ವೆಚ್ಚಕ್ಕೆ ಅನುಗುಣವಾಗಿ ನೀಡಲಾಗುವುದು. ಬಾಡಿಗೆ ಆಧಾರಿತ ಯಂತ್ರೋಪಕರಣಗಳ ಸೇವಾ ಕೇಂದ್ರ(CHC)/ ಯಂತ್ರೋಪಕರಣಗಳ ಬ್ಯಾಂಕ್ (Machinary bank) ಅನ್ನು ನಿರ್ಮಿಸಲು ಖರೀದಿಸುವ ಕೃಷಿ/ತೋಟಗಾರಿಕೆ ಯಂತ್ರೋಪಕರಣಗಳು ತೋಟಗಾರಿಕೆ/ಕೃಷಿ ಇಲಾಖೆಯು ಹೊರಡಿಸಿರುವ ಉತ್ಪಾದಕರು ಮತ್ತು ಸರಬರಾಜುದಾರರ ಅಧಿಕೃತ ದರಪಟ್ಟಿಯಲ್ಲಿ ಇದ್ದಲ್ಲಿ, ಅಂತಹ ಯಂತ್ರೋಪಕರಣಗಳ ಖರೀದಿಗೆ ಶೇ.90 ರಂತೆ ಸಹಾಯಧನವನ್ನು ನೀಡಲಾಗುವುದು.

ತೋಟಗಾರಿಕೆ ಇಲಾಖೆಯ ವತಿಯಿಂದ ನೋಂದಾಯಿತವಾಗಿರುವ FPO ಗಳಿಗೆ ಈ ಕೆಳಕಂಡ ಮೂಲಭೂತ ಸೌಕರ್ಯ ನಿರ್ಮಾಣಕ್ಕೆ ಶೇ.90 ರ ಸಹಾಯಧನ ನೀಡಲಾಗುವುದು.

- ಗೋದಾಮು (Godowns)
- ಸಮಗ್ರ ಪ್ಯಾಕ್ ಹೌಸ್ (Integrated pack house)
- ಪ್ಯಾಕ್ ಹೌಸ್ (Pack house) / ಕ್ಷೇತ್ರ ಮಟ್ಟದ ಸಂಗ್ರಹಣ ಘಟಕ (on farm collection unit)
- ಪ್ರೀ ಕೂಲಿಂಗ್ ಘಟಕ (Pre-cooling unit/ Mobile pre-cooling unit)
- ಶೀಥಲ ಘಟಕ (Cold storage unit/ Cold room (staging)/ Solar cold storage)
- ಪ್ರಾಥಮಿಕ ಸಂಸ್ಕರಣ ಘಟಕ (Primary/ Mobile/ Minimal processing unit/)
- ಹಣ್ಣು ಮಾಗಿಸುವ ಘಟಕ (Fruit Ripening chamber)
- Evaporative / Low energy ಶೀಥಲ ಘಟಕ (Cold storage)
- ಕಡಿಮೆ ವೆಚ್ಚದ ಈರುಳ್ಳಿ ಸಂಗ್ರಹಣಾ ಘಟಕ (Low cost onion storage structure)
- ಶೈತ್ಯೀಕರಣ ಸಾರಿಗೆ ವಾಹನ (Refrigerated Transport Vehicle)
- ಕೇಂದ್ರ/ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿ ಅನುಮೋದನೆಯಾದ FPO ಗೆ ಅಗತ್ಯವೆನುಸುವ ಇತರೆ ಘಟಕಗಳು.

ಸದರಿ ಕಾರ್ಯಕ್ರಮಕ್ಕೆ ಒಟ್ಟಾರೆಯಾಗಿ ಪ್ರತಿ FPO ಗೆ ಶೇ.90 ರ ಸಹಾಯಧನದಂತೆ ರೂ.100.00 ಲಕ್ಷಗಳಿಗೆ ಮೀರದಂತೆ ಸಹಾಯಧನ ನೀಡಲಾಗುವುದು. 2019-20 ನೇ ಸಾಲಿಗೆ ಸದರಿ ಕಾರ್ಯಕ್ರಮಕ್ಕೆ **ರೂ.200.00 ಲಕ್ಷಗಳ** ಅನುದಾನದವನ್ನು ನಿಗದಿಪಡಿಸಿದೆ.

**3) FPO ಗಳ ವ್ಯಾಪಾರಾಭಿವೃದ್ಧಿಗೆ ಆವರ್ತನಿಧಿ ರೂಪದಲ್ಲಿ ವ್ಯವಹಾರಿಕ ಬಂಡವಾಳ ಒದಗಿಸುವುದು.**

ಸದರಿ ಘಟಕವು 2018-19 ನೇ ಸಾಲಿನ ಮುಂದುವರೆದ ಕಾರ್ಯಕ್ರಮವಾಗಿರುತ್ತದೆ ರೈತ ಉತ್ಪಾದಕರ ಸಂಸ್ಥೆಗಳು ಮುಂಗಡ ಸಾಲದ ಸುಳಿಯಲ್ಲಿ ಸಿಲುಕದೆ ನಿಗದಿಪಡಿಸಿಕೊಳ್ಳಲಾಗಿರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಅನುವಾಗುವಂತೆ ಆವರ್ತನ ನಿಧಿ ಅನುದಾನ ರೂಪದಲ್ಲಿ ವ್ಯವಹಾರಿಕ ಬಂಡವಾಳವನ್ನು ಒದಗಿಸಿ ವ್ಯವಹಾರಿಕ ಯೋಜನೆಗಳನ್ನು ಪ್ರಾರಂಭಿಸುವಂತೆ ಉತ್ತೇಜನ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ತೋಟಗಾರಿಕೆ ಇಲಾಖೆಯ ವತಿಯಿಂದ ನೋಂದಾಯಿತವಾಗಿರುವ ಪ್ರತಿ ರೈತ ಉತ್ಪಾದಕರ ಸಂಸ್ಥೆಗೆ ಗರಿಷ್ಠ ರೂ.25.00 ಲಕ್ಷಗಳ ವರೆಗೆ ವ್ಯವಹಾರಿಕ ಬಂಡವಾಳವನ್ನು ಆವರ್ತನ ನಿಧಿಯ ರೂಪದಲ್ಲಿ ನೀಡಲಾಗುವುದು. 2019-20 ನೇ ಸಾಲಿಗೆ ಸದರಿ ಕಾರ್ಯಕ್ರಮಕ್ಕೆ**ರೂ.100.00 ಲಕ್ಷಗಳ** ಅನುದಾನವನ್ನು ನಿಗದಿಪಡಿಸಿದೆ.

**4) ರೈತ ಉತ್ಪಾದಕ ಸಂಸ್ಥೆಗಳ (FPO) ಮೇಲುಸ್ತುವಾರಿಗೆ ಸಂಯೋಜನ ಸಲಹಾ ಸಂಸ್ಥೆ (Project Coordinating Consultancy) ಯ ಸೇವೆ ಪಡೆಯುವುದು.**

ಸದರಿ ಘಟಕವು 2018-19 ನೇ ಸಾಲಿನ ಮುಂದುವರೆದ ಕಾರ್ಯಕ್ರಮವಾಗಿರುತ್ತದೆ ಇಲಾಖೆ ವತಿಯಿಂದ ರಾಜ್ಯದಲ್ಲಿ ರಚಿಸಲಾಗಿರುವ FPO ಗಳ ಬೆಳೆವಾರು ಮಾಹಿತಿಯನ್ನು ಕ್ರೋಢೀಕರಿಸುವುದು, FPO ಗಳಿಗೆ ಕಾಲಕಾಲಕ್ಕೆ ಭೇಟಿ ನೀಡಿ FPO ಕಾರ್ಯಚಟುವಟಿಕೆಗಳ ಬಗ್ಗೆ FPO ನಿರ್ದೇಶಕರ ಮಂಡಳಿ, CEO ಮತ್ತು ಸದಸ್ಯರಿಗೆ ಸೂಕ್ತ ಮಾರ್ಗದರ್ಶನ ನೀಡುವುದು, ಸಂಪನ್ಮೂಲ ಸಂಸ್ಥೆಯೊಂದಿಗೆ ಸಮನ್ವಯವಿರಿಸಿ ಇಲಾಖೆಗೆ ಅಗತ್ಯವಿರುವ ಮಾಹಿತಿಯನ್ನು ಕ್ರೋಢೀಕರಿಸುವುದು, FPO ಗೆ ಸಂಬಂಧಿತ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ PMU ಘಟಕಕ್ಕೆ ಸಹಾಯ ಮಾಡುವುದು. PPPIHD ಯೋಜನೆಗೆ ಸಂಬಂಧಿಸಿದಂತೆ ಕಾರ್ಪೋರೇಟ್ ಕಂಪನಿಗಳನ್ನು ಸಂಪರ್ಕಿಸಿ ಯೋಜನೆಯ ಮಾಹಿತಿಯನ್ನು ವಿವರಿಸುವುದು, ತದನಂತರದಲ್ಲಿ ಕಾರ್ಪೋರೇಟ್ ಕಂಪನಿಗಳು ಸಲ್ಲಿಸುವ ಯೋಜನಾ ಪ್ರಸ್ತಾವನೆಗಳನ್ನು ಪರೀಶೀಲಿಸಲು PMU ಘಟಕಕ್ಕೆ ಸಹಾಯ ಮಾಡುವುದು. ಸಂಯೋಜನ ಸಲಹಾ ಸಂಸ್ಥೆಯನ್ನು KTPP e-procurement ನಿಯಮಾನುಸಾರ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು.

ಸರ್ಕಾರದ ಆದೇಶ ಸಂಖ್ಯೆ:ತೋಇ 12 ತೋಯೋಕಾ 2015, ಬೆಂಗಳೂರು ದಿನಾಂಕ: 24-04-2015 ರಲ್ಲಿ ಸದರಿ ಕಾರ್ಯಕ್ರಮವನ್ನು 2015-16 ನೇ ಸಾಲಿನಿಂದ 3 ವರ್ಷಗಳಿಗೆ ಅನುಮೋದಿಸಲಾಗಿರುತ್ತದೆ. ಈ ಕಾರ್ಯಕ್ರಮವನ್ನು 2016-17 ನೇ ಸಾಲಿನಲ್ಲಿ ಪ್ರಾರಂಭಿಸಿದ್ದು, 2018-19 ನೇ ಸಾಲಿಗೆ ಮುಂದುವರೆಸಲಾಗಿರುತ್ತದೆ.

ಪ್ರಸ್ತುತ ಇಲಾಖೆಯು 95 FPO ಗಳನ್ನು ಕಂಪನಿ ಕಾಯ್ದೆಯಡಿ ಸ್ಥಾಪಿಸಿರುತ್ತದೆ. ಕಂಪನಿ ಕಾಯ್ದೆಯ compliances ಗಳನ್ನು ROC ಗೆ ಸಲ್ಲಿಸುವ ಕುರಿತು FPO ಗಳಿಗೆ ಮಾರ್ಗದರ್ಶನ ಮಾಡುವುದು ಅವಶ್ಯವಿರುತ್ತದೆ. SFAC, ನವದೆಹಲಿ ರವರ ಮುಖಾಂತರ ನೇಮಕಗೊಂಡಿದ್ದ ಸಂಪನ್ಮೂಲ ಸಂಸ್ಥೆಯ ಸೇವೆಯು ಅಂತ್ಯವಾಗಿರುವುದರಿಂದ, FPO ಗಳಿಗೆ ವ್ಯವಹಾರಿಕ ಚಟುವಟಿಕೆಗಳ ಕುರಿತು ಮಾರ್ಗದರ್ಶನ ಮಾಡುವುದು ಅತ್ಯವಶ್ಯಕವಾಗಿರುತ್ತದೆ. ರಾಜ್ಯ ಸರ್ಕಾರವು FPO ಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದು, ಈ ಸಂಬಂಧ ಸರ್ಕಾರದ ಆದೇಶ ಸಂಖ್ಯೆ:ಕೃಇ:92 ಕೃಉಇ 2018, ಬೆಂಗಳೂರು, ದಿನಾಂಕ: 17-01-2019 ರಲ್ಲಿ FPO Policy ಯನ್ನು ಅನುಮೋದಿಸಿರುತ್ತದೆ. 2019-20 ನೇ ಸಾಲಿನಲ್ಲಿ ಜಿಲ್ಲೆಗಳ ಬೇಡಿಕೆಯನ್ನಾಧರಿಸಿ

ಇಲಾಖೆಯ ವತಿಯಿಂದ ಹೊಸ FPO ಗಳನ್ನು ರಚಿಸಲು ಉದ್ದೇಶಿಸಿರುತ್ತದೆ. ಈ ಹಿನ್ನೆಲೆಯಲ್ಲಿ FPO ಗಳಿಗೆ ಕಾಲಕಾಲಕ್ಕೆ ಸೂಕ್ತ ಮಾಹಿತಿ ಹಾಗೂ ಮಾರ್ಗದರ್ಶನ ನೀಡುವ ಅಗತ್ಯವಿರುವುದರಿಂದ, ಸಂಯೋಜನ ಸಲಹಾ ಸಂಸ್ಥೆ(Project Coordinating Consultancy)ಯ ಸೇವೆಯನ್ನು 2019-20 ನೇ ಸಾಲಿನಿಂದ ಮುಂದಿನ 3 ವರ್ಷಗಳಿಗೆ ಮುಂದುವರೆಸಲು ಅನುಮೋದಿಸುತ್ತಾ, 2019-20 ನೇ ಸಾಲಿಗೆ ಸದರಿ ಕಾರ್ಯಕ್ರಮಕ್ಕೆ**ರೂ.60.00 ಲಕ್ಷಗಳ** ಅನುದಾನವನ್ನು ನಿಗದಿಪಡಿಸಿದೆ.

**5) ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟತಾ ಕೇಂದ್ರ (FPO – COE):**

ಈ ಕಾರ್ಯಕ್ರಮವು 2016-17 ನೇ ಸಾಲಿನ ಆಯವ್ಯಯ ಘೋಷಿತ ಕಾರ್ಯಕ್ರಮವಾಗಿದ್ದು ರಾಜ್ಯದಲ್ಲಿ ರಚಿಸಲಾದ ರೈತ ಉತ್ಪಾದಕರ ಸಂಸ್ಥೆಗಳ (FPO) ವ್ಯಾಪಾರಾಭಿವೃದ್ಧಿಗೆ ಸೂಕ್ತ ಮಾರ್ಗದರ್ಶನ ಹಾಗೂ ಅಗತ್ಯವಿರುವ ತಾಂತ್ರಿಕ ಮತ್ತು ನಿರ್ವಹಣಾ ನೆರವನ್ನು ಒದಗಿಸಲು ಉತ್ಕೃಷ್ಟತಾ ಕೇಂದ್ರ (Centre of Excellence)ವನ್ನು ಸ್ಥಾಪಿಸುವುದು ಅಗತ್ಯವಿರುತ್ತದೆ. ಸದರಿ ಧ್ಯೇಯೋದ್ದೇಶದಿಂದ 2017-18 ನೇ ಸಾಲಿನಿಂದ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಿ ಕಾರ್ಯಾನುಷ್ಠಾನಗೊಳಿಸಲಾಗಿರುತ್ತದೆ. ರೈತ ಉತ್ಪಾದಕ ಸಂಸ್ಥೆಗಳು ಲಾಭದಾಯಕವಾಗಿ ವ್ಯಾಪಾರ ವಹಿವಾಟು ಮಾಡಲು ಅನುಕೂಲವಾಗುವಂತೆ ಸದರಿ ಸಂಸ್ಥೆಗಳಿಗೆ ಕಾಲಕಾಲಕ್ಕೆ ವ್ಯಾಪಾರಾಭಿವೃದ್ಧಿಗೆ ಸಂಬಧಿಸಿದ ತಾಂತ್ರಿಕ ಪರಿಣಿತರಿಂದ/ವಿಷಯ ತಜ್ಞರಿಂದ ತರಬೇತಿ, ಪ್ರಾತ್ಯಕ್ಷತೆ ಹಾಗೂ ಕಲಿಕ ಪ್ರವಾಸಗಳನ್ನು COE ಮುಖಾಂತರ ಆಯೋಜಿಸಲಾಗುವುದು.

ಉತ್ಕೃಷ್ಟತಾ ಕೇಂದ್ರವನ್ನು ನೋಂದಾಯಿತ ಸಂಸ್ಥೆಯಾಗಿ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಅಡಿ ಬೆಂಗಳೂರು ಆವರಣದಲ್ಲಿ ಸ್ಥಾಪಿಸಲಾಗಿದೆ. ರೈತ ಉತ್ಪಾದಕರ ಸಂಸ್ಥೆಗಳ ಅಗತ್ಯತೆಗನುಗುಣವಾಗಿ ಹಾಗೂ ಯೋಜನೆ ಅವಧಿಗೆ ಆಧಾರವಾಗಿ, ಅಲ್ಪಾವಧಿ ಸಲಹೆಗಾರರನ್ನು ಮಾರುಕಟ್ಟೆಯ ಸಲಹಾ ಸಂಸ್ಥೆಗಳಿಂದ ಉತ್ಕೃಷ್ಟತಾ ಕೇಂದ್ರವು ಸಲಹೆಗಾರರ ಸೇವೆಯನ್ನು ಪಡೆಯುತ್ತದೆ. ರೈತ ಉತ್ಪಾದಕರ ಸಂಸ್ಥೆಗಳು ಸದರಿ ಸಲಹಾ ಸೇವೆಗಳಿಗೆ ಶುಲ್ಕ ಪಾವತಿಸಲಿದ್ದು ಪ್ರಾರಂಭದಲ್ಲಿ ತೋಟಗಾರಿಕೆ ಇಲಾಖೆಯು ಸದರಿ ಸಲಹಾ ಸೇವೆಗಳನ್ನು ಪಡೆಯಲು ರೈತ ಉತ್ಪಾದಕರ ಸಂಸ್ಥೆಗಳಿಗೆ ಸಹಾಯ ನೀಡುತ್ತದೆ. ರೈತ ಉತ್ಪಾದಕರ ಸಂಸ್ಥೆಗಳು ಸಲಹಾ ಸಂಸ್ಥೆಗಳ ಸೇವೆಗಳಿಗೆ ಪಾವತಿಸಲು ಆರ್ಥಿಕ ಬೆಂಬಲವನ್ನು ಸರ್ಕಾರದಿಂದ ಪಡೆದಲ್ಲಿ ಉತ್ಕೃಷ್ಟತಾ ಕೇಂದ್ರವು ವೆಚ್ಚ ಕೇಂದ್ರವಾಗಿ ಕೆಲಸ ನಿರ್ವಹಿಸಲಿದೆ. ದೀರ್ಘಾವಧಿಯಲ್ಲಿ ಉತ್ಕೃಷ್ಟತಾ ಕೇಂದ್ರವು ಸ್ವತಂತ್ರವಾಗಿ ಕಾರ್ಯನಿರ್ವಹಿಸುವದೆಂದು ನಿರೀಕ್ಷಿಸಲಾಗಿದೆ COE ಕಾರ್ಯಕ್ಷಮತೆ ಹಾಗೂ ಅದರಿಂದ FPO ಗಳಿಗಾಗುವ ಉಪಯುಕ್ತತೆಗಳ ಕುರಿತು ತೋಟಗಾರಿಕೆ ಇಲಾಖೆಯಿಂದ ಕಾಲಕಾಲಕ್ಕೆ ಪರಿಶೀಲಿಸಿ ಅಗತ್ಯವಿರುವ ಅನುದಾನವನ್ನು ಒದಗಿಸಲಾಗುವುದು. 2019-20 ನೇ ಸಾಲಿಗೆ ಸದರಿ ಕಾರ್ಯಕ್ರಮಕ್ಕೆ**ರೂ.100.00 ಲಕ್ಷಗಳ** ಅನುದಾನವನ್ನು ನಿಗದಿಪಡಿಸಿದೆ.

6) **ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ (PPP-IHD):**

ಸದರಿ ಘಟಕವು 2018-19 ನೇ ಸಾಲಿನ ಮುಂದುವರೆದ ಕಾರ್ಯಕ್ರಮವಾಗಿರುತ್ತದೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿಯನ್ನು ಭಾರತ ಸರ್ಕಾರದ PPP-IAD ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಸದರಿ ಯೋಜನೆಯಡಿ ರೈತರಿಗೆ ಬಿತ್ತನೆಯಿಂದ ಮಾರುಕಟ್ಟೆವರೆಗಿನ ನೆರವನ್ನು ಸರ್ಕಾರ ಮತ್ತು ಕಾರ್ಪೊರೇಟ್ ಕಂಪನಿಗಳ ವತಿಯಿಂದ ನೀಡಲಾಗುವುದು. ಈ ಕಾರ್ಯಕ್ರಮವು ರೈತರಿಗೆ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿ ನೇರವಾಗಿ ಖರೀದಿ ಸಂಸ್ಥೆಯೊಂದಿಗೆ

ಸಂಪರ್ಕವನ್ನು ಕಲ್ಪಿಸುವುದಾಗಿದೆ. ಇದರಿಂದ ರೈತರು ತಮ್ಮ ಬೆಳೆಗೆ ಹೆಚ್ಚಿನ ಇಳುವರಿ, ಗುಣಮಟ್ಟ ಮತ್ತು ಆದಾಯವನ್ನು ನಿರೀಕ್ಷಿಸಬಹುದಾಗಿದೆ. ತೋಟಗಾರಿಕೆ ಇಲಾಖೆಯಿಂದ ಪ್ರೋತ್ಸಾಹಿತ ರೈತ ಉತ್ಪಾದಕರ ಸಂಸ್ಥೆಗಳಿಗೆ ಹಾಗೂ ಇತರೆ ರೈತ ಗುಂಪುಗಳಿಗೆ ಖಚಿತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ. RKVY ಅಡಿ ನಿಗಧಿತ ಅನುದಾನಕ್ಕೆ ಖರ್ಚು ಭರಿಸಿದ ನಂತರ ಹೆಚ್ಚಿನ ಅನುದಾನದ ಅವಶ್ಯಕತೆಯನ್ನು ಈ ಕಾರ್ಯಕ್ರಮದಡಿ ಭರಿಸುವುದು. 2019-20 ನೇ ಸಾಲಿಗೆ ಸದರಿ ಕಾರ್ಯಕ್ರಮಕ್ಕೆ **ರೂ.50.00 ಲಕ್ಷಗಳ** ಅನುದಾನವನ್ನು ನಿಗದಿಪಡಿಸಿದೆ.

**7) FPO ಉತ್ಪನ್ನಗಳ ವಿಶೇಷತೆಯನ್ನು ಮಾರುಕಟ್ಟೆಯಲ್ಲಿ ಗುರುತಿಸಲು ಲೇಬಲ್ ಒದಗಿಸುವುದು:**

ಈ ಕಾರ್ಯಕ್ರಮವು 2016-17 ನೇ ಸಾಲಿನ ಆಯವ್ಯಯ ಘೋಷಿತ ಕಾರ್ಯಕ್ರಮವಾಗಿದ್ದು ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಅನುಮೋದನೆ ದೊರಕಿರುತ್ತದೆ. ರೈತ ಉತ್ಪಾದಕರ ಸಂಸ್ಥೆಗಳು ಉತ್ತಮ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಂಡು ಉತ್ಪಾದಿಸುವ ಉತ್ತಮ ಗುಣಮಟ್ಟ ಹೊಂದಿದ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ವಿಶೇಷತೆಯನ್ನು ಬಿಂಬಿಸುವುದರೊಂದಿಗೆ ಒಳ್ಳೆಯ ಬೆಲೆ ಪಡೆಯಲು ಹಾಗೂ ಗುರುತಿಸಲು branding ಹಾಗೂ labeling ಅವಶ್ಯಕತೆ ಇರುತ್ತದೆ. ಬಳಕೆದಾರರಿಗೆ ಹಾಗೂ ಅಂತರರಾಷ್ಟ್ರೀಯ ಖರೀದಿದಾರರಿಗೆ ಪ್ರಸ್ತುತವೆನಿಸುವ ಗುಣಮಟ್ಟ, ಸುರಕ್ಷತೆ ಮತ್ತು ಇನ್ನಿತರ ಮಾನದಂಡಗಳನ್ನು ಕಾಪಾಡಲು ಈಗಾಗಲೇ ಸ್ಥಾಪಿಸಲಾಗಿರುವ ರೈತ ಉತ್ಪಾದಕರ ಸಂಸ್ಥೆ (FPO) ಗಳಿಗೆ ಲೇಬಲ್ ಗಳನ್ನು ಕಲ್ಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ. 2019-20 ನೇ ಸಾಲಿಗೆ ಸದರಿ ಕಾರ್ಯಕ್ರಮಕ್ಕೆ **ರೂ.30.00** ಲಕ್ಷಗಳ ಅನುದಾನವನ್ನು ನಿಗದಿಪಡಿಸಿದೆ.

**8) ರೈತ ಉತ್ಪಾದಕ ಸಂಸ್ಥೆಗಳ ಇನ್ ಕ್ಯೂಬೇಷನ್ ಮತ್ತು ಸ್ಟೆಬಿಲೈಜೇಷನ್ ನಿಧಿ (FPO Incubation & Stabilization Fund):**

ಈ ಕಾರ್ಯಕ್ರಮವು 2016-17 ನೇ ಸಾಲಿನ ಆಯವ್ಯಯ ಘೋಷಿತ ಕಾರ್ಯಕ್ರಮವಾಗಿದ್ದು 2017-18 ಮತ್ತು 2018-19 ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಅನುಮೋದನೆ ದೊರಕಿರುತ್ತದೆ. ಆದರೆ, ಪ್ರಸ್ತುತ FPO ಗಳು ಪರಿಕರಗಳ ವ್ಯಾಪಾರದಲ್ಲಿ ತೊಡಗಿದ್ದು, ಉತ್ಪನ್ನಗಳ ವ್ಯಾಪಾರವನ್ನು ಹೆಚ್ಚಿನ ಮಟ್ಟದಲ್ಲಿ ಪ್ರಾರಂಭಿಸಬೇಕಿರುತ್ತದೆ. ಅದ್ದರಿಂದ, ಸದರಿ ಕಾರ್ಯಕ್ರಮವನ್ನು 2019-20 ನೇ ಸಾಲಿನಿಂದ ಮುಂದುವರೆಸಲಾಗುವುದು. ತೋಟಗಾರಿಕೆ ಇಲಾಖೆಯ ನೆರವಿನೊಂದಿಗೆ ನೋಂದಾಯಿತ ರೈತ ಉತ್ಪಾದಕ ಸಂಸ್ಥೆಗಳು ವ್ಯಾಪಾರಾಭಿವೃದ್ಧಿ ಮಾಡುವಂತೆ ಉತ್ತೇಜನ ನೀಡಲಾಗುತ್ತಿದ್ದು, ಸದರಿ ಸಂಸ್ಥೆಗಳಿಗೆ ಅನುಭವದ ಕೊರತೆಯಿಂದಾಗಿ, ಮಾರುಕಟ್ಟೆ ಏರಿಳಿತದಿಂದಾಗಿ, ಹವಾಮಾನದ ವೈಪರೀತ್ಯದಿಂದಾಗಿ ಅಥವಾ ಇನ್ನಿತರೆ ನಿರ್ದಿಷ್ಠ ಕಾರಣಗಳಿಂದಾಗಿ ವ್ಯಾಪಾರದಲ್ಲಿ ನಷ್ಟ ಉಂಟಾದಲ್ಲಿ ಸದರಿ ನಷ್ಟವನ್ನು ಭರಿಸುವ ಮೂಲಕ FPO ಗಳು ಸ್ವಾವಲಂಭಿಗಳನ್ನಾಗಿ ಮಾಡಲು ಹಾಗೂ FPO ಗಳನ್ನು ಬಲಪಡಿಸಲು ಈ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಲಾಗುವುದು. FPO ಪದಾಧಿಕಾರಿಗಳ ನಿರ್ಲಕ್ಷತೆಯಿಂದಾಗಿ, ಆರ್ಥಿಕ ನಿರ್ವಹಣೆಯಲ್ಲಿನ ಕುಂದು ಕೊರತೆಗಳಿಂದಾಗಿ ಅಥವಾ ದುರ್ಬಳಕೆಯಿಂದ ಉಂಟಾದ ನಷ್ಟವನ್ನು ಈ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ. 2019-20 ನೇ ಸಾಲಿನಿಂದ ಸದರಿ ಕಾರ್ಯಕ್ರಮಕ್ಕೆ **ರೂ.100.00 ಲಕ್ಷಗಳ** ಅನುದಾನವನ್ನು ನಿಗದಿಪಡಿಸಿದೆ.

**9) “ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ರೈತ ಉತ್ಪಾದಕರ ಸಂಸ್ಥೆಗಳಿಗೆ ತಾಂತ್ರಿಕ ಬೆಂಬಲ” (Linking KVK to FPO for Technical Support):**

ಸದರಿ ಘಟಕವು 2018-19 ನೇ ಸಾಲಿನ ಮುಂದುವರೆದ ಕಾರ್ಯಕ್ರಮವಾಗಿರುತ್ತದೆ ತೋಟಗಾರಿಕೆ ಇಲಾಖೆಯ ನೆರವಿನಲ್ಲಿ ನೋಂದಣಿಯಾಗಿರುವ ರೈತ ಉತ್ಪಾದಕರ ಸಂಸ್ಥೆ (FPO) ಗಳಲ್ಲಿನ ಬಹುತೇಕ ಷೇರುದಾರರು ಸಣ್ಣ ಮತ್ತು ಅತಿ ಸಣ್ಣ ರೈತರಾಗಿರುತ್ತಾರೆ. ತೋಟಗಾರಿಕೆ ಇಲಾಖೆಯು ಹೊಸದಾಗಿ ರಚನೆಗೊಂಡಿರುವ FPO ಗಳಿಗೆ ಆರ್ಥಿಕ ಮತ್ತು ಹಣಕಾಸೇತರ ನೆರವು ಒದಗಿಸುವ ಮೂಲಕ ಸದರಿ FPO ಗಳ ಸಬಲೀಕರಣಕ್ಕೆ ಪೂರ್ವಭಾವಿ ಕ್ರಮಗಳನ್ನು ಕೈಗೊಂಡಿರುತ್ತದೆ ಮುಖ್ಯವಾಗಿ ವ್ಯವಹಾರಿಕ ಬಂಡವಾಳ, ಮೂಲಭೂತ ಸೌಕರ್ಯಕ್ಕೆ ಸಹಾಯ, ಮೂರು ವರ್ಷಗಳ ವರೆಗೆ ಸಂಪನ್ಮೂಲ ಸಂಸ್ಥೆಯ ನೆರವು, ತರಬೇತಿ ಮತ್ತು ಶಿಕ್ಷಣ ಕಾರ್ಯಕ್ರಮಗಳನ್ನು ನೀಡಲಾಗಿರುತ್ತದೆ. ಇದಾಗ್ಯೂ ಸಹ FPO ಗಳಿಗೆ ತೋಟಗಾರಿಕೆ ಮೌಲ್ಯ ಸರಪಳಿ ಮತ್ತು ಪ್ರಮುಖ ಮಾರುಕಟ್ಟೆಗೆ ಏಕೀಕರಣಗೊಳ್ಳುವ ಕುರಿತು ಬೆಂಬಲ ನೀಡುವುದು ತುರ್ತು ಅವಶ್ಯಕತೆ ಇರುತ್ತದೆ. ಆದ್ದರಿಂದ ವಿಸ್ತರಣೆಯ ವಾಡಿಕೆ ಪಾತ್ರವನ್ನು ಬದಲಾಯಿಸಿ ರೈತ ಸಮುದಾಯಕ್ಕೆ ಪ್ರಸ್ತುತ ಅಗತ್ಯವಿರುವ ಮಾಹಿತಿ ಒದಗಿಸಲು FPO ಗಳಿಗೆ KVK/ಕೃಷಿ/ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಮುಖಾಂತರ ತಾಂತ್ರಿಕ ಬೆಂಬಲ ನೀಡುವುದು. KVK/ ಕೃಷಿ / ತೋಟಗಾರಿಕೆ ವಿಶ್ವವಿದ್ಯಾನಿಲಯ - FPO ಜೋಡಣೆಯ ನಿರ್ದಿಷ್ಟ ಗುರಿಗಳು ಈ ಕಳಕಂಡಂತಿದೆ.

- ಸೂಕ್ತ ಬೆಳೆ ಆಧಾರಿತ ಯೋಜನೆ/ಚಟುವಟಿಕೆ/FPO ಗಳ ವ್ಯಾಪಾರ ಯೋಜನೆ ಪ್ರಕಾರ ಉಪಕ್ರಮಗಳನ್ನು ಕೈಗೊಳ್ಳಲು ತಾಂತ್ರಿಕ ನೆರವನ್ನು ಒದಗಿಸುವುದು.
- FPO ಸದಸ್ಯರಿಗೆ ಪ್ರಾತ್ಯಕ್ಷತೆ ಮತ್ತು ನಿರ್ಧಿಷ್ಟ ಬೆಳೆಯ ಕುರಿತು ತರಬೇತಿ ನೀಡುವುದು.
- FPO ಆಸಕ್ತ ಬೆಳೆಗಳ ಸುಧಾರಿತ ತಂತ್ರಜ್ಞಾನ ಕುರಿತು ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಮಾರ್ಗದರ್ಶನ ನೀಡುವುದು.
- FPO ಗಳಿಗೆ ಸಾಮರ್ಥ್ಯ ಅಭಿವೃದ್ಧಿ ಮತ್ತು ಅಗತ್ಯವಿರುವ ತರಬೇತಿಯನ್ನು ನೀಡುವುದು.
- ಕೀಟ/ರೋಗಗಳ ಹಾವಳಿ ತೀವ್ರಗೊಂಡಾಗ ಅತೀ ತುರ್ತಾಗಿ ಕ್ಷೇತ್ರಕ್ಕೆ ಭೇಟಿ ನೀಡಿ ಅಗತ್ಯ ತಾಂತ್ರಿಕ ಮಾಹಿತಿಯನ್ನು ಒದಗಿಸುವುದು.
- ಪರಸ್ಪರ ಒಪ್ಪಿಗೆ ಮೇರೆಗೆ FPO ಗಳ ಪ್ರಚಾರ, ಅಭಿವೃದ್ಧಿ ಮತ್ತು ಪುಷ್ಟಿಗೆ ಅಗತ್ಯವಾಗಿರುವ ಚಟುವಟಿಕೆಗಳನ್ನು ಕೈಗೊಳ್ಳುವುದು.

2019-20 ನೇ ಸಾಲಿಗೆ ಸದರಿ ಕಾರ್ಯಕ್ರಮಕ್ಕೆ **ರೂ.62.00 ಲಕ್ಷಗಳ** ಅನುದಾನವನ್ನು ನಿಗದಿಪಡಿಸಿದೆ.

10) **ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳು:**

ಸದರಿ ಘಟಕವು 2017-18 ನೇ ಸಾಲಿನ ಮುಂದುವರೆದ ಕಾರ್ಯಕ್ರಮವಾಗಿರುತ್ತದೆ **FPO** ವ್ಯವಹಾರಿಕ ಯೋಜನೆಗಳ ಅಭಿವೃದ್ಧಿ, ಸಾಮರ್ಥ್ಯ ಅಭಿವೃದ್ಧಿ ಹಾಗೂ ಇತರೆ FPO ಸಂಬಂಧಿತ ವಿಷಯಗಳ ಕುರಿತು FPO ಸದಸ್ಯ ರೈತರಿಗೆ, FPO ನಿರ್ದೇಶಕರ ಮಂಡಳಿಗೆ, FPO ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ರೈತ ಆಸಕ್ತ ಗುಂಪುಗಳಿಗೆ (FIG) ಮತ್ತು ಇಲಾಖೆ ಅಧಿಕಾರಿಗಳಿಗೆ ರಾಜ್ಯ ಮತ್ತು ಹೊರ

ರಾಜ್ಯಗಳಲ್ಲಿ ತರಬೇತಿ ಮತ್ತು ಕಲಿಕಾ ಪ್ರವಾಸವನ್ನು ಕೈಗೊಳ್ಳುವುದು. ಸದರಿ ಕಾರ್ಯಕ್ರಮವನ್ನು NHM, CHD ಮತ್ತು ATMA ಯೋಜನೆಗಳ ಘಟಕ ವೆಚ್ಚದನ್ವಯ ಅಥವಾ **ರಾಜ್ಯ/ಕೇಂದ್ರ ಸರ್ಕಾರದ ಅಡಿಯಲ್ಲಿನ ಸಂಸ್ಥೆಗಳ ಮೂಲಕ/ಇಲಾಖೆಯ ವಿವಿಧ COE ಗಳ ಮೂಲಕ ಪ್ರಸ್ತಾವನೆ ಆಧಾರಿತವಾಗಿ ಸದರಿ ತರಬೇತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು.** 2019-20 ನೇ ಸಾಲಿಗೆ ಸದರಿ ಕಾರ್ಯಕ್ರಮಕ್ಕೆ **ರೂ.66.00 ಲಕ್ಷಗಳ** ಅನುದಾನವನ್ನು ನಿಗದಿಪಡಿಸಿದೆ.

**11)** FPO **ಗಳಿಗೆ ನೇರ** ಮಾರುಕಟ್ಟೆ ವ್ಯವಸ್ಥೆ **(ವಿಭಾಗಿಯ ಮಟ್ಟದಲ್ಲಿ):**

ಸರಬರಾಜು ಸರಪಳಿಯಲ್ಲಿ ಮಧ್ಯವರ್ತಿಗಳ ಹಾವಳಿಯನ್ನು ತಡೆಗಟ್ಟುವ ಮೂಲಕ ಗುಣಮಟ್ಟದ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯುವುದು ಅಗತ್ಯವಿದೆ. ರೈತ ಉತ್ಪಾದಕರ ಸಂಸ್ಥೆಯ ಮಾರುಕಟ್ಟೆಯ ಮೂಲಕ ಈ ಬೆಂಬಲವನ್ನು ನೀಡಬಹುದಾಗಿದೆ. ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯು ರೈತ ಉತ್ಪಾದಕರ ಸಂಸ್ಥೆಗಳ ಮೂಲಕ ಸದಸ್ಯರು ಮತ್ತು ಖರೀದಿದಾರರು ಉತ್ತಮ ಗುಣಮಟ್ಟದ ಉತ್ಪನ್ನಗಳ ವ್ಯಾಪಾರವನ್ನು ಮಾಡಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲು 2019-20 ನೇ ಸಾಲಿನಲ್ಲಿ ಒಟ್ಟು **ರೂ.6.00 ಲಕ್ಷಗಳನ್ನು** ನಿಗದಿಪಡಿಸಲಾಗಿದೆ.

**12) FPO ಮೇಳ / ಕಾರ್ಯಗಾರ:**

FPO ಮೇಳವು ಒಂದು FPO ಮತ್ತೊಂದು FPO ಹಾಗೂ ಸಂಬಂಧಿಸಿದ ಕಾರ್ಪೋರೇಟ್ ಸಂಸ್ಥೆಗಳೊಂದಿಗೆ ವ್ಯಾಪಾರದ ಕುರಿತು ಚರ್ಚಿಸುವುದಾಗಿರುತ್ತದೆ. ಇದು $B_2B$ ಉತ್ಸವವಾಗಿದ್ದು ಇಲ್ಲಿ ತಾಂತ್ರಿಕ ಸಂಸ್ಥೆಗಳು, ಕಾರ್ಪೋರೇಟ್ ಕಂಪನಿ ಬ್ಯಾಂಕ್ ಗಳು, ಹಣಕಾಸು ಸಂಸ್ಥೆಗಳು, ಪರಿಕರಗಳ ಸರಬರಾಜುದಾರರು, ಕೃಷಿ/ತೋಟಗಾರಿಕೆ ಯಂತ್ರೋಪಕರಣ ಮತ್ತು ಉಪಕರಣಗಳ ಸರಬರಾಜುದಾರರ ನಡುವೆ ತಾಂತ್ರಿಕ ಅಧಿವೇಶನವನ್ನು ಹಮ್ಮಿಕೊಳ್ಳುವುದು. ಈ ಮೇಲಿನ ಸಂಸ್ಥೆ/ಸರಬರಾಜುದಾರರು ಪ್ರಾತ್ಯಕ್ಷತೆಯ ಮೂಲಕ FPO ಗಳಿಗೆ ಅರಿವು ನೀಡಬಹುದಾಗಿದೆ. ರಾಜ್ಯ ಮಟ್ಟದಲ್ಲಿ ಎರಡು FPO ಮೇಳಗಳನ್ನು (ಮುಂಗಾರು ಮತ್ತು ಹಿಂಗಾರು ಋತುವಿನಲ್ಲಿ) ಆಯೋಜಿಸಲು/ ಪ್ರಾಯೋಜಕತ್ವ ನೀಡಲು 2019-20 ನೇ ಸಾಲಿನಲ್ಲಿ **ರೂ.6.00 ಲಕ್ಷಗಳನ್ನು** ನಿಗದಿಪಡಿಸಲಾಗಿದೆ.

**13) ಆಡಳಿತಾತ್ಮಕ ವೆಚ್ಚ:**

ಈ ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರಚಾರ ನೀಡಲು ಅಗತ್ಯವಿರುವ ಕೈಪಿಡಿಗಳು, ಕರಪತ್ರಗಳು, ಸಾಕ್ಷ್ಯಚಿತ್ರಗಳನ್ನು ತಯಾರಿಸಲು, ಪತ್ರಿಕಾ ಪ್ರಕಟಣೆ ಹೊರಡಿಸಲು, ತರಬೇತಿ ನೀಡುವ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ ಪಾವತಿಸಲು, PMU ಘಟಕಕ್ಕೆ ಅಗತ್ಯವಿರುವ ಲೇಖನ ಮತ್ತು ಗಣಕಯಂತ್ರ ಸಾಮಾಗ್ರಿಗಳು ಹಾಗೂ ಪೀಠೋಪಕರಣಗಳನ್ನು ಖರೀದಿಸಲು, ದೂರವಾಣಿ ಹಾಗೂ ಇತರೆ ಕಛೇರಿ ವೆಚ್ಚ ಭರಿಸಲು, PMU ಘಟಕದಡಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುವ ಸಿಬ್ಬಂದಿಗಳ ವೇತನ ಮತ್ತು ಸೇವಾ ಶುಲ್ಕ ಪಾವತಿಸಲು ಆಡಳಿತಾತ್ಮಕ ವೆಚ್ಚವನ್ನು ಉಪಯೋಗಿಸಲಾಗುವುದು. 2019-20 ನೇ ಸಾಲಿಗೆ PMU ಘಟಕಕ್ಕೆ **ರೂ.10.00 ಲಕ್ಷಗಳ** ಆಡಳಿತಾತ್ಮಕ ವೆಚ್ಚವನ್ನು ನಿಗದಿಪಡಿಸಿದೆ.

ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು 2019-20 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು **ರೂ.1000.00 ಲಕ್ಷಗಳ (ರೂ. ಒಂದು ಸಾವಿರ ಲಕ್ಷಗಳು ಮಾತ್ರ)** ಅನುದಾನವನ್ನು ಅಂದಾಜಿಸಲಾಗಿದೆ.

| ಕ್ರ. ಸಂ | ಮುಂದುವರೆದ ಕಾರ್ಯಕ್ರಮಗಳು | ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ರೈತ ಉತ್ಪಾದಕರ ಸಂಸ್ಥೆ (FPO) ಗಳ ರಚನೆ ಮತ್ತು ನಿರ್ವಹಣೆ | 210.00 |
| 2 | ಮೂಲಭೂತ ಸೌಕರ್ಯಗಳ ನಿರ್ಮಾಣ / CHC / ಯಂತ್ರೋಪಕರಣಗಳ ಬ್ಯಾಂಕ್ | 200.00 |
| 3 | FPO ಗಳಿಗೆ ದುಡಿಯುವ ಬಂಡವಾಳ / ವ್ಯವಹಾರಿಕ ಬಂಡವಾಳ (ಆವರ್ತನ ನಿಧಿ ರೂಪದಲ್ಲಿ) | 100.00 |
| 4 | ಸಂಯೋಜನ ಸಲಹಾ ಸಂಸ್ಥೆ (PCC) | 60.00 |
| 5 | ರೈತ ಉತ್ಪಾದಕರ ಸಂಸ್ಥೆ ಉತ್ಕೃಷ್ಟತಾ ಕೇಂದ್ರ | 100.00 |
| 6 | ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ತೋಟಗಾರಿಕೆ ಅಭಿವೃದ್ಧಿ (PPP-IHD) | 50.00 |
| 7 | FPO ಉತ್ಪನ್ನಗಳಿಗೆ ಲೇಬಲ್ ಒದಗಿಸುವುದು | 30.00 |
| 8 | FPO ಗಳಿಗೆ ಇನ್ ಕ್ಯೂಬೇಷನ್ ಮತ್ತು ಸ್ಟೆಬಿಲೈಜೇಷನ್ ನಿಧಿ | 100.00 |
| 9 | KVK / ಕೃಷಿ ವಿದ್ಯಾನಿಲಯಗಳ ಮೂಲಕ ರೈತ ಉತ್ಪಾದಕರ ಸಂಸ್ಥೆಗಳಿಗೆ ತಾಂತ್ರಿಕ ಬೆಂಬಲ | 62.00 |
| 10 | ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳು (ಯೋಜನೆ ಆಧಾರಿತ) | 66.00 |
| 11 | ರೈತ ಉತ್ಪಾದಕರ ಸಂಸ್ಥೆಗಳಿಗೆ ನೇರ ಮಾರುಕಟ್ಟೆ ವ್ಯವಸ್ಥೆ (ವಿಭಾಗೀಯ ಮಟ್ಟದಲ್ಲಿ) | 6.00 |
| 12 | FPO ಮೇಳ/ಕಾರ್ಯಾಗಾರ | 6.00 |
| 13 | ಆಡಳಿತಾತ್ಮಕ ವೆಚ್ಚ | 10.00 |
| | **ಒಟ್ಟು** | **1,000.00** |

## 10. <u>ಉತ್ಕೃಷ್ಟ ಕೇಂದ್ರಗಳಲ್ಲಿ ಪ್ರಾತ್ಯಕತೆ, ನಿರ್ವಹಣೆ ಹಾಗೂ ತರಬೇತಿ ಕಾರ್ಯಕ್ರಮ:</u>

**ರಾಜ್ಯದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಇಂಡೋ-ಇಸ್ರೇಲ್ ಸಹಬಾಗಿತ್ವದಲ್ಲಿ ತರಕಾರಿ ಬೆಳೆಗಳ ಉತ್ಕೃಷ್ಟ ಕೇಂದ್ರ, ಕುಂಬಾಪುರ ಕ್ಷೇತ್ರ, ಧಾರವಾಡ, ದಾಳಿಂಬೆ ಉತ್ಕೃಷ್ಟ ಕೇಂದ್ರ, ಬಾಗಲಕೋಟೆ ಮತ್ತು ಮಾವು ಉತ್ಕೃಷ್ಟ ಕೇಂದ್ರ, ಕೋಲಾರ ಒಳಗೊಂಡಂತೆ ಒಟ್ಟು ಮೂರು ತೋಟಗಾರಿಕೆ ಉತ್ಕೃಷ್ಟ ಕೇಂದ್ರಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.**

**ಸದರಿ ಕೇಂದ್ರಗಳಲ್ಲಿ** 2019-20 **ನೇ ಸಾಲಿನಲ್ಲಿ ಪ್ರಾತ್ಯಕ್ಷಿತೆ ತಾಕುಗಳ ನಿರ್ವಹಣೆ ಕೈಗೊಳ್ಳಲು, ಗುಣಮಟ್ಟದ ಸಸಿ/ಕಸಿಗಳ ಉತ್ಪಾದನೆ, ರೈತರಿಗೆ/ವಿಸ್ತರಣಾ ಕಾರ್ಯಕರ್ತರಿಗೆ, ತರಬೇತಿ ಹಾಗೂ ಇತರೆ ಕಾರ್ಯಕ್ರಮಗಳನ್ನು ಆಯೋಜಿಸಲು ಅವಶ್ಯಕವಿರುವ ಅನುದಾನದ ವಿವರ ಕೆಳಕಂಡಂತೆ ಇರುತ್ತದೆ.**

### 1. <u>ದಾಳಿಂಬೆ ಉತ್ಕೃಷ್ಟ ಕೇಂದ್ರ, ಬಾಗಲಕೋಟೆ:</u>

| ಕ್ರ. ಸಂ | ಕಾರ್ಯಕ್ರಮಗಳು | ಭೌತಿಕ (ಸಂ) | ಆರ್ಥಿಕ (ರೂ .ಲಕ್ಷಗಳಲ್ಲಿ) | ಷರಾ |
|---|---|---|---|---|
| **I** | ಪ್ರಾತ್ಯಕ್ಷತೆ ತಾಕುಗಳ ಹಾಗೂ ತಾಯಿ ತಾಕಿನ ನಿರ್ಮಾಣ ಮತ್ತು ಅಭಿವೃದ್ಧಿ | | | |
| 1 | ಪ್ರಾತ್ಯಕ್ಷತೆ ತಾಕುಗಳಿಗೆ ಮತ್ತು ತಾಯಿ ತಾಕಿಗೆ ಅವಶ್ಯಕವಿರುವ ರೋಗ ಮತ್ತು ಕೀಟನಾಶಕಗಳು ಹಾಗೂ ರಾಸಾಯನಿಕ ಮತ್ತು ಜೈವಿಕ ಗೊಬ್ಬರಗಳನ್ನು ಖರೀದಿಸುವುದು | 1 | 2.50 | |
| 2 | ರೋಗ ಪರೀಕ್ಷೆ ಪ್ರಯೋಗಾಲಯಕ್ಕೆ ಬೇಕಾಗುವ ಪರಿಕರಗಳು ಹಾಗೂ ಇತರೆ ಖರೀದಿ | 1 | 0.10 | |
| 3 | ಮದರ್ ಬ್ಲಾಕ್ ಮುಂಭಾಗದಲ್ಲಿ ನೀರು ಬಸಿಗಾಲುವೆ ಹಾಗೂ ಸಿ.ಸಿ. ರೋಡ್ ನಿರ್ಮಾಣ ಕಾಮಗಾರಿ | 1 | 1.79 | |
| 5 | ತಾಯಿ ತಾಕು (ಮದರ್ ಬ್ಲಾಕ್) ನಲ್ಲಿ ಅವಶ್ಯಕವಿರುವ ಕಳೆ ನಿಯಂತ್ರಣ ಚಾಪೆ ಖರೀದಿಸುವುದು | 1 | 0.25 | |
| | ಉಪ ಮೊತ್ತ **I** | **4** | **4.64** | |
| **II** | ತರಬೇತಿಗಳು | | | |

| | | | | |
|---|---|---|---|---|
| 1 | ರೈತರಿಗೆ ತರಬೇತಿ ಕಾರ್ಯಕ್ರಮಗಳು | 75 | 0.75 | |
| 2 | ಇಲಾಖಾ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು | 25 | 0.25 | |
| 3 | ಆಧುನಿಕ ದಾಳಿಂಬೆ ಬೇಸಾಯದ ಬಗ್ಗೆ ಮಾಹಿತಿಯನ್ನೊಳಗೊಂಡ ಕರಪತ್ರಗಳು ಹಾಗೂ ಕೈಪಿಡಿಗಳನ್ನು ತಯಾರಿಸುವುದು | 1 | 0.50 | |
| | **ಉಪ ಮೊತ್ತ II** | **101** | **1.50** | |
| **III** | ಸಸ್ಯಾಭಿವೃದ್ಧಿ ಮತ್ತು ನಿರ್ವಹಣೆ | | | |
| 1 | ಸಸ್ಯಾಭಿವೃದ್ಧಿಗಾಗಿ ಅವಶ್ಯಕವಿರುವ ಸಾಧನಗಳನ್ನು ಖರೀದಿಸುವುದು (ಅಗ್ರೋಪೀಟ್, ಜೈವಿಕಗೊಬ್ಬರಗಳು, ಪರ್ಲೈಟ್, ವರ್ಮಿಕ್ಯೂಲೈಟ್ ಮತ್ತು ಪ್ರೋ-ಟ್ರೇಗಳು, ಪಾಲಿಥೀನ್ ಬ್ಯಾಗ್ ಗಳು ಹಾಗೂ ಇನ್ನಿತರ ಪರಿಕರಗಳನ್ನು ಖರೀದಿಸುವುದು | 1 | 1.00 | |
| | **ಉಪ ಮೊತ್ತ III** | **1** | **1.00** | |
| **IV** | ಯಾಂತ್ರೀಕರಣ | | | |
| 1 | ಕ್ಷೇತ್ರದಲ್ಲಿರುವ ಯಂತ್ರೋಪಕರಗಳ ರಿಪೇರಿ ಮತ್ತು ನಿರ್ವಹಣೆ | 2 | 0.20 | |
| 2 | ಬೋರವೆಲ್ ಗಳ ರಿಪೇರಿ ಮತ್ತು ನಿರ್ವಹಣೆ | 1 | 0.10 | |
| 3 | ಕ್ಷೇತ್ರದ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಗೆ ವಿಮೆ ಮಾಡಿಸುವುದು ಹಾಗೂ ಟ್ರೈಲರ್ ಆರ್.ಟಿ.ಓ.ನೋಂದಣಿ ಮಾಡಿಸುವುದು | 1 | 0.20 | |
| | **ಉಪ ಮೊತ್ತ IV** | **4** | **0.50** | |
| **V** | ಆಡಳಿತಾತ್ಮಕ ಹಾಗೂ ಇತರೆ ವೆಚ್ಚಗಳು | | | |
| 1 | ವಿಷಯ ತಜ್ಞರು, ರೈತ ಅನುವುಗಾರ, ಲಾಬ್ ಟೆಕ್ನಿಷಿಯನ್, ಕಂಪ್ಯೂಟರ್ ಆಪರೇಟರ್, ಅಟೆಂಡರ್, ಭದ್ರತಾ ಸಿಬ್ಬಂದಿಗಳು ಹಾಗೂ ಕ್ಷೇತ್ರ ಕೆಲಸಗಾರರ ವೇತನ (ಹೊರ ಗುತ್ತಿಗೆ ಆಧಾರದ ಮೇಲೆ) | 11 | 16.20 | |
| 2 | ಟ್ರ್ಯಾಕ್ಟರ್ ಹಾಗೂ ಯಂತ್ರೋಪಕರಣಗಳಿಗೆ ಪೆಟ್ರೋಲ್ ಮತ್ತು ಡಿಸೈಲ್ ಖರೀದಿ | 1 | 0.20 | |
| 3 | ದೂರವಾಣಿ ಬಿಲ್ಲುಗಳ ಪಾವತಿ | 1 | 0.10 | |
| 4 | ವಿದ್ಯುತ್ ಬಿಲ್ಲು ಪಾವತಿ | 1 | 2.56 | |
| 5 | ಕಛೇರಿ ಕೆಲಸಕ್ಕೆ ವಾಹನ ಬಾಡಿಗೆಯ ಬಾಬ್ತು ಹಾಗೂ ನಿರ್ವಹಣೆ (ಹೊರ ಗುತ್ತಿಗೆ ಆಧಾರದ ಮೇಲೆ) | 1 | 3.00 | |
| 6 | ಗಾರ್ಡನ್ ಗೆ ನೀರುಣಿಸಲು ಸ್ಪ್ರಿಂಕ್ಲರ್ ಗಳನ್ನು ಅಳವಡಿಸುವುದು | 1 | 0.08 | |
| 7 | ಇತರೆ ವೆಚ್ಚಗಳು (ಸಭೆಗಳ, ಸೇಮಿನಾರ್ ಮತ್ತು ಇಸ್ರೇಲ್ ತಜ್ಞರು ಕೇಂದ್ರಕ್ಕೆ ಭೇಟಿ ನೀಡಿದಾಗ ಬರುವ ವೆಚ್ಚಗಳ ಪಾವತಿ ಹಾಗೂ ಇತರೆ) | 1 | 5.22 | |
| | **ಉಪ ಮೊತ್ತ V** | **16** | **27.36** | |
| | **ಒಟ್ಟು ಮೊತ್ತ I ರಿಂದ V** | **126** | **35.00** | |

## 2. ತರಕಾರಿ ಬೆಳೆಗಳ ಉತ್ಕೃಷ್ಟ ಕೇಂದ್ರ, ಕುಂಬಾಪುರ ಕ್ಷೇತ್ರ, ಧಾರವಾಡ:

| ಕ್ರ.ಸಂ | ಕಾರ್ಯಗಳು / ಚಟುವಟಿಕೆ | ಗುರಿ | |
|---|---|---|---|
| **I.** | ಪ್ರಾತ್ಯಕ್ಷತೆ ತಾಕು ನಿರ್ಮಾಣ | **Phy** | **Fin** |
| | 1. ತೆರೆದ ಕ್ಷೇತ್ರದಲ್ಲಿ ನಿಖರ ಬೇಸಾಯ ಪದ್ಧತಿಯಲ್ಲಿ ಬದನೆ, ಟೊಮ್ಯಾಟೊ, ಹಸಿಮೆಣಸಿನಕಾಯಿ, ಈರುಳ್ಳಿ, ಬೆಂಡೆ, ಇತರೆ ತರಕಾರಿ ಬೆಳೆಗಳ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ | 2 Ha | 2.00 |
| | 2. ಬಳ್ಳಿ ಜಾತಿಯ ತರಕಾರಿಗಳ ಬೇಸಾಯ 0.2 ಹೆ. 1 ಹಂಗಾಮು | 0.2 Ha | 0.30 |
| | 3.ಉಪಕರಣಗಳು ಇಂಧನ ಹಾಗೂ ದುರಸ್ಥಿ ವೆಚ್ಚಗಳು | | 1.50 |
| | **Total** | **1.2 Ha** | **3.80** |
| **II.** | ಸಂರಕ್ಷಿತ ರಚನೆಗಳಲ್ಲಿ ತರಕಾರಿ ಪ್ರಾತ್ಯಕ್ಷತೆ – ಸಸಿಗಳ ವೆಚ್ಚ ಮತ್ತು ಬೇಸಾಯದ ಖರ್ಚು as per MIDH Rs.140 per sqmt but claiming at Rs.70 per sqmt) | | |
| | A. NVPH – 2 unit of1200 sqmt (Capsicum) | 2400 | 1.68 |
| | B. Anti Insect Net house 2 unit of 1000 sq mtr (Chilli) | 2000 | 1.40 |
| | C .Walk- in- tunnel 4 units of 264sqmt each | 1056 | 0.74 |

| | | | |
|---|---|---|---|
| | **Total** | **5456** | **3.82** |
| **III.** | ತರಕಾರಿ ಸಸಿಗಳ ಉತ್ಪಾದನೆ **(ಬೀಜ, ಮಾಧ್ಯಮ, ಸಸ್ಯ ಸಂರಕ್ಷಣೆ ರಾಸಾಯನಿಕಗಳು ಇತ್ಯಾದಿ)** | | 0 |
| | **Total** | | **0** |
| **IV.** | ಸಂರಕ್ಷಿತ ರಚನೆಗಳಲ್ಲಿ ತರಕಾರಿ ಪ್ರಾತ್ಯಕ್ಷತೆ **– (2018-19** ನೇ ಸಾಲಿನ ಉಳಿಕೆ ಪ್ರಾತ್ಯಕ್ಷತೆಗಳು ಮುಂದುವರೆದಿದ್ದು**)** | | |
| | A. NVPH – 1 1200 sqmt | 1200 | |
| | B. NVPH – 2 1200 sqmt | 1200 | |
| | C.AINH-1 1000 sqmt | 1000 | |
| | D.WIT 1, 2 & 4 | 804 | |
| | **Total** | **4204** | **0** |
| **V.** | ತರಬೇತಿಗಳ ಆಯೋಜನೆ | | |
| | 1. ತೆರೆದ ಕ್ಷೇತ್ರದಲ್ಲಿ ನಿಖರ ಬೇಸಾಯ ಪದ್ಧತಿಯಲ್ಲಿ ಹಾಗೂ ಸಂರಕ್ಷಿತ ತರಕಾರಿ ಬೇಸಾಯದ ಕುರಿತು 2 ದಿನಗಳ ಅಲ್ಪಾವಧಿ ತರಬೇತಿ (ರೂ.1000/- ಪ್ರತಿ ರೈತರಿಗೆ 1 ದಿನಕ್ಕೆ) | | 0.50 |
| | 2. ಅಧಿಕಾರಿಗಳಿಗೆ ತರಬೇತಿ (ರೂ.1000/- ಪ್ರತಿ ಅಧಿಕಾರಿಗೆ 1 ದಿನಕ್ಕೆ)<br><br>3. ತಾಂತ್ರಿಕ ಕೈಪಿಡಿಗಳು, ಹಸ್ತಪ್ರತಿಗಳ ಮುದ್ರಣ ಹಾಗೂ ಇತರೆ ಪ್ರಚಾರ ಸಾಮಗ್ರಿ | | 0<br><br>0.25 |
| | **Total** | | **0.75** |
| **VI.** | ಕಾಮಗಾರಿಗಳು | | |
| | 1) ಆಧುನಿಕ ಮಾರಾಟ ಮಳಿಗೆ ನಿರ್ಮಾಣ | | |
| | 2) NVPH-1 & NVPH-2 ಘಟಕಗಳ ನೀರು ಕೊಯ್ಲು | | 1.00 |
| | 3) ಸಿ.ಸಿ.ಟಿ.ವಿ. ಅಳವಡಿಕೆ (Extension) | | 1.00 |
| | 4) ತರಬೇತಿ ಕೊಠಡಿ ಎ.ಸಿ. ಅಳವಡಿಕೆ | | 0.00 |
| | 5) ಹೊಸ ಬೋರ್ ವೆಲ್ ನಿಂದ ಪೈಪ್ ಲೈನ್ ಅಳವಡಿಕೆ (ಮುಂದುವರಿದ ಕಾಮಗಾರಿ) | | 1.00 |
| | **Total** | | **3.00** |
| **VII.** | ಸಾದಿಲ್ವಾರು ವೆಚ್ಚಗಳು – ಸಿಬ್ಬಂದಿ ಸೇವೆ | | |
| | **1)** ಕೃಷಿ ಕಾರ್ಮಿಕರ ಕೂಲಿ ಬಾಬ್ತು **-** ಇತ್ಯಾದಿ ಕಾಮಗಾರಿಗಳು **(**ಹೊರಗುತ್ತಿಗೆ ಆಧಾರದಲ್ಲಿ ಪಡೆಯುವುದು**)** | 10 | 6.73 |
| | 2) ಕಂಪ್ಯೂಟರ್ ಆಪರೇಟರ್-1, ಭದ್ರತಾ ಸಿಬ್ಬಂದಿ-4, ಟ್ರಾಕ್ಟರ್ ಡ್ರೈವರ್ -1, ಅಟೆಂಡರ್ -1 ಸಂಖ್ಯೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯುವುದು) | 7 | 5.70 |
| | 3) ಮೇಲ್ವಿಚಾರಕರು -3 ಸಂಖ್ಯೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯುವುದು | 3 | 5.40 |
| | 4. ವಿಷಯ ತಜ್ಞರು -2 ಸಂಖ್ಯೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯುವುದು | 2 | 5.20 |
| | **Total** | **22** | **23.03** |
| **VIII** | ಸಾದಿಲ್ವಾರು ವೆಚ್ಚಗಳು – ಇತರೆ | | |
| | 1) ಪೀಠೋಪಕರಣಗಳ ಖರೀದಿ | | 0 |
| | 2) ಲೇಖನ ಸಾಮಗ್ರಿಗಳು ಕಂಪ್ಯೂಟರ್ ಹಾಗೂ ಜೆರಾಕ್ಸ್ ಮಿಷನ್ ಗಳ ನಿರ್ವಹಣೆ | | 0.25 |
| | 3) ವಿದ್ಯುತ್ ಛಕ್ತಿ ಮತ್ತು ದೂರವಾಣಿ ವೆಚ್ಚ | | 2.00 |
| | 4) ಹೌಸ್ ಕೀಪಿಂಗ್, ಸಾನಿಟರಿ ಸಾಮಗ್ರಿಗಳ ಖರೀದಿ | | 0.30 |
| | 5) ಯೋಜನಾಧಿಕಾರಿಗಳ ಗುತ್ತಿಗೆ ವಾಹನದ ಬಾಬ್ತು | | 1.50 |
| | 6) ಉದ್ಘಾಟನೆ ಸಮಾರಂಭ | | 0 |

| | | | |
|---|---|---|---|
| | 7) ಆಟೋಮೇಷನ್ ಕೋಣೆ ಹಾಗೂ ಹೊಸ ಬೋರ್ ವೆಲ್ ಗೆ ವಿದ್ಯುತ್ ಮೀಟರ್ ಅಳವಡಿಕೆ | | 0 |
| | 8) ಕೃಷಿ ಪರಿಕರಗಳ ಖರೀದಿ, ಬಾಡಿಗೆ ಟ್ರಾಕ್ಟರ್ ಬಾಬ್ತು, ಬೋರ್ ವೆಲ್ ರಿಪೇರಿ, ಕೃಷಿ ಉಪಕರಣಗಳ ಖರೀದಿ – ರಿಪೇರಿ, ಇತರೆ ಸಾಂದರ್ಭಿಕ ವೆಚ್ಚಗಳು | | 1.30 |
| | 9) ಒಂದು ಆಕಳು ಮತ್ತು ಕರುವಿನ ನಿರ್ವಹಣೆ | | 0.25 |
| | 10) ಸಾವಯವ ಪರಿಕರಗಳ ತಯಾರಿಕೆಗೆ ಸಿಮೆಂಟ್ ತೊಟ್ಟಿಗಳ ಹಾಗೂ ಸಾವಯವ ರಸ ತಯಾರಿಸುವ ಕಚ್ಚಾ ವಸ್ತುಗಳ ಖರೀದಿ | | 0 |
| | 11) ಕೌಶಲ್ಯ ತರಬೇತಿ | | 0 |
| **Total** | | | **5.60** |
| **Grand Total** | | | **40.00** |

### 3. <u>ಮಾವು ಉತ್ಕೃಷ್ಟ ಕೇಂದ್ರ, ಕೋಲಾರ:</u>

| ಕ್ರ. ಸಂ | ಕಾರ್ಯಕ್ರಮದ ವಿವರ | ಗುರಿ | |
|---|---|---|---|
| | | ಭೌತಿಕ (ಎ/ಸಂ) | ಆರ್ಥಿಕ (ರೂ.ಲಕ್ಷಗಳಲ್ಲಿ) |
| I | ಅಧಿಕ / ಅತ್ಯಧಿಕ ಸಾಂದ್ರತೆ ತಾಕುಗಳ ನಿರ್ವಹಣೆ | | |
| ಎ | ಹೊರಗುತ್ತಿಗೆ ಆಧಾರದ ಮೇಲೆ ತೋಟಗಾರರ ಸೇವೆಯನ್ನು ಪಡೆಯುವುದು (@ 9600 ಪ್ರತಿ ತೋಟಗಾರ/ಮಾಹೆ ಒಟ್ಟು 5 ತೋಟಗಾರರು 12 ತಿಂಗಳಿಗೆ + ಜಿ.ಎಸ್.ಟಿ. @ 18%) | 23 ಎಕರೆ | 6.80 |
| ಬಿ | ಪೋಷಕಾಂಶಗಳ ಖರೀದಿ (ಗೊಬ್ಬರ /ಔಷಧಿ, ಜೈವಿಕ ಗೊಬ್ಬರ, ಕಸಿಗಿಡಗಳು, ಆಧಾರ ಕೋಲು ಇತ್ಯಾದಿ) | 23 ಎಕರೆ | 1.50 |
| ಸಿ | ಪ್ರಾತ್ಯಕ್ಷಿತಾ ತಾಕುಗಳ ನಿರ್ವಹಣೆ (ಸವರುವಿಕೆ, ರಕ್ಷಣಾ ಪೇಸ್ಟ್ ನಾಟಿ ಮಾಡುವುದು, ಆಧಾರ ಕಡ್ಡಿ ನೀಡುವುದು, ರಸ್ತೆ ಹಾಗೂ ಟ್ರಂಚ್ ಗಳ ನಿರ್ವಹಣೆ) | 23 ಎಕರೆ | 0.50 |
| ಒಟ್ಟು | | **23** ಎಕರೆ | **8.80** |
| II | ಪುನಃಶ್ಚೇತನ ಹಾಗೂ **INM** ತಾಕಿನ ನಿರ್ವಹಣೆ | | |
| ಎ | ಹೊರಗುತ್ತಿಗೆ ಆಧಾರದ ಮೇಲೆ ತೋಟಗಾರರ ಸೇವೆಯನ್ನು ಪಡೆಯುವುದು (@ 9600 ಪ್ರತಿ ತೋಟಗಾರ/ಮಾಹೆ ಒಟ್ಟು 2 ತೋಟಗಾರರು 12 ತಿಂಗಳಿಗೆ + ಜಿ.ಎಸ್.ಟಿ. @ 18 % | 10 ಎಕರೆ | 2.70 |
| ಬಿ | ಅಂತರ ಬೆಳೆ (ತರಕಾರಿ/ಹೂವನ್ನು 5 X 4 ಬಾದಾಮಿ ತಾಕಿನಲ್ಲಿ ಬೆಳೆಯುವುದು) 2 ಬೆಳೆ/ಪ್ರತಿ ವರ್ಷ | 1 ಎಕರೆ | 0.50 |
| | ಒಟ್ಟು | **11** ಎಕರೆ | **3.20** |
| II | ಬಹು ಬ್ರೂಣ ತಳಿಗಳಿಂದ ತಾಯಿ ಗಿಡಗಳ ಅಭಿವೃದ್ಧಿ | 1 ಎಕರೆ | 1.00 |
| ಒಟ್ಟು | | **1** ಎಕರೆ | **1.00** |
| III | ಮಾನವ ಸಂಪನ್ಮೂಲ ಅಭಿವೃದ್ಧಿ | | |
| ಎ | ರೈತರು ಹಾಗೂ ಅಧಿಕಾರಿಗಳಿಗೆ ನೂತನ ತಂತ್ರಜ್ಞಾನದ ಬಗ್ಗೆ ತರಬೇತಿ ನೀಡುವುದು | 400 ಸಂಖ್ಯೆ | 1.20 |
| ಒಟ್ಟು | | **400** ಸಂಖ್ಯೆ | **1.20** |
| IV | ಸಾದಿಲ್ವಾರು ವೆಚ್ಚಗಳು | | |
| ಎ | ಹೊರಗುತ್ತಿಗೆ ಆಧಾರದ ಮೇಲೆ ವಿಷಯತಜ್ಞರು, ಗಣಕ ಯಂತ್ರ ನಿರ್ವಾಹಕರು, ಕ್ಷೇತ್ರ ನಿರ್ವಾಹಕರು ರವರ ಸೇವೆಯನ್ನು ಪಡೆಯುವುದು. | 3 ಸಂಖ್ಯೆ | 7.62 |
| ಬಿ | ಕಛೇರಿ ನಿರ್ವಹಣೆ (ಇಂಧನ ವೆಚ್ಚ, ವಿದ್ಯುತ್ ವೆಚ್ಚ, ಪತ್ರಿಕಾ ಪ್ರಕಟಣೆ ವೆಚ್ಚ, ಫೋಟೋ ಹಾಗೂ ಚಿತ್ರಿಕರಣ ವೆಚ್ಚ, ದೂರವಾಣಿ ವೆಚ್ಚ, ಪ್ರಕಟಣೆ ರಿಪೇರಿ, stationery, Insurance, ಇತ್ಯಾದಿ) | Lot | 3.18 |
| ಒಟ್ಟು | | **2** ಸಂಖ್ಯೆ | **10.80** |

| | | |
|---|---|---|
| ನಿವ್ವಳ ಒಟ್ಟು | **35 ಎ + 403 ಸಂ.** | **25.00** |

2019-20 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಉತ್ಕೃಷ್ಟ ಕೇಂದ್ರಗಳ ನಿರ್ವಹಣೆಗಾಗಿ ರೂ.100.00 ಲಕ್ಷಗಳ ಅನುದಾನವನ್ನು ಒದಗಿಸಿ, ಸದರಿ ಯೋಜನೆಯನ್ನು ಮುಂದುವರೆಸಲು ಅನುಮೋದನೆ ನೀಡಿದೆ.

## 11. ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ ಸ್ವಯಂಚಾಲಿತ ಯಾಂತ್ರೀಕರಣ (Automation):

2016-17 ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ಬಜೆಟ್ ಭಾಷಣದಲ್ಲಿ "**2016-17** ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ **36** ರ ಪ್ರಕಾರ ನಿಖರ ಬೇಸಾಯ ಪ್ರೋತ್ಸಾಹಿಸಲು ಸಕಾಲದಲ್ಲಿ ಅಗತ್ಯವಿರುವ ನೀರು ಮತ್ತು ಪೌಷ್ಠಿಕಾಂಶಗಳನ್ನು ಒದಗಿಸಲು ಫರ್ಟಿಗೇಷನ್ **(Fertigation)** ಗಾಗಿ ಸ್ವಯಂಚಾಲಿತ ವ್ಯವಸ್ಥೆ **(Automation)** ಕಲ್ಪಿಸಲು ಶೇ.**50** ರಷ್ಟು ಸಹಾಯಧನವನ್ನು ನೀಡಲಾಗುವುದು" ಎಂದು ಘೋಷಿಸಿರುತ್ತಾರೆ.

ಹನಿ ನೀರಾವರಿ ಪದ್ಧತಿಯು ಅತ್ಯುತ್ತಮ ನೀರಾವರಿ ವ್ಯವಸ್ಥೆಯಾಗಿರುತ್ತದೆ. ಇದರಿಂದ ನೀರಿನ ಸದ್ಬಳಕೆ, ವಿದ್ಯುಚ್ಛಕ್ತಿ ವ್ಯಯ, ಕೂಲಿ ಆಳುಗಳಲ್ಲಿ ಉಳಿತಾಯ, ಅಧಿಕ ಇಳುವರಿ ಮತ್ತು ಗುಣಮಟ್ಟದ ಉತ್ಪನ್ನ ಪಡೆಯ ಬಹುದು. ಹನಿ ನೀರಾವರಿ ಪದ್ಧತಿಯನ್ನು ಬಳಸಿ ರಸಾವರಿ (Fertigation) ಪದ್ಧತಿ ಅಳವಡಿಸಬಹುದಾಗಿದ್ದು, ಇದರಿಂದ ರಾಸಾಯನಿಕ ಗೊಬ್ಬರಗಳಲ್ಲಿ ಉಳಿಕೆ ಹಾಗೂ ಹೆಚ್ಚಿನ ಇಳುವರಿ ಪಡೆಯಬಹುದಾಗಿದೆ. ಹನಿ ನೀರಾವರಿ ಅಳವಡಿಸಿದ ನಂತರವು ಅದರ ಸಮರ್ಪಕ ಬಳಕೆ ಹಾಗೂ ನಿರ್ವಹಣೆ ಮಾಡಬೇಕಾಗಿದೆ. ವಿದ್ಯುತ್ತಿನ ಅಸಮರ್ಪಕ ಲಭ್ಯತೆಯಿಂದಾಗಿ ಹನಿ ನೀರಾವರಿ ಸೇರಿದಂತೆ ಎಲ್ಲಾ ರೀತಿಯ ನೀರಾವರಿ ವ್ಯವಸ್ಥೆಯಲ್ಲಿ ಅಡಚಣೆ ಹಾಗೂ ಅಸಮರ್ಪಕತೆ ಉಂಟಾಗುತ್ತದೆ. ಇದನ್ನು ತಪ್ಪಿಸಲು ಹನಿ ನೀರಾವರಿ (ರಸಾವರಿ ಘಟಕ ಸೇರಿದಂತೆ) ವ್ಯವಸ್ಥೆಯನ್ನು ಸ್ವಯಂ ಚಾಲಿತ ಪದ್ಧತಿಯ (Automation) ಮೂಲಕ ನಿರ್ವಹಿಸಬಹುದು. ಈ ವ್ಯವಸ್ಥೆಯಲ್ಲಿ ಗಣಕಯಂತ್ರದ ಹಾಗೂ ತಂತ್ರಾಂಶದ ಮೂಲಕ ಬೆಳೆಗೆ ಅಗತ್ಯವಿರುವ ನೀರಿನ ಹಾಗೂ ರಸಗೊಬ್ಬರದ ಪ್ರಮಾಣವನ್ನು ನಿಖರವಾಗಿ ನೀಡಬಹುದು. ಈ ಪದ್ಧತಿಯನ್ನು ಪ್ರೋತ್ಸಾಹಿಸಲು ಶೇ.50 ರಷ್ಟು ಸಹಾಯಧನ ನೀಡಲು ಯೋಜಿಸಲಾಗುವುದು.

ಯೋಜನೆಯ ಉದ್ದೇಶಗಳು:-

- ಈ ಪದ್ಧತಿಯಿಂದ ನೀರಿನ ಸಂರಕ್ಷಣೆ ಹಾಗೂ ಕೂಲಿ ಆಳುಗಳಲ್ಲಿ ಉಳಿತಾಯ ಸಾಧಿಸಬಹುದು. ಇದು ಸ್ವಯಂಚಾಲಿತ ಪದ್ಧತಿಯಾಗಿರುವುದರಿಂದ ಚಾಲನೆ ಮಾಡುವವರು ಬೇಕಾಗುವುದಿಲ್ಲ.
- ನೀರು ಮತ್ತು ರಸಗೊಬ್ಬರಗಳನ್ನು ಬೆಳೆಗಳಿಗೆ ಸಮರ್ಪಕವಾಗಿ, ನಿರ್ಧಿಷ್ಟವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಬಹುದು.
- ನೀರು, ಶಕ್ತಿ ಹಾಗೂ ವೆಚ್ಚದ ಉಳಿತಾಯವಾಗುತ್ತದೆ.
- ಸಕಾಲದಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ನೀರನ್ನು ಬಳಸುವುದರಿಂದ ಮನುಷ್ಯರ ತಪ್ಪಿನಿಂದಾಗುವ ನೀರಿನ ಪೋಲುವಿಕೆಯನ್ನು ಕಡಿಮೆ ಮಾಡಬಹುದು.
- ಮಣ್ಣಿನ ಫಲವತ್ತತೆ ಹಾಗೂ ಉತ್ಪಾದನೆಯ ಗುಣಮಟ್ಟವು ಸಹ ಹೆಚ್ಚುತ್ತದೆ.

ಅನುದಾನ ಮತ್ತು ಸಹಾಯಧನ:

ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು 2019-20 ನೇ ಸಾಲಿಗೆ "ಸಮಗ್ರ ತೋಟಗಾರಿಕೆ ಅಭಿವೃದ್ಧಿ" ಯೋಜನೆ (ಲೆಕ್ಕ ಶೀರ್ಷಿಕೆ:2401-00-111-0-08 ಅಡಿಯಲ್ಲಿ ರೂ.100.00 ಲಕ್ಷಗಳನ್ನು ಒದಗಿಸಿದೆ.

## 12. ಗೇರು ಅಭಿವೃದ್ಧಿ ಕಾರ್ಯಕ್ರಮ:

ಗೇರು ಉಷ್ಣವಲಯದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಗೇರು ಬೆಳೆಯನ್ನು 70,600 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ವಾರ್ಷಿಕ 1,08,106 ಟನ್ ಉತ್ಪಾದನೆ ಇರುತ್ತದೆ ಹಾಗೂ ಪ್ರತಿ ಹೆಕ್ಟೇರ್ ಗೆ ವಾರ್ಷಿಕವಾಗಿ 775 ಕೆ.ಜಿ ಉತ್ಪಾದಕತೆ ಇರುತ್ತದೆ. ಗೇರನ್ನು ಹೆಚ್ಚಾಗಿ ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶಗಳು, ಒಳನಾಡು ಒಣ ಪ್ರದೇಶಗಳು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ಪ್ರಮುಖವಾಗಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬೆಳಗಾವಿ, ಚಿಕ್ಕಬಳ್ಳಾಪುರ, ಕೋಲಾರ, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳಲ್ಲಿ ಹೆಚ್ಚಾಗಿ ಗೇರನ್ನು ಬೆಳೆಯಲಾಗುತ್ತಿದ್ದು, ಒಣ ಬೇಸಾಯಕ್ಕೂ ಸೂಕ್ತ ಬೆಳೆಯಾಗಿದೆ.

ರಾಜ್ಯದ ಒಟ್ಟಾರೆ ಉತ್ಪಾದನೆಯು ಅಗತ್ಯತೆಗಿಂತ ಕಡಿಮೆ ಪ್ರಮಾಣದಲ್ಲಿರುವುದರಿಂದ ಸಂಸ್ಕರಣಾ ಘಟಕಗಳಿಗೆ ಅಗತ್ಯವಿರುವಷ್ಟು ಕಚ್ಚಾ ಗೇರು ಬೀಜಗಳನ್ನು ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ. ಗೇರು

ಬೆಳೆಯು ಇತರೆ ತೋಟಗಾರಿಕೆ ಬೆಳೆಗಳಿಗೆ ಹೋಲಿಸಿದ್ದಲ್ಲಿ ಕಡಿಮೆ ನೀರಿನಲ್ಲಿ ಬೆಳೆಯಬಹುದಾದಂತಹ ಬೆಳೆಯಾಗಿದ್ದು, ಕೊಯ್ಲೋತ್ತರ ನಷ್ಟದ ಪ್ರಮಾಣ ಕಡಿಮೆ ಇರುವುದರಿಂದ ಹಾಗೂ ಉತ್ತಮ ಮಾರುಕಟ್ಟೆ ದರ ದೊರಕುತ್ತಿರುವುದರಿಂದ ಹಾಗೂ ದೇಶಕ್ಕೆ ಹೆಚ್ಚು ವಿದೇಶಿ ವಿನಿಮಯ ಗಳಿಸಿಕೊಡುತ್ತಿರುವ ಬೆಳೆಗಳಲ್ಲಿ ಒಂದಾಗಿದೆ.

ಆದ್ದರಿಂದ, ಗೇರು ಬೆಳೆಯ ಅಭಿವೃದ್ಧಿಗಾಗಿ, 2017-18 ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ಯಾರ-32 ರಲ್ಲಿ "ರಾಜ್ಯದಲ್ಲಿ ಮುಂದಿನ 5 ವರ್ಷಗಳಲ್ಲಿ 10000 ಹೆಕ್ಟೇರ್ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಗೇರು ಬೀಜ ಬೆಳೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿದ್ದು, ಇದರಿಂದ 10000 ಕ್ಕೂ ಹೆಚ್ಚಿನ ರೈತರಿಗೆ ಅನುಕೂಲವಾಗಲಿದ್ದು, ಇದಕ್ಕಾಗಿ 10 ಕೋಟಿ ರೂ.ಗಳನ್ನು ನೀಡಲಾಗುವುದೆಂದು" ಘೋಷಿಸಿದ್ದು, ಅದರಂತೆ 2017-18 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ಅಡಿ ಗೇರು ಅಭಿವೃದ್ಧಿ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. ಮುಂದುವರಿದು, ಸದರಿ ಕಾರ್ಯಕ್ರಮವನ್ನು 2019-20 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ರೂ.650.00 ಲಕ್ಷಗಳಿಗೆ ವಾರ್ಷಿಕ ಕ್ರಿಯಾ ಯೋಜನೆ ರೂಪಿಸಲಾಗಿದೆ.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ರೂ.144.13 ಲಕ್ಷಗಳನ್ನು ಒಗ್ಗೂಡಿಸಲಾಗುವುದು.

ಯೋಜನೆಯ ಉದ್ದೇಶಗಳು:

1. ಆಯಾ ಪ್ರದೇಶಕ್ಕೆ ಮತ್ತು ಹವಾಗುಣಕ್ಕೆ ಹೊಂದುವ ಕಸಿ ಸಸಿಗಳನ್ನು ನಾಟಿ ಮಾಡುವುದು ಹಾಗೂ ಒಣ ಬೇಸಾಯ ಪದ್ಧತಿಯಲ್ಲಿ ಗೇರು ಬೆಳೆಯ ಪ್ರದೇಶ ವಿಸ್ತರಣೆ ಕೈಗೊಳ್ಳುವುದು.
2. ಭವಿಷ್ಯತ್ತಿನಲ್ಲಿ ಸಂಸ್ಕರಣಾ ಘಟಕಗಳಿಗೆ ಅಗತ್ಯವಿರುವಷ್ಟು ಕಚ್ಚಾ ಗೇರು ಬೀಜಗಳನ್ನು ಪೂರೈಕೆ ಮಾಡುವುದು.

<u>ಕಾರ್ಯಕ್ರಮಗಳ ವಿವರ:</u>

**1.** ಗೇರು ಪ್ರದೇಶ ವಿಸ್ತರಣೆ ಕಾರ್ಯಕ್ರಮ:

ರಾಜ್ಯದಲ್ಲಿ ಗೇರು ಬೆಳೆಯಲ್ಲಿ ಅಧಿಕ ಇಳುವರಿ ಪಡೆಯಲು ಉತ್ತಮ ಗುಣಮಟ್ಟದ ಸುಧಾರಿತ ಗೇರು ತಳಿಗಳನ್ನು ನಾಟಿ ಮಾಡಲು ರೈತರನ್ನು ಪ್ರೋತ್ಸಾಹಿಸಲಾಗುವುದು. ಗೇರು ಕಸಿ ಗಿಡಗಳನ್ನು ಇಲಾಖಾ ನರ್ಸರಿಗಳಿಂದ, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ/ಕೃಷಿ ಮತ್ತು ತೋಟಗಾರಿಕೆಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಹಾಗೂ ಇತರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ರೈತರೆ ನೇರವಾಗಿ ಖರೀದಿಸುವುದು ಅಥವಾ ಇಲಾಖಾ ವತಿಯಿಂದ ರೈತರಿಗೆ ಖರೀದಿಸಿ ವಿತರಿಸಲಾಗುವುದು. ಗೇರು ಪ್ರದೇಶ ವಿಸ್ತರಣೆ ಕಾರ್ಯಕ್ರಮವನ್ನು ಪ್ರತಿ ಹೆಕ್ಟೇರ್ ಗೆ ತಗಲುವ ಒಟ್ಟು ಘಟಕ ವೆಚ್ಚದ ಶೇ.50 ರಂತೆ ಸಾಮಾನ್ಯ ಫಲಾನುಭವಿಗಳಿಗೆ ರೂ.28820/- ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಒಟ್ಟು ಘಟಕ ವೆಚ್ಚದ ಶೇ.90 ರಂತೆ ರೂ.51878/-ರಂತೆ ಪ್ರತಿ ಫಲಾನುಭವಿಗೆ 0.2 ಹೆಕ್ಟೇರ್ ಗಳಿಂದ ಗರಿಷ್ಠ 4 ಹೆಕ್ಟೇರ್ ಗಳವರೆಗೆ ಸಹಾಯಧನವನ್ನು ನೀಡಲಾಗುವುದು.

2019-20 ನೇ ಸಾಲಿನಲ್ಲಿ 1201.12 ಹೆಕ್ಟೇರ್ ಪ್ರದೇಶದಲ್ಲಿ ಗೇರು ಪ್ರದೇಶ ವಿಸ್ತರಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಫಲಾನುಭವಿಗಳಿಗೆ ಸಹಾಯಧನ ಒದಗಿಸಲು ರೂ.231.995 ಲಕ್ಷಗಳನ್ನು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಹಾಗೂ ರೂ.144.13 ಲಕ್ಷಗಳನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಅನುದಾನವನ್ನು ನಿಗದಿಪಡಿಸಲಾಗಿದೆ.

ಹೊಸ ಗೇರು ಪ್ರದೇಶ ವಿಸ್ತರಣೆಗೆ ಪ್ರತಿ ಹೆಕ್ಟೇರ್ ಪ್ರದೇಶಕ್ಕೆ ತಗಲುವ ವೆಚ್ಚ ಹಾಗೂ ಘಟಕವಾರು ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ.

**(ಆರ್ಥಿಕ :ರೂ.ಗಳಲ್ಲಿ)**

| ಕ್ರ. ಸಂ | ಘಟಕ ಕಾರ್ಯಕ್ರಮಗಳು | ಘಟಕ ದರ | ತಗಲುವ ಒಟ್ಟು ವೆಚ್ಚ ಪ್ರತಿ ಹೆ. |
|---|---|---|---|
| 1 | ಭೂಮಿ ಸಿದ್ಧತೆ | | 6000 |
| 2 | ಗುಂಡಿ ತೆಗೆಯುವುದು (0.75 ಮೀ x0.75 ಮೀ x0.75 ಮೀ) | 118.76/ಘ. ಮೀ | 13850 |

| | | | |
|---|---|---|---|
| 3 | FYM - (20kg/plant) ಮತ್ತು ಬೇವಿನ ಹಿಂಡಿ | FYM -1.5/kg, Neem cake-20/kg | 12465 |
| 4 | ಗುಣಿಯಿಂದ ತೆಗೆದ ಮಣ್ಣು ಮತ್ತು ಕೊಟ್ಟಿಗೆ ಗೊಬ್ಬರ ಮಿಶ್ರಣ ಮಾಡಿ ಶೇ.90 ರಷ್ಟು ಗುಣಿ ತುಂಬುವುದು. | 12.88/ಘ. ಮೀ | 1502 |
| 5 | ಗಿಡಗಳ ವೆಚ್ಚ (ಸಾಗಾಣಿಕೆ ವೆಚ್ಚ ಸೇರಿದಂತೆ ) | ರೂ.50/ಗಿಡ | 13850 |
| 6 | ಗಿಡ ನೆಡುವುದು ಮತ್ತು ಆಧಾರ ಕೋಲು ಕಟ್ಟುವುದು | 7/ ಗಿಡ | 1939 |
| 7 | ಲಘು ಪೋಷಕಾಂಶಗಳು ( 5kg/ha) | ( 5kg/ha) | 1000 |
| 8 | ಜೈವಿಕ ಗೊಬ್ಬರ/ಜೈವಿಕ ನಿಯಂತ್ರಕಗಳು | ರೂ.15/ಗಿಡ | 4155 |
| 9 | ಗಿಡಗಳಿಗೆ ಗೊಬ್ಬರ ಹಾಕುವ ವೆಚ್ಚ (Fertilizer application cost) | 7/ ಗಿಡ | 2000 |
| 10 | ಗಿಡಗಳ ಸುತ್ತ ಹೊದಿಕೆ ಮಾಡುವುದು (ಸಾವಯವ ಹೊದಿಕೆ) | ರೂ.2/ಗಿಡ | 554 |
| 11 | ನಾಮ ಫಲಕ ಅಳವಡಿಸುವುದು | | 200 |
| 12 | 3 ಹಂತದ ಛಾಯ ಚಿತ್ರಗಳ ವೆಚ್ಚ | | 125 |
| | ಒಟ್ಟು | | **57640** |

**2.** ಮೊದಲನೇ ವರ್ಷದ ನಿರ್ವಹಣೆ:

2018-19 ನೇ ಸಾಲಿನಲ್ಲಿ ಕೈಗೊಂಡ ಗೇರು ಪ್ರದೇಶ ವಿಸ್ತರಣೆಗೆ ಮೊದಲನೇ ವರ್ಷದ ನಿರ್ವಹಣೆಗಾಗಿ ಪ್ರತಿ ಹೆಕ್ಟೇರ್ ಗೆ ತಗಲುವ ಒಟ್ಟು ಘಟಕ ವೆಚ್ಚದ ಶೇ.50 ರಂತೆ ಸಾಮಾನ್ಯ ಫಲಾನುಭವಿಗಳಿಗೆ ರೂ.11665/- ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಒಟ್ಟು ಘಟಕ ವೆಚ್ಚದ ಶೇ.90 ರಂತೆ ರೂ.20997/-ರಂತೆ ಪ್ರತಿ ಫಲಾನುಭವಿಗೆ ಸಹಾಯಧನವನ್ನು ನೀಡಲಾಗುವುದು.

2019-20 ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಫಲಾನುಭವಿಗಳಿಗೆ ಸಹಾಯಧನ ಒದಗಿಸಲು ಒಟ್ಟು ರೂ.160.510 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

**3.** ಎರಡನೇ ವರ್ಷದ ನಿರ್ವಹಣೆ:

2017-18 ನೇ ಸಾಲಿನಲ್ಲಿ ಕೈಗೊಂಡ ಗೇರು ಪ್ರದೇಶ ವಿಸ್ತರಣೆಗೆ ಮೊದಲನೇ ವರ್ಷದ ನಿರ್ವಹಣೆಗಾಗಿ ಪ್ರತಿ ಹೆಕ್ಟೇರ್ ಗೆ ತಗಲುವ ಒಟ್ಟು ಘಟಕ ವೆಚ್ಚದ ಶೇ.50 ರಂತೆ ಸಾಮಾನ್ಯ ಫಲಾನುಭವಿಗಳಿಗೆ ರೂ.11665/- ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಒಟ್ಟು ಘಟಕ ವೆಚ್ಚದ ಶೇ.90 ರಂತೆ ರೂ.20997/-ರಂತೆ ಪ್ರತಿ ಫಲಾನುಭವಿಗೆ ಸಹಾಯಧನವನ್ನು ನೀಡಲಾಗುವುದು.

2019-20 ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಫಲಾನುಭವಿಗಳಿಗೆ ಸಹಾಯಧನ ಒದಗಿಸಲು ಒಟ್ಟು ರೂ.232.494 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

ಮೊದಲನೆ ಮತ್ತು ಎರಡನೇ ವರ್ಷದ ನಿರ್ವಹಣೆ ಪ್ರತಿ ಹೆಕ್ಟೇರ್ ಪ್ರದೇಶಕ್ಕೆ ತಗಲುವ ವೆಚ್ಚ ಹಾಗೂ ಘಟಕವಾರು ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ :

**(ಆರ್ಥಿಕ: ರೂ.ಗಳಲ್ಲಿ)**

| ಕ್ರ. ಸಂ | ಘಟಕ ಕಾರ್ಯಕ್ರಮಗಳು | ಘಟಕ ದರ | ತಗಲುವ ಒಟ್ಟು ವೆಚ್ಚ ಪ್ರತಿ ಹೆ. |
|---|---|---|---|
| 1 | ಒಣಗಿರುವ ಗಿಡಗಳನ್ನು ತೆಗೆದು ಹೊಸದಾಗಿ ನಾಟಿ ಮಾಡುವುದು (ಶೇ.10 ಅಥವಾ ಗರಿಷ್ಠ 30 ಗಿಡಗಳು) | ರೂ.30/ಗಿಡ | 1500 |
| 2 | ಗಿಡ ನೆಡುವುದು ಮತ್ತು ಆಧಾರ ಕೋಲು ಕಟ್ಟುವುದು | ರೂ.7/ಗಿಡ | 210 |
| 3 | ಕೊಟ್ಟಿಗೆ ಗೊಬ್ಬರ (1.5kg/ ಗಿಡ) ಮತ್ತು ಬೇವಿನ ಹಿಂಡಿ ( 20kg/ ಗಿಡಕ್ಕೆ) | FYM , Neem cake | 12465 |

| | | | |
|---|---|---|---|
| 4 | ಜೈವಿಕ ಗೊಬ್ಬರ/ಜೈವಿಕ ನಿಯಂತ್ರಕಗಳು | ರೂ.15/ಗಿಡ | 4155 |
| 5 | ಕಳೆ ತೆಗೆಯುವುದು, ಅಂತರ ಬೇಸಾಯ, ಇತ್ಯಾದಿ | | 5000 |
| | ಒಟ್ಟು | | **23330** |

**4.** ತರಬೇತಿ /ಕ್ಷೇತ್ರೋತ್ಸವ/ ಅಧ್ಯಯನ ಪ್ರವಾಸ/ ಆಡಳಿತಾತ್ಮಕ ವೆಚ್ಚ:

ಗೇರು ಬೆಳೆಯ ಸುಧಾರಿತ ಪದ್ಧತಿಗಳ ಬಗ್ಗೆ, ಉತ್ಪಾದನೆ ಮತ್ತು ಉತ್ಪಾದಕತೆಗಳನ್ನು ಹೆಚ್ಚಿಸಲು, ಸುಧಾರಿತ ತಳಿಗಳ ಶಿಫಾರಸು ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ವಿಷಯ ತಜ್ಞರುಗಳನ್ನು ತರಬೇತಿ ಕಾರ್ಯಕ್ರಮಕ್ಕೆ ಆಹ್ವಾನಿಸಿ ವಿಚಾರ ವಿನಿಮಯಗೊಳಿಸಲಾಗುವುದು. ಪ್ರಗತಿಪರ ಗೇರು ರೈತರ ತೋಟಗಳಲ್ಲಿ/ ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳಲ್ಲಿರುವ ಹೆಚ್ಚಿನ ಇಳುವರಿ ನೀಡುವ ಹಾಗೂ ಸುಧಾರಿತ ಪದ್ಧತಿಗಳನ್ನು ಅಳವಡಿಸಿಕೊಂಡಿರುವ ಮಾದರಿ ಗೇರು ತಾಕುಗಳಲ್ಲಿ ಪ್ರತಿ ಕ್ಷೇತ್ರೋತ್ಸವ ಕಾರ್ಯಕ್ರಮಗಳನ್ನು ಹಾಗೂ ರೈತರಿಗೆ ಅಧಯನ ಪ್ರವಾಸವನ್ನು ಆಯೋಜಿಸಲಾಗುವುದು. ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಆಡಳಿತಾತ್ಮಕ ವೆಚ್ಚ (ಕಛೇರಿಗಳಿಗೆ ಅವಶ್ಯಕತೆಯಿರುವ ಲೇಖನ ಸಾಮಾಗ್ರಿಗಳು, ಸಭೆಯ ವೆಚ್ಚಗಳು ಇತ್ಯಾದಿ) ಮತ್ತು ಯೋಜನೆ ಪ್ರಚಾರ ಕಾರ್ಯಕ್ರಮ ಇತ್ಯಾದಿ ವೆಚ್ಚಗಳಿಗೆ NHM ಮಾರ್ಗಸೂಚಿಯಂತೆ ನಿಯಾಮಾನುಸಾರ ಖರ್ಚು ಭರಿಸಲಾಗುವುದು. 2019-20 ನೇ ಸಾಲಿನಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲು ರೂ.25.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

ಕಾರ್ಯಕ್ರಮಗಳ ಪಟ್ಟಿ

| ಕ್ರ. ಸಂ | ಕಾರ್ಯಕ್ರಮ | 2019-20 ನೇ ಸಾಲಿಗೆ ವಾರ್ಷಿಕ ಗುರಿ (ರೂ.ಲಕ್ಷಗಳಲ್ಲಿ) | | |
|---|---|---|---|---|
| | | ಭೌತಿಕ | ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಭರಿಸುವ ಆರ್ಥಿಕ ಗುರಿ | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಭರಿಸುವ ಆರ್ಥಿಕ ಗುರಿ |
| 1 | ಗೇರು ಪ್ರದೇಶ ವಿಸ್ತರಣೆ | 1201.12 ಹೆ. | 232.00 | 114.13 |
| 2 | ಮೊದಲನೇ ವರ್ಷದ ನಿರ್ವಹಣೆ | 1200 ಹೆ. | 160.510 | |
| 3 | ಎರಡನೇ ವರ್ಷದ ನಿರ್ವಹಣೆ | 1795.05 ಹೆ. | 232.490 | |
| 4 | ತರಬೇತಿ /ಕ್ಷೇತ್ರೋತ್ಸವ/ಅಧ್ಯಯನ ಪ್ರವಾಸ/ಆಡಳಿತಾತ್ಮಕ ವೆಚ್ಚ | | 25.00 | |
| | ಒಟ್ಟು | | **650.00** | **114.13** |

ಟಿಪ್ಪಣಿ: ಘಟಕ ಕಾರ್ಯಕ್ರಮಗಳಿಗೆ ನಿಗದಿಪಡಿಸಲಾದ ಅನುದಾನವನ್ನು ಜಿಲ್ಲಾವಾರು ಅವಶ್ಯಕತೆ ಅನುಗುಣವಾಗಿ ವಾರ್ಷಿಕಗುರಿ ಮಿತಿಯೊಳಗೆ ತೋಟಗಾರಿಕೆ ನಿರ್ದೇಶಕರ ಹಂತದಲ್ಲಿ ಬದಲಾವಣೆ ಮಾಡಿಕೊಳ್ಳಲಾಗುವುದು.

ಮುಂದುವರೆದು, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ "ಗೇರು ಅಭಿವೃದ್ಧಿ ಕಾರ್ಯಕ್ರಮವನ್ನು (ಲೆಕ್ಕಶೀರ್ಷಿಕೆ: 2401-00-111-0-08) 2019-20 ನೇ ಸಾಲಿನಲ್ಲಿ ಮುಂದುವರೆಸಲು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಭರಿಸುವ ಆರ್ಥಿಕ ಅನುದಾನ ಒಟ್ಟು ರೂ.650.00 (ಆರುನೂರಾ ಐವತ್ತು ಲಕ್ಷಗಳು) ಹಾಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಭರಿಸುವ ಒಗ್ಗೂಡಿಸುವಿಕೆಯ ಆರ್ಥಿಕ ಅನುದಾನ ಒಟ್ಟು ರೂ.114.13 (ಒಂದುನೂರಾ ಹದಿನಾಲ್ಕು ಲಕ್ಷ ಹದುಮೂರು ಸಾವಿರಗಳು) ಲಕ್ಷಗಳನ್ನು ಒದಗಿಸಿದೆ.

**13.** ನೀರಿನ ಟ್ಯಾಂಕರ್ ಗಳ ಖರೀದಿಸಲು ಸಹಾಯಧನ:

ಕಳೆದ 3 ವರ್ಷಗಳಿಂದ ಭೀಕರ ಬರಗಾಲದಿಂದ ರೈತರ ಬೆಳೆಗಳಿಗೆ ನೀರಿನ ಅಭಾವವನ್ನು ತಡೆಗಟ್ಟಲು ನೀರಿನ ಟ್ಯಾಂಕರ್ ಗಳನ್ನು ಖರೀದಿಸಿದ ಸಾಮಾನ್ಯ ವರ್ಗಕ್ಕೆ ಸೇರಿದ ರೈತರಿಗೆ ಶೇ.50 ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಕ್ಕೆ ಸೇರಿದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ (ಲೆಕ್ಕಶೀರ್ಷಿಕೆ: 2401-00-111-0-08) ಸಹಾಯಧನ ನೀಡಲು ಕಾರ್ಯಕ್ರಮವನ್ನು ರೂಪಿಸಲಾಗಿದೆ

<u>ಸರ್ಕಾರದ ಆದೇಶ ಸಂಖ್ಯೆ: ತೋಇ **264** ತೋಸವಿ **2017**, ಬೆಂಗಳೂರು, ದಿನಾಂಕ:**09-01-2018** ರಂತೆ</u> 4,000 ಲೀ. ಮತ್ತು 5000 ಲೀ ನೀರಿನ ಟ್ಯಾಂಕರ್ ಗಳನ್ನು ಖರೀದಿಸಲು ಸಾಮಾನ್ಯ ರೈತರಿಗೆ ಶೇ.50 ರಷ್ಟು ಕ್ರಮವಾಗಿ ರೂ62,500/- ಮತ್ತು ರೂ.70,000/- ಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಕ್ಕೆ ಸೇರಿದ ರೈತರಿಗೆ ಶೇ.90 ರಂತೆ ರೂ.1,12,500/- ಮತ್ತು ರೂ.1,26,000/- ಗಳ ಸಹಾಯಧನ ನೀಡಲಾಗುವುದು.

III ಯೋಜನೆಯ ಉದ್ದೇಶಗಳು:-

ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ವರ್ಗದ ರೈತ ವರ್ಗಕ್ಕೆ ಶೇ.50 ರಂತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಕ್ಕೆ ಸೇರಿದ ರೈತರು ಖರೀದಿಸಿದ ನೀರಿನ ಟ್ಯಾಂಕರ್ ಗಳಿಗೆ ಶೇ.90 ರಂತೆ ಸಹಾಯಧನ ರಾಜ್ಯವಲಯದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ, 4000 ಲೀ. ಹಾಗೂ 5000 ಲೀ. ಸಾಮರ್ಥದ ನೀರಿನ ಟ್ಯಾಂಕರ್ ಖರೀದಿಸಲು ಸಾಮಾನ್ಯ ವರ್ಗಕ್ಕೆ ಶೇ.50 ರಂತೆ ಅನುಕ್ರಮವಾಗಿ ಗರಿಷ್ಠ ರೂ.62,500/- ಹಾಗೂ ರೂ.70,000/- ಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಕ್ಕೆ ಸೇರಿದ ರೈತರಿಗೆ ಶೇ.90 ರಂತೆ ರೂ.1,12,500/- ಮತ್ತು ರೂ.1,26,000/- ಗಳು ಸಹಾಯಧನ ನೀಡಲು ಕೆಳಕಂಡ ಉದ್ದೇಶಗಳಿಗಾಗಿ ಕಾರ್ಯಕ್ರಮ ರೂಪಿಸಲಾಗಿದೆ

1. ಕಳೆದ 3 ವರ್ಷಗಳಿಂದ ಬರಗಾಲವಿರುವುದರಿಂದ ತೋಟಗಳಲ್ಲಿ ಅಂತರ್ಜಲ ಕುಸಿದಿದ್ದು ಬೇರೆ ಕಡೆಯಿಂದ
ಟ್ಯಾಂಕರ್ ಮೂಲಕ ನೀರು ಒದಗಿಸುವುದು.
2. ಬೆಳೆದಿರುವ ತೋಟಗಾರಿಕೆ ಬೆಳೆಗಳನ್ನು ಉಳಿಸಿಕೊಳ್ಳುವುದು.

IV ಸಹಾಯಧನ ಮಾದರಿ:-

ಸದರಿ ಕಾರ್ಯಕ್ರಮದ ಮಾರ್ಗಸೂಚಿ ಅನ್ವಯ ಸಾಮಾನ್ಯ ವರ್ಗದ ರೈತ ವರ್ಗಕ್ಕೆ ಶೇ.50 ರಂತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಕ್ಕೆ ಸೇರಿದ ರೈತರು ಖರೀದಿಸಿದ ನೀರಿನ ಟ್ಯಾಂಕರ್ ಗಳಿಗೆ ಶೇ.90 ರಂತೆ ಸಹಾಯಧನ ರಾಜ್ಯವಲಯದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ, 4000 ಲೀ. ಹಾಗೂ 5000 ಲೀ. ಸಾಮರ್ಥದ ನೀರಿನ ಟ್ಯಾಂಕರ್ ಖರೀದಿಸಲು ಸಾಮಾನ್ಯ ವರ್ಗಕ್ಕೆ ಶೇ.50 ರಂತೆ ಅನುಕ್ರಮವಾಗಿ ಗರಿಷ್ಠ ರೂ62,500/- ಹಾಗೂ ರೂ.70,000/- ಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಕ್ಕೆ ಸೇರಿದ ರೈತರಿಗೆ ಶೇ.90 ರಂತೆ ರೂ. 1,12,500/- ಮತ್ತು ರೂ.1,26,000/- ಗಳ ಸಹಾಯಧನ ವಿತರಿಸುವುದು.

**(ರೂ. ಗಳಲ್ಲಿ)**

| ಸಾಮರ್ಥ (ಲೀ.) | ಸಹಾಯಧನ | | |
|---|---|---|---|
| | ದರ | ಸಾಮಾನ್ಯ ವರ್ಗಕ್ಕೆ ಶೇ. **50** ರಂತೆ ಸಹಾಯಧನ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಕ್ಕೆ ಶೇ. **90** ರಂತೆ ಸಹಾಯಧನ |
| 4000 | 1,25,000/- | 62,500/- | 1,12,500/- |
| 5000 | 1,40,000/- | 70,000/- | 1,26,000/- |

**V** ಭೌತಿಕ ಮತ್ತು ಆರ್ಥಿಕ ಗುರಿ:-

2019-20 ನೇ ಸಾಲಿಗೆ 059 ಸಾಮಾನ್ಯ ವರ್ಗಕ್ಕೆ ರೂ.700.00 ಲಕ್ಷಗಳು, ಭೌತಿಕ – 1000 ಸಂಖ್ಯೆ, 422 ಪರಿಶಿಷ್ಟ ಜಾತಿಗೆ ರೂ.200.00 ಲಕ್ಷಗಳು, ಭೌತಿಕ – 159 ಸಂಖ್ಯೆ ಹಾಗೂ 423 ಪರಿಶಿಷ್ಟ ಪಂಗಡಕ್ಕೆ ರೂ.100.00 ಲಕ್ಷಗಳು, ಭೌತಿಕ–79 ಸಂಖ್ಯೆ ಒಟ್ಟಾರೆ ರೂ.1000.00 ಲಕ್ಷಗಳ ವೆಚ್ಚದಲ್ಲಿ 1238 ಫಲಾನುಭವಿಗಳಿಗೆ ಸಹಾಯಧನವನ್ನು ಒದಗಿಸಲಾಗುವುದು.

**VI** ಅನುದಾನ:-

2019-20 ನೇ ಸಾಲಿಗೆ ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ ನೀಡಲು ರೂ.1000.00 ಲಕ್ಷಗಳನ್ನು ಒದಗಿಸಿದೆ.

## 14. ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕ ಕ್ಕೆ ಸಹಾಯಧನ:

ಅಣಬೆ ಸಸ್ಯ ವರ್ಗಕ್ಕೆ ಸೇರಿದ ಒಂದು ಸಸ್ಯ. ತಿನ್ನುವ ಅಣಬೆಯನ್ನು ಆಹಾರ ಪದಾರ್ಥಗಳ ಪಟ್ಟಿಯಲ್ಲಿ ತರಕಾರಿ ಪದಾರ್ಥವನ್ನಾಗಿ ಸೇರಿಸಿದೆ. ಅಣಬೆಯು ಮೃದುತ್ವ ಮತ್ತು ವಿವಿಧ ಮಸಾಲೆಯ ಪರಿಮಳವನ್ನು ಅಳವಡಿಸಿಕೊಳ್ಳುವ ಗುಣವನ್ನು ಹೊಂದಿದೆ. ಅಷ್ಟೇ ಅಲ್ಲದೇ ಅಣಬೆಯಲ್ಲಿ ಪ್ರೋಟೀನ್ ಮತ್ತು ಜೀವಸತ್ವಗಳು ಹೇರಳವಾಗಿದ್ದು, ಶರ್ಕರಪಿಷ್ಟ ಕಡಿಮೆ ಇರುವುದರಿಂದ ಸಕ್ಕರೆ ರೋಗಿಗಳಿಗೆ ಇದು ಒಳ್ಳೆಯ ಆಹಾರವಾಗಬಲ್ಲದು. ಅಣಬೆಯನ್ನು ಆಹಾರ ಪದಾರ್ಥಗಳಿಗೆ ಪರ್ಯಾಯವಾಗಿ ಇತ್ತೀಚಿನ ದಿನಗಳಲ್ಲಿ ಬಳಸುತ್ತಿದ್ದು ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ. ಇದನ್ನು ವ್ಯವಸಾಯ ಮೂಲದಿಂದ ಬರುವ ತ್ಯಾಜ್ಯವಸ್ತುಗಳ ಸಹಾಯದಿಂದ ಮನೆ ಅಂಗಳದಲ್ಲಿಯೇ ಬೆಳೆಯಬಹುದಾಗಿದ್ದು, ಹೆಚ್ಚಿನ ಭೂಮಿಯ ಅಗತ್ಯತೆ ಇರುವುದಿಲ್ಲ. ಆದ್ದರಿಂದ, ಅತೀ ಕಡಿಮೆ ಜಮೀನು ಇರುವ ಅತೀ ಸಣ್ಣ ರೈತರು ಸಹಾ ಅಣಬೆ ಕೃಷಿಯನ್ನು ಕೈಗೊಳ್ಳಬಹುದು. ಅಣಬೆ ಕೃಷಿಯಿಂದ ಕಡಿಮೆ ವೇಳೆಯಲ್ಲಿ ಮತ್ತು ಅತ್ಯಲ್ಪ ಪ್ರದೇಶದಲ್ಲಿ ಅಧಿಕ ಇಳುವರಿ ಪಡೆಯಬಹುದು. ಹೀಗಾಗಿ ವಿದ್ಯಾವಂತ, ನಿರುದ್ಯೋಗಿ ಯುವಕರಿಗೆ ಮತ್ತು ಮಹಿಳೆಯರಿಗೆ ಅಣಬೆ ಕೃಷಿ ಒಂದು ವರದಾನ. ಅಣಬೆ ಇತರೆ ಸಸ್ಯಗಳಿಗಿಂತ ಭಿನ್ನವಾಗಿದ್ದು, ಪತ್ರಹರಿತ್ತು (Chlorophyll) ನ್ನು ಹೊಂದಿಲ್ಲದ ಕಾರಣ ಸ್ವಯಂ ಆಹಾರವನ್ನು ತಯಾರಿಸಿಕೊಳ್ಳಲು ಸಾಧ್ಯವಿಲ್ಲ. ಆದಕಾರಣ ಅಣಬೆ ಬೇರೊಂದು ವಸ್ತುವಿನ ಆಶ್ರಯವನ್ನು ಪಡೆದು ಬೆಳೆಯುತ್ತದೆ.

ಪ್ರತಿ ವರ್ಷ ಸುಮಾರು 14.4 ಕೋಟಿ ಟನ್‌ಗಳಷ್ಟು ಕೃಷಿ ಸಂಬಂಧಿತ ತ್ಯಾಜ್ಯ ವಸ್ತುಗಳು ಉತ್ಪಾದನೆಯಾಗುತ್ತಿದ್ದು, ಇದರಲ್ಲಿ ಬಹುತೇಕ ಪ್ರಮಾಣವನ್ನು ಸುಟ್ಟು ಹಾಕುವುದರ ಮೂಲಕ ಅಥವಾ ಬಳಸದೆ ಹಾಗೆಯೇ ಬಿಡುವುದರ ಮೂಲಕ, ಶ್ರೇಷ್ಠ ಗುಣಮಟ್ಟದ ಮತ್ತು ಹೇರಳ ಪ್ರಮಾಣದ ಸಾವಯವ ಆಹಾರ ಉತ್ಪಾದನಾ ಸಾಮರ್ಥ ಹೊಂದಿರುವ ಅಮೂಲ್ಯ ತ್ಯಾಜ್ಯ ಪೋಲಾಗುತ್ತಿದೆ. ಈ ತ್ಯಾಜ್ಯದ ಶೇ.10 ರಷ್ಟನ್ನಾದರೂ ಅಣಬೆ ಉತ್ಪಾದನೆಗೆ ಬಳಸಿದಲ್ಲಿ, ಸುಮಾರು 70-80 ಲಕ್ಷ ಟನ್ ತಾಜ ಅಣಬೆಯನ್ನು ಪ್ರತಿ ವರ್ಷ ಉತ್ಪಾದಿಸಬಹುದಾಗಿದ್ದು, ಇದರಿಂದ 1.5 ಲಕ್ಷ ಟನ್ ಪ್ರೋಟೀನ್ ವಾರ್ಷಿಕ ದೊರೆಯುತ್ತದೆ. ಅಲ್ಲದೆ ಇದು ಸುಮಾರು 30 ಲಕ್ಷ ಜನರಿಗೆ ವರ್ಷವಿಡೀ ಉದ್ಯೋಗ ಅವಕಾಶ ಕಲ್ಪಿಸಬಲ್ಲದು.

ಯೋಜನೆಯ ಉದ್ದೇಶಗಳು:

1. ಗ್ರಾಮೀಣ ನಗರ ಮತ್ತು ಪಟ್ಟಣ ಪ್ರದೇಶದಲ್ಲಿನ ಜನರಲ್ಲಿ ಅದರಲ್ಲೂ ಮಕ್ಕಳಲ್ಲಿ ಅಣಬೆ ಬೆಳೆಯ ಪೋಷಕಾಂಶಗಳ ಮಹತ್ವದ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸುವ ಮೂಲಕ ಪ್ರತಿ ಕುಟುಂಬದಲ್ಲಿ ಅಣಬೆಯ ಮಹತ್ವ ಮತ್ತು ಅಣಬೆ ಬಳಕೆಗೆ ಬೇಡಿಕೆಯನ್ನು ಸೃಜಿಸುವುದು.
2. ಅಣಬೆ ಉತ್ಪಾದನೆ ಮತ್ತು ಬಳಕೆ ಕ್ಷೇತ್ರದ ಸಂಪೂರ್ಣ ಉಪಯೋಗ ಪಡೆಯಲು ಪ್ರಮುಖವಾಗಿ ಮೂರು ಅಂಶಗಳ ಮೇಲೆ ಗಮನಹರಿಸುವುದು ಅಗತ್ಯವಿರುತ್ತದೆ. ಅವುಗಳೆಂದರೆ,
   i. ಅಣಬೆಯ ಪೋಷಕಾಂಶದ ಮಹತ್ವ ಕುರಿತು ಅರಿವು ಮೂಡಿಸುವುದು
   ii. ಸಮಾಜದ ಕೆಲವು ಭಾಗಗಳಲ್ಲಿ ಅಣಬೆ ಬಳಕೆಯ ಮೂಢನಂಬಿಕೆಗಳನ್ನು ಹೋಗಲಾಡಿಸುವುದು.
   iii. ಗುಣಮಟ್ಟದ ಬೀಜ ನಿರಂತರವಾಗಿ ಉತ್ಪಾದಕರಿಗೆ ಲಭ್ಯವಾಗುವಂತೆ ಮಾಡುವುದು.
3. ಗ್ರಾಮೀಣ ನಗರ ಮತ್ತು ಪಟ್ಟಣ ಪ್ರದೇಶದಲ್ಲಿನ ಜನರಲ್ಲಿ ವಾರ್ಷಿಕ ಸರಾಸರಿ ಅಣಬೆ ಬಳಕೆಯನ್ನು ವ್ಯವಸ್ಥಿತ ಮಾಹಿತಿ ಶಿಬಿರ ಮತ್ತು ಪ್ರಾತ್ಯಕ್ಷಿಕೆಗಳ ಮೂಲಕ ಹೆಚ್ಚಿಸಿ ಪೋಷಕಾಂಶಗಳ ಕೊರತೆಯನ್ನು ಕಡಿಮೆಗೊಳಿಸಿ ಜನರ ನೈಜ ಆರೋಗ್ಯ ಮಟ್ಟವನ್ನು ಸುಧಾರಿಸುವುದು.
4. ಗ್ರಾಮೀಣ ಮಹಿಳೆಯರು ಹಾಗೂ ಸ್ವಸಹಾಯ ಗುಂಪುಗಳ ಸದಸ್ಯರು ಸ್ವತಃ ಉತ್ಪಾದಿಸಿದ ಅಣಬೆಯನ್ನು ವಾರದಲ್ಲಿ ಕನಿಷ್ಠ ಒಂದರಿಂದ ಎರಡು ದಿವಸ ಆಹಾರದಲ್ಲಿ ಬಳಸಲು ಪ್ರೇರೇಪಿಸುವುದು.
5. ಕೃಷಿ ಕ್ಷೇತ್ರದಲ್ಲಿ ಉತ್ಪಾದನೆಯಾಗುವ ಹೇರಳ ಪ್ರಮಾಣದ ಕೃಷಿ ತ್ಯಾಜ್ಯವನ್ನು ಸುಡುವ ಪರಿಪಾಠವಿರುವುದರಿಂದ, ಅಮೂಲ್ಯ ಸಾವಯವ ಗೊಬ್ಬರ/ಪೋಷಕಾಂಶ ಪೋಲಾಗುತ್ತಿರುವುದಲ್ಲದೇ, ಪರಿಸರ ಮಾಲಿನ್ಯಕ್ಕೂ ಕಾರಣವಾಗುತ್ತಿದೆ. ಈ ಕೃಷಿ ತ್ಯಾಜ್ಯವನ್ನು ಅಣಬೆ ಉತ್ಪಾದನೆಗೆ ಬಳಸಿಕೊಂಡು, ಸಮಾಜದ ಆರ್ಥಿಕವಾಗಿ ಕೆಳಸ್ಥರದಲ್ಲಿರುವ ಜನರ ಪೋಷಕಾಂಶ ಅದರಲ್ಲೂ ವಿಶೇಷವಾಗಿ ಪ್ರೋಟೀನ್ ಕೊರತೆ ನೀಗಿಸುವಲ್ಲಿ ಕ್ರಮವಹಿಸುವುದು
6. ಜನಸಾಮಾನ್ಯರು ಅಣಬೆ ಉತ್ಪಾದಿಸಲು ಅನುವಾಗುವಂತೆ, ಅಗತ್ಯ ವಿದಿವಿದಾನಗಳನ್ನು ಮತ್ತು ಅಣಬೆ ಬಳಕೆಯ ರೀತಿಯನ್ನು ತರಬೇತಿ/ಪ್ರಾತ್ಯಕ್ಷಿಕೆಗಳ ಮೂಲಕ ಮನವರಿಕೆ ಮಾಡಿಕೊಡುವುದು.
7. ಅಣಬೆ ಬೀಜ ಮತ್ತು ಬೆಳೆ ಉತ್ಪಾದನೆ, ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ವಿವಿಧ ಉತ್ಪನ್ನಗಳ ತಯಾರಿಕೆ, ಮತ್ತು ಮಾರುಕಟ್ಟೆ ಇವುಗಳ ಸಂಬಂಧ ಕೃಷಿಕರು ಯೋಜನೆ ರೂಪಿಸಿ, ಅನುಷ್ಠಾನಿಸಲು ಅಗತ್ಯ ಮಾರ್ಗದರ್ಶನ ಮತ್ತು ವಿವಿಧ ಯೋಜನೆಗಳಡಿ ಸವಲತ್ತು ಪಡೆಯುವ ನಿಟ್ಟಿನಲ್ಲಿ ಕಾರ್ಯತತ್ಪರರಾಗುವುದು.

<u>ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕಕ್ಕೆ ಸಹಾಯಧನ</u> **<u>(2019-20):</u>** ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ದೊಡ್ಡ ಮತ್ತು ಮಧ್ಯಮದ ಸಾಮಾರ್ಥದ ಘಟಕಗಳಿಗೆ ಅವಕಾಶ ವಿರುವ ಕಾರಣ ಹಾಗೂ ಇಲಾಖೆಯ ಅಧಿಕಾರಿಗಳು ಮತ್ತು ರೈತರು ಕಡಿಮೆ ವೆಚ್ಚದ ಸಣ್ಣ ಘಟಕಗಳಿಗೆ ಅವಕಾಶ ಕಲ್ಪಿಸಿಕೊಡಲು ಹಲವು ವೇದಿಕೆಗಳಲ್ಲಿ ಪ್ರಸ್ತಾಪಿಸಿದ್ದು, ಅದರಂತೆ ವಿವಿಧ ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಸಾಮರ್ಥವುಳ್ಳ ಘಟಕಗಳಿಗೆ ಶೇ.50 ರಂತೆ ಸಹಾಯಧನದ ಮೊತ್ತವನ್ನು ನಿಗದಿಪಡಿಸಲಾಗಿದೆ**.**

2019-20 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮದಡಿ <u>ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕಕ್ಕೆ</u> ಅನುಷ್ಠಾನಗೊಳಿಸಬೇಕಾಗಿರುವ ಆರ್ಥಿಕ/ಭೌತಿಕ ಘಟಕ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಘಟಕ | ಘಟಕ ವೆಚ್ಚ | ಸಹಾಯಧನದ ಮೊತ್ತ (ಪ್ರತಿ ಘಟಕಕ್ಕೆ ಶೇ.**50** ) | **2018-19** ನೇ ಸಾಲಿಗೆ ವಾರ್ಷಿಕ ಗುರಿ | |
|---|---|---|---|---|---|
| | | | | ಭೌತಿಕ | ಆರ್ಥಿಕ |
| 1. | ಸಣ್ಣ ಪ್ರಮಾಣದ ಅಣಬೆ ಉತ್ಪಾದನಾ ಘಟಕದ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಸಹಾಯಧನ (ಕಟ್ಟಡ ಹೊರತು ಪಡಿಸಿ) | 3.00 | 1.50 | 40 | 60.00 |
| 2. | ಹೊಸ ಕಟ್ಟಡದಲ್ಲಿ ಸಣ್ಣ ಪ್ರಮಾಣದ ಅಣಬೆ ಉತ್ಪಾದನಾ ಘಟಕಕ್ಕೆ ಸಹಾಯಧನ | 10.00 | 5.00 | 8 | 40.00 |
| ಒಟ್ಟು | | | | | **100.00** |

ಸಣ್ಣ ಪ್ರಮಾಣದ ಅಣಬೆ ಉತ್ಪಾದನೆಗಾಗಿ ಮೂಲಭೂತ ಸೌಕರ್ಯ ಅಭಿವೃದ್ಧಿ (ಕಟ್ಟಡ ಹೊರತುಪಡಿಸಿ) ಮತ್ತು ಹೊಸ ಕಟ್ಟಡ ನಿರ್ಮಿಸಿ ಸಣ್ಣ ಪ್ರಮಾಣದ ಅಣಬೆ ಉತ್ಪಾದನಾ ಘಟಕ ಅಭಿವೃದ್ಧಿಗೆ ಜಿಲ್ಲಾವಾರು/ ವಿಭಾಗವಾರು ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ಅನುಬಂಧ-I ಮತ್ತು II ರಲ್ಲಿ ನೀಡಿದೆ. ಪ್ರತಿ ಸಣ್ಣ ಜಿಲ್ಲೆಗೆ ತಲಾ 1 ರಂತೆ ಮತ್ತು ಪ್ರತಿ ದೊಡ್ಡ ಜಿಲ್ಲೆಗೆ ತಲಾ 2 ಸಣ್ಣ ಪ್ರಮಾಣದ ಅಣಬೆ ಉತ್ಪಾದನೆಗಾಗಿ ಮೂಲಭೂತ ಸೌಕರ್ಯ ಅಭಿವೃದ್ಧಿ (ಕಟ್ಟಡ ಹೊರತುಪಡಿಸಿ) ಘಟಕದಂತೆ ಗುರಿ ನಿಗದಿಪಡಿಸಲಾಗಿದೆ. ಹೊಸ ಕಟ್ಟಡ ನಿರ್ಮಿಸಿ, ಸಣ್ಣ ಪ್ರಮಾಣದ ಅಣಬೆ ಉತ್ಪಾದನಾ ಘಟಕ ಗುರಿಗಳನ್ನು ಪ್ರತಿ ವಿಭಾಗಕ್ಕೆ ತಲಾ 2 ರಂತೆ ನಿಗದಿಪಡಿಸಲಾಗಿದೆ. ಸಂಬಂದಪಟ್ಟ ವಿಭಾಗಗಳ ಜಂಟಿ ನಿರ್ದೇಶಕರುಗಳು ತಮ್ಮ ವಿಭಾಗದ ಯಾವ ಜಿಲ್ಲೆಯಲ್ಲಿ ಸದರಿ ಘಟಕವನ್ನು ನಿರ್ಮಿಸಬೇಕು ಎಂದು ನಿರ್ಧರಿಸಿ, ನಿರ್ದೇಶನಾಲಯಕ್ಕೆ ಶಿಫಾರಸ್ಸು ಮಾಡಿದ ನಂತರ, ಸದರಿ ಘಟಕಕ್ಕೆ ಸಂಬಂಧಪಟ್ಟ ಅನುದಾನವನ್ನು ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರುಗಳಿಗೆ ಬಿಡುಗಡೆ ಮಾಡಲಾಗುವುದು.

ಅನುಬಂಧ**-I**

<u>ಸಣ್ಣ ಪ್ರಮಾಣದ ಅಣಬೆ ಉತ್ಪಾದನಾ ಘಟಕದ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಸಹಾಯಧನ</u>
**<u>(ಕಟ್ಟಡ ಹೊರತು ಪಡಿಸಿ)</u>**

ಜಿಲ್ಲಾವಾರು ಭೌತಿಕ ಮತ್ತು ಆರ್ಥಿಕ ಗುರಿ

| ಕ್ರ.ಸಂ. | ಜಿಲ್ಲೆಗಳು | ನಿಗದಿಪಡಿಸಲಾದ ಗುರಿ | |
|---|---|---|---|
| | | ಭೌತಿಕ **(**ಸಂಖ್ಯೆ**)** | ಆರ್ಥಿಕ **(**ರೂ**.**ಲಕ್ಷಗಳಲ್ಲಿ**)** |
| **I** | **II** | **III** | **IV** |
| 1 | ಬಾಗಲಕೋಟೆ | 1 | 1.50 |
| 2 | ಬೆಳಗಾವಿ | 2 | 3.00 |
| 3 | ಬಳ್ಳಾರಿ | 2 | 3.00 |
| 4 | ಬೆಂಗಳೂರು ಗ್ರಾ. | 1 | 1.50 |
| 5 | ಬೆಂಗಳೂರು ನಗರ | 3 | 4.50 |
| 6 | ಬೀದರ್ | 1 | 1.50 |

| | | | |
|---|---|---|---|
| 7 | ವಿಜಯಪುರ | 1 | 1.50 |
| 8 | ಚಾಮರಾಜನಗರ | 1 | 1.50 |
| 9 | ಚಿಕ್ಕಬಳ್ಳಾಪುರ | 1 | 1.50 |
| 10 | ಚಿಕ್ಕಮಗಳೂರು | 2 | 3.00 |
| 11 | ಚಿತ್ರದುರ್ಗ | 1 | 1.50 |
| 12 | ದಕ್ಷಿಣ ಕನ್ನಡ | 1 | 1.50 |
| 13 | ದಾವಣಗೆರೆ | 1 | 1.50 |
| 14 | ದಾರವಾಡ | 2 | 3.00 |
| 15 | ಗದಗ | 1 | 1.50 |
| 16 | ಕಲಬುರ್ಗಿ | 2 | 3.00 |
| 17 | ಹಾಸನ | 1 | 1.50 |
| 18 | ಹಾವೇರಿ | 1 | 1.50 |
| 19 | ಕೊಡಗು | 1 | 1.50 |
| 20 | ಕೋಲಾರ | 1 | 1.50 |
| 21 | ಕೊಪ್ಪಳ | 1 | 1.50 |
| 22 | ಮಂಡ್ಯ | 1 | 1.50 |
| 23 | ಮೈಸೂರು | 2 | 3.00 |
| 24 | ರಾಯಚೂರು | 1 | 1.50 |
| 25 | ರಾಮನಗರ | 1 | 1.50 |
| 26 | ಶಿವಮೊಗ್ಗ | 1 | 1.50 |
| 27 | ತುಮಕೂರು | 2 | 3.00 |
| 28 | ಉಡುಪಿ | 1 | 1.50 |
| 29 | ಉತ್ತರ ಕನ್ನಡ | 2 | 3.00 |
| 30 | ಯಾದಗಿರಿ | 1 | 1.50 |
| | ಒಟ್ಟು | **40** | **60.00** |

ಅನುಬಂಧ-**II**

<u>ಹೊಸ ಕಟ್ಟಡದಲ್ಲಿ ಸಣ್ಣ ಪ್ರಮಾಣದ ಅಣಬೆ ಉತ್ಪಾದನಾ ಘಟಕಕ್ಕೆ ಸಹಾಯಧನ</u>

ವಿಭಾಗವಾರು ಭೌತಿಕ ಮತ್ತು ಆರ್ಥಿಕ ಗುರಿ

| ಕ್ರ.ಸಂ. | ವಿಭಾಗ | ನಿಗದಿಪಡಿಸಲಾದ ಗುರಿ | |
|---|---|---|---|
| | | ಭೌತಿಕ (ಸಂಖ್ಯೆ) | ಆರ್ಥಿಕ (ರೂ.ಲಕ್ಷಗಳಲ್ಲಿ) |
| 1 | ಬೆಂಗಳೂರು ವಿಭಾಗ | 2 | 10.00 |
| 2 | ಕಲಬುರ್ಗಿ ವಿಭಾಗ | 2 | 10.00 |
| 3 | ಮೈಸೂರು ವಿಭಾಗ | 2 | 10.00 |
| 4 | ಬೆಳಗಾವಿ ವಿಭಾಗ | 2 | 10.00 |
| | ಒಟ್ಟು | **8** | **40.00** |

<u>ಷರಾ</u>**:**

- ಘಟಕ ಕಾರ್ಯಕ್ರಮಗಳಿಗೆ ನಿಗದಿಪಡಿಸಲಾದ ಅನುದಾನ ಮತ್ತು ಭೌತಿಕ ಗುರಿಯನ್ನು ಜಿಲ್ಲಾವಾರು ಬೇಡಿಕೆ ಮತ್ತು ಅಗತ್ಯತೆ ಅನುಸಾರ ಬದಲಾವಣೆ ಮಾಡಿಕೊಳ್ಳಲಾಗುವುದು.
- ಸ್ಥಳೀಯ ಅವಶ್ಯಕತೆಗನುಗುಣವಾಗಿ ಘಟಕವಾರು ಆರ್ಥಿಕ/ಭೌತಿಕ ಗುರಿಯ ಪರಿಷ್ಕರಣೆಗೆ ಅವಕಾಶ ನೀಡಲು ಕೋರಿದೆ.

ಮೇಲ್ಕಂಡಂತೆ " ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕಕ್ಕೆ " ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ 2019-20 ನೇ ಸಾಲಿನಲ್ಲಿ ಒಟ್ಟು ರೂ.**100.00** ಲಕ್ಷಗಳನ್ನು ಒದಗಿಸಿ ಸದರಿ ಯೋಜನೆಯನ್ನು ಮುಂದುವರೆಸಲು ಮಂಜೂರಾತಿ ನೀಡಲು ಕೋರಿದೆ.

## 15. ಅಪ್ರಧಾನ ಹಾಗೂ ಅಪರೂಪದ (ಎಕ್ಸಾಟಿಕ್) ಹಣ್ಣುಗಳ ಉತ್ತೇಜನ:

ರಾಜ್ಯದಲ್ಲಿ ನೈಸರ್ಗಿಕವಾಗಿ ವಿವಿಧ ಜಾತಿಯ ಹಣ್ಣಿನ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಸಾಮಾನ್ಯವಾಗಿ ಅಪರೂಪದ ಹಣ್ಣಿನ ಬೆಳೆಗಳು ಹೆಚ್ಚಿನ ಜನ ಪ್ರಿಯತೆ ಹೊಂದಿಲ್ಲದಿದ್ದರೂ, ಈ ಹಣ್ಣುಗಳು ಹೆಚ್ಚಿನ ಪೋಷಕಾಂಶ ಹಾಗೂ ಔಷಧೀಯ ಗುಣ ಹೊಂದಿರುವುದರಿಂದ, ಮುಂಬರುವ ದಿನಗಳಲ್ಲಿ ಹೆಚ್ಚಿನ ಪ್ರಾಮುಖ್ಯ ಹೊಂದುವ ಸಾಧ್ಯತೆ ಇರುತ್ತದೆ. ಸುಸ್ಥಿರ ಕೃಷಿಯಲ್ಲಿ ಈ ಹಣ್ಣುಗಳು ಹೆಚ್ಚಿನ ಪ್ರಾಧಾನ್ಯತೆ ಹೊಂದಿರುತ್ತದೆ. ಅಪ್ರಧಾನ ಹಣ್ಣುಗಳು ವಿಶಿಷ್ಟ ಸುವಾಸನೆ ಹೊಂದಿದ್ದು, ಪೌಷ್ಟಿಕಾಂಶಗಳಾದ ಪ್ರೋಟೀನ್, ವಿಟಮಿನ್, ಖನಿಜ, ನಾರು, ಕೆರೊಟಿನಾಯ್ಡ್ ಹಾಗೂ ಆಂಟಿ ಆಕ್ಸಿಡೆಂಟ್ (ಉತ್ಕರ್ಷಣ ನಿರೋಧಕ ಶಕ್ತಿಯನ್ನು) ಹೊಂದಿರುತ್ತವೆ. 2018-19 ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಪ್ರಸಕ್ತ ವರ್ಷದಲ್ಲಿಅಪರೂಪದ ಹಣ್ಣುಗಳಾದ ಪ್ಯಾಷನ್ ಹಣ್ಣು, ರಾಂಬೂತಾನ್, ದುರಿಯನ್, ಡ್ರಾಗನ್ ಹಣ್ಣು, ಲಿಚ್ಚಿ, ಮ್ಯಾಂಗೋಸ್ಟೀನ್, ಆಪಲ್ಬೆರ್, ಬೆಣ್ಣೆಹಣ್ಣು, ನೇರಳೆ, ಸ್ಟ್ರಾಬೆರಿ ಇತ್ಯಾದಿ ಹಾಗೂ ಹೊಸ ಮತ್ತು ಬೀಜ ರಹಿತ ಸೀತಾಫಲ ಮತ್ತು ಸೀಬೆಯ ತಳಿಗಳನ್ನು ಬೆಳೆಯಲು ಕೇಂದ್ರ ಪುರಸ್ಕೃತ ಹಾಗೂ ರಾಜ್ಯವಲಯ ಯೋಜನೆಗಳಡಿ ಪ್ರಾಧಾನ್ಯತೆನೀಡಿ ಉತ್ತೇಜನ ನೀಡಲಾಗುವುದು" ಎಂದು ಘೋಷಣೆಯಾಗಿರುತ್ತದೆ. ಈಗಾಗಲೇ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಅಪ್ರಧಾನ ಹಾಗೂ ಅಪರೂಪದ ಹಣ್ಣುಗಳ ಉತ್ತೇಜನ ಕಾರ್ಯಕ್ರಮಕ್ಕೆ ಸಹಾಯಧನ ನೀಡಲಾಗುತ್ತಿದ್ದು ಪ್ರಸಕ್ತ ಸಾಲಿನಲ್ಲಿಯೂ ಅಪ್ರಧಾನ ಹಾಗೂ ಅಪರೂಪದ ಹಣ್ಣುಗಳ ಉತ್ತೇಜನಕ್ಕೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಅನುಷ್ಠಾನಗೊಳಿಸಲು ಅನುದಾನ ನಿಗಧಿಪಡಿಸಿಕೊಳ್ಳಲಾಗಿದೆ.

2. ಯೋಜನೆಯ ಉದ್ದೇಶಗಳು:

ಕರ್ನಾಟಕ ರಾಜ್ಯದಲ್ಲಿ ಅಪ್ರಧಾನ ಹಾಗೂ ಅಪರೂಪದ ಹಣ್ಣುಗಳ ಉತ್ತೇಜನ ಕಾರ್ಯಕ್ರಮದ ಅನುಷ್ಠಾನದ ಮೂಲಕ ಈ ಕೆಳಕಂಡ ಉದ್ದೇಶಗಳನ್ನು ಪೂರೈಸಲು ರೂಪಿಸಲಾಗಿದೆ.

1. ಅಪ್ರಧಾನ ಹಾಗೂ ಅಪರೂಪದ (ಎಕ್ಸಾಟಿಕ್) ಹಣ್ಣುಗಳ ಪ್ರದೇಶ ವಿಸ್ತರಣೆ ಉತ್ತೇಜಿಸುವುದು.
2. ಅಪ್ರಧಾನ ಹಾಗೂ ಅಪರೂಪದ (ಎಕ್ಸಾಟಿಕ್) ಹಣ್ಣುಗಳ ಪ್ರದೇಶ ವಿಸ್ತರಣೆ ಕೈಗೊಳ್ಳುವ ರೈತರಿಗೆ ಸಹಾಯಧನ ಒದಗಿಸುವುದು.
3. ಈ ಹಣ್ಣಿನ ಬೆಳೆಗಳನ್ನು ಬೆಳೆಸುವುದರಿಂದ ರೈತರ ತಾಂತ್ರಿಕ, ಆರ್ಥಿಕ ಹಾಗೂ ಸಾಮಾಜಿಕ ಜೀವನಮಟ್ಟ ಸುಧಾರಣೆ ಸಾಧಿಸುವುದು.

**3.** ಆರ್ಥಿಕ ಅನುದಾನದ ಅವಶ್ಯಕತೆ **(Financial Implication)**

2018-19 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ "ಅಪ್ರಧಾನ ಹಾಗೂ ಅಪರೂಪದ ಹಣ್ಣುಗಳ ಉತ್ತೇಜನ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರೂ50.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

**4.** ಭೌತಿಕ ಮತ್ತು ಆರ್ಥಿಕ ಗುರಿಗಳು

2019-20 ನೇ ಸಾಲಿನಲ್ಲಿ ರೂ.50.00 ಲಕ್ಷಗಳ ಅನುದಾನದಲ್ಲಿ ಅಂದಾಜು 100 ಹೆಕ್ಟೇರ್ ಅಪರೂಪದ ಹಾಗೂ ಅಪ್ರಧಾನ ಹಣ್ಣುಗಳ ಪ್ರದೇಶ ವಿಸ್ತರಣೆ ಕೈಗೊಳ್ಳಲಾಗುವುದು.

**5.** ಯೋಜನಾ ಅನುಷ್ಠಾನ ವ್ಯಾಪ್ತಿ

ಈ ಯೋಜನೆಯ ಅನುಷ್ಠಾನದ ವ್ಯಾಪ್ತಿಯು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ಅನ್ವಯಿಸುತ್ತದೆ.

**6.** ಯೋಜನೆ ಅನುಷ್ಠಾನ

ಆಯಾ ಜಿಲ್ಲೆಯ ಅನುಮೋದಿತ ಕ್ರಿಯಾಯೋಜನೆ, ಮೀಸಲಾತಿ ಹಾಗೂ ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾ ಪಟ್ಟಿ (MPIC) ಯಂತೆ ನಿಗಧಿಯಾಗಿರುವ ಅನುದಾನ ಮೀರದಂತೆ ಈ ಯೋಜನೆ ಅನುಷ್ಠಾನವನ್ನು ಮಾಡಲಾಗುವುದು ಹಾಗೂ ಪ್ರಸ್ತುತ ಆ ಸಾಲಿನ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸುವುದು.

**7.** ಯೋಜನೆಯ ಫಲಶೃತಿ:

- ಅಪ್ರಧಾನ ಹಾಗೂ ಅಪರೂಪದ ಹಣ್ಣುಗಳನ್ನು ಕರ್ನಾಟಕ ರಾಜ್ಯದಲ್ಲಿ ಪರಿಚಯಿಸಿ ಜನ ಪ್ರಿಯಗೊಳಿಸಲಾಗುವುದು.
- ಅಪ್ರಧಾನ ಹಾಗೂ ಅಪರೂಪದ ಹಣ್ಣುಗಳಾದ ಪ್ಯಾಷನ್ ಹಣ್ಣು, ರಾಂಬೂತಾನ್, ದುರಿಯನ್, ಡ್ರಾಗನ್ ಹಣ್ಣು, ಲಿಚ್ಚಿ, ಮ್ಯಾಂಗೋಸ್ಟೀನ್, ಆಪಲ್ಬೆರ್, ಬೆಣ್ಣೆ ಹಣ್ಣು, ನೇರಳೆ, ಸೀತಾ ಫಲ ತಳಿಗಳನ್ನು ಅಂದಾಜು 100 ಹೆಕ್ಟೇರ್ ಪ್ರದೇಶ ವಿಸ್ತರಣೆ ಮಾಡಲಾಗುವುದು.
- ಈ ಹಣ್ಣಿನ ಬೆಳೆಗಳನ್ನು ಬೆಳೆಸುವುದರಿಂದ ರೈತರ ತಾಂತ್ರಿಕ, ಆರ್ಥಿಕ ಹಾಗೂ ಸಾಮಾಜಿಕ ಜೀವನ ಮಟ್ಟ ಸುಧಾರಣೆ ಸಾಧಿಸುವುದು.

**2019-20** ನೇ ಸಾಲಿನಲ್ಲಿ "ಸಮಗ್ರ ತೋಟಗಾರಿಕೆ ಅಭಿವೃದ್ಧಿ" ಯೋಜನೆಗೆ ಲೆಕ್ಕಶೀರ್ಷಿಕೆ**: 2401-00-111-0-08** ಅಡಿ ಒಟ್ಟು ರೂ**.13000.00** ಲಕ್ಷಗಳ ಅನುದಾನವನ್ನು ಒದಗಿಸಿದೆ**.**

# 9. ಕೃಷಿ ಕ್ಷೇತ್ರ ಮತ್ತು ಸಸ್ಯಾವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ
# Development and Maintenance of Farms & Nurseries
## ಲೆಕ್ಕಶೀರ್ಷಿಕೆ:2401-00-119-4-05
## ನಿಗದಿಪಡಿಸಿದ ಅನುದಾನ ರೂ.1300.00 ಲಕ್ಷಗಳು

| | | |
|---|---|---|
| 139 | ಪ್ರಧಾನ ಕಾಮಗಾರಿಗಳು | **1300.00** |

**ಪೀಠಿಕೆ:**

ತೋಟಗಾರಿಕೆ ಇಲಾಖೆಯು ರಾಜ್ಯದಲ್ಲಿ ಒಟ್ಟು 405 ಕ್ಷೇತ್ರ ಮತ್ತು ಸಸ್ಯಾಗಾರಗಳನ್ನು ಹೊಂದಿದ್ದು ಇವುಗಳ ಒಟ್ಟಾರೆ ಪ್ರದೇಶ 15,757.35 ಎಕರೆಗಳಾಗಿರುತ್ತದೆ. ಎಲ್ಲಾ ಕ್ಷೇತ್ರ ಮತ್ತು ನರ್ಸರಿಗಳ ಸೂಕ್ತ ನಿರ್ವಹಣೆಗಾಗಿ ಇಲಾಖಾ ಮಟ್ಟದಲ್ಲಿ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯನ್ನು ಸ್ಥಾಪಿಸಲಾಗಿದೆ. ತೋಟಗಾರಿಕೆ ಇಲಾಖೆಯಡಿ ಬರುವ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ಇಲ್ಲಿಯವರೆಗೆ ವಾರ್ಷಿಕ ಸುಮಾರು 40 ಲಕ್ಷಗಳಿಗೂ ಅಧಿಕವಾಗಿ ಕಸಿ/ಸಸಿಗಳನ್ನು ಉತ್ಪಾದಿಸಿ ಇಲಾಖಾ ನಿಗದಿತ ದರಗಳಲ್ಲಿ ರೈತರಿಗೆ ನೇರವಾಗಿ ಮಾರಾಟ ಮಾಡಲಾಗುತ್ತಿದೆ ಹಾಗೂ ವಿವಿಧ ಇಲಾಖಾ ಯೋಜನೆಗಳಿಗೂ ಸಹ ಸರಬರಾಜು ಮಾಡಲಾಗುತ್ತಿದೆ. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳಿಂದ ಕಸಿ/ಸಸಿಗಳ ಮಾರಾಟ ಮತ್ತು ಕ್ಷೇತ್ರದ ಉತ್ಪನ್ನಗಳಿಂದ ವಾರ್ಷಿಕ ರೂ.15.00 ಕೋಟಿಯಷ್ಟು ಆದಾಯ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಗೆ ಪಡೆಯಲಾಗುತ್ತಿದೆ. ಇಲಾಖೆಯಡಿ ಬರುವ ಕ್ಷೇತ್ರ ಮತ್ತು ನರ್ಸರಿಗಳನ್ನು ಇನ್ನೂ ಉತ್ತಮಗೊಳಿಸಲು ಸದರಿ ಕ್ಷೇತ್ರಗಳಲ್ಲಿ ತೋಟಗಾರಿಕೆ ಬೆಳೆಗಳ ಹೊಸ ತಳಿಗಳನ್ನು ಪರಿಚಯಿಸುವುದು, ಉತ್ತಮ ಗುಣಮಟ್ಟದ ಸಸಿ/ಕಸಿಗಳನ್ನು ದುಪ್ಪಟ್ಟು ಪ್ರಮಾಣದಲ್ಲಿ ಅಭಿವೃದ್ಧಿಪಡಿಸಿ ಒದಗಿಸುವ ಉದ್ದೇಶ ಹಾಗೂ ಹೊಸ ತಾಂತ್ರಿಕತೆಗಳ ಅನುಷ್ಠಾನ ಮತ್ತು ರೈತರು/ಸಾರ್ವಜನಿಕರಿಗೆ ಮಾದರಿ ತೋಟಗಾರಿಕೆ ಕಲಿಕಾ ಕೇಂದ್ರಗಳನ್ನಾಗಿ ಮಾಡುವುದು ಅತ್ಯವಶ್ಯಕವಾಗಿರುವುದರಿಂದ ಇಲಾಖೆಯಡಿ ಬರುವ ಎಲ್ಲಾ ಕ್ಷೇತ್ರ ಮತ್ತು ನರ್ಸರಿಗಳನ್ನು ಹಂತಹಂತವಾಗಿ ಮಾದರಿ ಕ್ಷೇತ್ರಗಳನ್ನಾಗಿ ಅಭಿವೃದ್ಧಿಪಡಿಸುವ ಅವಶ್ಯವಿರುತ್ತದೆ.

2017-18 ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಘೋಷಿಸಿರುವಂತೆ ಇಲಾಖೆಯು 16,000 ಎಕರೆಗಳಿಗೂ ಹೆಚ್ಚಿನ ಪ್ರದೇಶದಲ್ಲಿ ಹೊಂದಿರುವ 405 ಕ್ಷೇತ್ರಗಳನ್ನು ಸುಧಾರಿಸುವ ದೃಷ್ಠಿಯಿಂದ 5 ವರ್ಷಗಳಲ್ಲಿ 100 ಮಾದರಿ ತೋಟಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲು 2017-18 ನೇ ಸಾಲಿಗೆ ರೂ.1300.00 ಲಕ್ಷಗಳನ್ನು ಮತ್ತು 2018-19 ನೇ ಸಾಲಿಗೆ ರೂ.1300.00 ಲಕ್ಷಗಳನ್ನು ಒದಗಿಸಲಾಗಿದೆ.

2017-18 ನೇ ಆಯವ್ಯಯದ ಭಾಷಣದಲ್ಲಿ ಘೋಷಿಸಿರುವಂತೆ 2017-18 ನೇ ಸಾಲಿಗೆ ಮೊದಲ ಹಂತದಲ್ಲಿ 30 ಕ್ಷೇತ್ರಗಳನ್ನು ಮತ್ತು 2018-19 ನೇ ಸಾಲಿಗೆ ಎರಡನೇ ಹಂತದಲ್ಲಿ 40 ಕ್ಷೇತ್ರಗಳನ್ನು ಆಯ್ಕೆ ಮಾಡಲಾಗಿ ಮಾದರಿ ಕ್ಷೇತ್ರಗಳನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿದೆ ಉಳಿದ 30 ಕ್ಷೇತ್ರಗಳನ್ನು 2019-20 ನೇ ಸಾಲಿಗೆ ಮೂರನೇ ಹಂತದಲ್ಲಿ **ಮಾದರಿ ಕ್ಷೇತ್ರಗಳನ್ನಾಗಿ ಅಭಿವೃದ್ಧಿಪಡಿಸಲಾಗುವುದು**. ಅದರಂತೆ 2017-18 ಮತ್ತು 2018-19 ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ 70 ಮಾದರಿ ಕ್ಷೇತ್ರಗಳ ನಿರ್ವಹಣೆಗೆ ಮತ್ತು 2019-20 ನೇ ಸಾಲಿಗೆ 30 ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಹಾಗೂ ಇನ್ನಿತರೆ ಕ್ಷೇತ್ರಗಳ ನಿರ್ವಹಣೆಗಾಗಿ 1300.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದೆ.

- ಯೋಜನೆಯ ಶೀರ್ಷಿಕೆ**:** ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಹಾಗೂ ನಿರ್ವಹಣೆ (2401-00-119-4-05)
- ಒಟ್ಟು ಅನುದಾನ**:** ರೂ.1300.00 ಲಕ್ಷಗಳು

**1.** ಮಾದರಿ ತೋಟಗಾರಿಕೆ ಕ್ಷೇತ್ರಗಳ ಅಭಿವೃದ್ಧಿ**:**

**ಮಾದರಿ ತೋಟಗಾರಿಕೆ ಕ್ಷೇತ್ರ ಅಂದರೆ, ಪ್ರಮುಖವಾಗಿ ತಾಯಿ ಮರ ತಾಕುಗಳು, ಮೂಲಭೂತ ಸೌಕರ್ಯ** (Poly tunnels, mist chambers), **ಸಮರ್ಥ ಅಧಿಕಾರಿ** (dedicated) **ಹಾಗೂ ನುರಿತ ಸಿಬ್ಬಂದಿ, ನೀರಿನ ಸೌಲಭ್ಯ ಮತ್ತು ನಿರಂತರ ವಿದ್ಯುತ್ ಪೂರೈಕೆ, ರೈತರಿಗೆ ಹೊಸ ತೋಟಗಾರಿಕೆ ಬೆಳೆಗಳ ಬಗ್ಗೆ ಪರಿಚಯಿಸಲು ಹೊಸ ತಂತ್ರಜ್ಞಾನಗಳನ್ನೊಳಗೊಂಡ ಪ್ರಾತ್ಯಕ್ಷಿಕೆ ಘಟಕಗಳ ಪ್ರದರ್ಶನ, ಉತ್ತಮ ಗುಣಮಟ್ಟದ ಮತ್ತು ಉತ್ತಮ ತಳಿಗಳ ಸಸ್ಯೋತ್ಪಾದನೆ ಕೈಗೊಂಡು ರೈತರಿಗೆ ಸರಬರಾಜು ಮಾಡುವುದು, ನೀರಿನ ಸಂರಕ್ಷಣಾ ಘಟಕಗಳ ಅಳವಡಿಕೆ ಮತ್ತು ಅವುಗಳ ಪ್ರಾತ್ಯಕ್ಷಿಕೆ ಮಾಡಿ ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ ಮತ್ತು ನಿರ್ವಹಣೆ ಮಾಡುವುದು ಹಾಗೂ ಒಟ್ಟಾರೆ**

**ಕ್ಷೇತ್ರದ ಉತ್ಪಾದಕತೆಯನ್ನು ಸಹ ಹೆಚ್ಚಿಸಿ** ಕಲಿಕಾ ಕೇಂದ್ರಗಳನ್ನಾಗಿ ಮಾಡುವುದೇ ಮಾದರಿ ಕ್ಷೇತ್ರಗಳ **ಮೂಲ ಉದ್ದೇಶವಾಗಿರುತ್ತದೆ.**

**ತಾಂತ್ರಿಕ ಸಮಿತಿ ರಚನೆ:**

**ತೋಟಗಾರಿಕೆ ಇಲಾಖೆಯಡಿ ಆಯ್ದ** 100 **ತೋಟಗಾರಿಕೆ ಕ್ಷೇತ್ರಗಳನ್ನು ಮಾದರಿ ತೋಟಗಾರಿಕೆ ಕ್ಷೇತ್ರಗಳನ್ನಾಗಿ ಪರಿವರ್ತಿಸಲು ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು, ತೋಟಗಾರಿಕೆ ವಿಶ್ವ ವಿದ್ಯಾಲಯ, ಬಾಗಲಕೋಟೆ ಹಾಗೂ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಹೆಸರಘಟ್ಟ ಗಳ ನುರಿತ ವಿಜ್ಞಾನಿಗಳ ಉನ್ನತ ಮಟ್ಟದ ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು** 2019-20 **ನೇ ಸಾಲಿಗೆ ಒಟ್ಟು** 30 **ತೋಟಗಾರಿಕೆ ಕ್ಷೇತ್ರಗಳನ್ನು** ವಿಷಯ ಆಧಾರಿತ **ಮಾದರಿ ತೋಟಗಾರಿಕೆ ಕ್ಷೇತ್ರಗಳನ್ನಾಗಿ ಪರಿವರ್ತಿಸಲು ಹಾಗೂ** 2017-18 **ಮತ್ತು** 2018-19 **ನೇ ಸಾಲಿನಲ್ಲಿ ಆಯ್ಕೆ ಮಾಡಿ ಅನುಷ್ಠಾನಗೊಳಿಸುತ್ತಿರುವ** 70 **ಕ್ಷೇತ್ರಗಳ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ವಿಭಾಗೀಯ ಮಟ್ಟದ ತಾಂತ್ರಿಕ ಪರಿಶೀಲನಾ ಸಮಿತಿಯಿಂದ ವಿಸ್ತೃತ ಯೋಜನಾ ವರದಿಗಳನ್ನು ಪಡೆದು, ಯೋಜನಾ ವರದಿಗಳನ್ನು ಪರಿಶೀಲನೆ ಮಾಡಿ ಅವಶ್ಯಕವಿರುವ ಸೂಕ್ತ ಮಾರ್ಪಾಡುಗಳನ್ನು ಸೂಚಿಸಿ ಸಮಯಾಧಾರಿತ ಕಾರ್ಯಸೂಚಿಗಳನ್ನು ನಿಗದಿಪಡಿಸಿ ಕಾಲಕಾಲಕ್ಕೆ ಸೂಕ್ತ ಸಲಹೆಗಳನ್ನು ಶಿಫಾರಸ್ಸು ಮಾಡುವುದು ರಾಜ್ಯಮಟ್ಟದ ತಾಂತ್ರಿಕ ಸಮಿತಿಯ ಕಾರ್ಯ ವ್ಯಾಪ್ತಿಯಾಗಿದೆ. ಕಾರ್ಯಕ್ರಮವನ್ನು ನಿಯಮಾನುಸಾರ ಯಶಸ್ವಿಯಾಗಿ ಅನುಷ್ಠಾಗೊಳಿಸುವುದು ವಿಭಾಗೀಯ ಮತ್ತು ಜಿಲ್ಲಾಮಟ್ಟದ ತಾಂತ್ರಿಕ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟಿರುತ್ತದೆ.**

ಮಾದರಿ ಕ್ಷೇತ್ರದ ಸ್ಥಾಪನೆಗಾಗಿ ಈ ಕೆಳಕಂಡ ವಿಷಯ ಆಧಾರಿತ ಮಾದರಿ ಕ್ಷೇತ್ರವನ್ನಾಗಿ ಸ್ಥಾಪಿಸಲು 2019-20 **ನೇ ಸಾಲಿಗೆ ಆಯ್ಕೆ ಮಾಡಿರುವ** 30 **ತೋಟಗಾರಿಕೆ ಕ್ಷೇತ್ರಗಳಲ್ಲಿ** ಈ ಕೆಳಕಂಡ ಘಟಕಗಳನ್ನೊಳಗೊಂಡ ಯೋಜನಾ ವರದಿಗಳನ್ನು **ಸಿದ್ಧಪಡಿಸಲಾಗಿದೆ.**

ವಿಷಯಾಧಾರಿತ ಮುಖ್ಯ ಘಟಕಗಳು**:**
ಅ**.** ಸಸ್ಯೋತ್ಪಾದನೆ
ಆ**.** ಹೊಸ ತಂತ್ರಜ್ಞಾನಗಳನ್ನೊಳಗೊಂಡ ಪಾತ್ಯಕ್ಷಿಕೆಗಳು
ಇ**.** ಕಿರು ಜಲಾನಯನ ಮಾದರಿಯಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆ
ಈ**.** ಕ್ಷೇತ್ರದ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಳ ಮಾಡುವುದು

ಅ. ಸಸ್ಯೋತ್ಪಾದನೆ/ಸಸ್ಯಾಭಿವೃದ್ಧಿ ಘಟಕ

ಸಸ್ಯಾಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದಕ್ಕಾಗಿ ವಂಶಾವಳಿ ತಾಕುಗಳ ನಿರ್ಮಾಣ ಹಾಗೂ ಬೇಡಿಕೆಗೆ ಅನುಗುಣವಾಗಿ ವಿವಿಧ ತೋಟಗಾರಿಕೆ ಬೆಳೆಗಳ ಸಸ್ಯಾಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಜಿಲ್ಲೆಯಲ್ಲಿರುವ ಬೇಡಿಕೆಯನುಸಾರ ವಿವಿಧ ತರಕಾರಿ ಬೆಳೆಗಳ ಸಸ್ಯೋತ್ಪಾದನೆಯನ್ನು ಕೈಗೊಳ್ಳುವುದು. ಇದಕ್ಕಾಗಿ ಇಲಾಖೆಯಡಿ ಅನುಮೋದಿತವಾಗಿರುವ ಶೆಡ್ಯೂಲ್ ದರಗಳನ್ನು ಅನ್ವಯಿಸಿಯೇ ಸಸ್ಯೋತ್ಪಾದನೆಯನ್ನು ಕೈಗೊಳ್ಳಲಾಗುವುದು. ಸ್ಥಳೀಯ ಬೇಡಿಕೆಗನುಸಾರವಾಗಿ ಸಸ್ಯೋತ್ಪಾದನಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುವುದು. ಈ ಘಟಕದಡಿ ಪ್ರಮುಖವಾಗಿ ಮಾವು, ಸೀಬೆ, ನೇರಳೆ, ಕೋಕೋ, ಗೋಡಂಬಿ, ಅಂಗಾಂಶ ಕೃಷಿ ಸಸಿಗಳು, ಹಲಸು, ಕಾಳು ಮೆಣಸು, ತೆಂಗು ಹಾಗೂ ತರಕಾರಿ ಬೆಳೆಗಳ ಇತ್ಯಾದಿ ಅತ್ಯವಶ್ಯಕವಿರುವ ಕಸಿ/ಸಸಿಗಳ ಉತ್ಪಾದನೆಯನ್ನು ಇಲಾಖಾ ನಿಗದಿತ ದರಗಳನ್ವಯ ಅಭಿವೃದ್ಧಿಪಡಿಸಿ ರೈತರಿಗೆ ಮತ್ತು ಸಾರ್ವಜನಿಕರಿಗೆ ಇಲಾಖಾ ನಿಗದಿತ ದರಗಳಲ್ಲಿ ನೀಡಲಾಗುವುದು. ಪ್ರಸಕ್ತ ಸಾಲಿನಲ್ಲಿ ಒಟ್ಟು 15-20 ಲಕ್ಷ ಉತ್ತಮ

ಗುಣಮಟ್ಟದ ಕಸಿ/ಸಸಿಗಳ ಉತ್ಪಾದನೆಯನ್ನು 2019-20 ನೇ ಸಾಲಿಗೆ ಆಯ್ಕೆ ಮಾಡಿರುವ 30 ತೋಟಗಾರಿಕೆ ಕ್ಷೇತ್ರ ಗಳಲ್ಲಿ ಕೈಗೊಳ್ಳಲು ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದೆ.

ಆ. <u>ಹೊಸ ತಂತ್ರಜ್ಞಾನಗಳನ್ನೊಳಗೊಂಡ ಪ್ರಾತ್ಯಕ್ಷಿಕೆಯ ಕಾರ್ಯಕ್ರಮಗಳು</u>

ರೈತರಿಗೆ ಹೊಸ ತಂತ್ರಜ್ಞಾನವನ್ನು ಪರಿಚಯಿಸಲು ಹೊಸ ಬೆಳೆಗಳ/ ತಳಿಗಳನ್ನು ಕ್ಷೇತ್ರದಲ್ಲಿ ಪರಿಚಯಿಸಲು ಕ್ರಮ ಕೈಗೊಳ್ಳುವುದು. ತೋಟಗಾರಿಕೆ ಕ್ಷೇತ್ರದಲ್ಲಿ ಅಭಿವೃದ್ಧಿಯಾಗಿರುವ ನೂತನ ವೈಜ್ಞಾನಿಕ ಅವಿಷ್ಕಾರಗಳ ಅಳವಡಿಕೆ, ಸಂರಕ್ಷಿತ ಬೇಸಾಯ, ಹಸಿರು ಮನೆಗಳಲ್ಲಿ ಸೂಕ್ತ ಬೆಳೆಗಳ ಹಾಗೂ ಬೇಡಿಕೆಯನುಸಾರ ಅಸಂಪ್ರದಾಯಿಕ ಬೆಳೆಗಳ ಬೇಸಾಯ, ಮಣ್ಣು ಮತ್ತು ನೀರಿನ ಸಂರಕ್ಷಣೆ, ಮಳೆ ನೀರಿನ ಕೋಯ್ಲು ಇತ್ಯಾದಿ ವಿವಿಧ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳುವುದು. ಘಟಕದ ಅನುಷ್ಠಾನವನ್ನು ತಾಂತ್ರಿಕ ಸಮಿತಿಯ ಸೂಕ್ತ ಶಿಫಾರಸುಗಳೊಂದಿಗೆ ತೋಟಗಾರಿಕೆ ಇಲಾಖೆ ಮತ್ತು MGNREGA ಅಡಿಯಲ್ಲಿ ನಿಗದಿಪಡಿಸಿರುವ ದರಗಳಿಗೆ ಒಳಪಟ್ಟು ಕೈಗೊಳ್ಳಲಾಗುವುದು.

ಇ. <u>ಕಿರು ಜಲಾನಯ ಮಾದರಿಯಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆ</u>

ಇಲಾಖೆಯ ವ್ಯಾಪ್ತಿಗೆ ಬರುವ ಹೆಚ್ಚಿನ ಕ್ಷೇತ್ರ/ಸಸ್ಯಾಗಾರಗಳಲ್ಲಿ ನೀರಿನ ಕೊರತೆ ಸಾಮಾನ್ಯ ಸಮಸ್ಯೆಯಾಗಿರುತ್ತದೆ. ಇದಲ್ಲದೆ ರಾಜ್ಯದಲ್ಲಿ ನಿರಂತರ ಬರದ ಪರಿಸ್ಥಿತಿ ಇರುವುದರಿಂದ ನೀರಿನ ಸಮಸ್ಯೆಯು ಮುಂದಿನ ದಿವಸಗಳಲ್ಲಿ ಹೆಚ್ಚಾಗುವ ಸಂಭವವಿರುತ್ತದೆ. ಆದುದರಿಂದ ಮಳೆ ನೀರು ಕೋಯ್ಲು ಮಾಡುವುದಕ್ಕೆ ಹೆಚ್ಚಿನ ಒತ್ತನ್ನು ನೀಡುವುದು. ಇದಕ್ಕಾಗಿ ಕೆರೆ/ಹೊಂಡಗಳನ್ನು ನಿರ್ಮಾಣ ಮಾಡಿ ಮಳೆ ನೀರನ್ನು ಸಂಗ್ರಹಿಸಿ ಕ್ಷೇತ್ರದ ಅಭಿವೃದ್ಧಿ/ನಿರ್ವಹಣೆ ಹಾಗೂ ಸಸ್ಯೋತ್ಪಾದನೆಗೆ ಬಳಸಲು ಒತ್ತು ಕೊಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಇದಕ್ಕಾಗಿ ಕಿರು ಜಲಾನಯನ ವಿಷಯ ಆಧಾರಿತ ಚಟುವಟಿಕೆಗಳನ್ನು ಎಲ್ಲಾ ಮಾದರಿ ಕ್ಷೇತ್ರ ಗಳಲ್ಲಿ ಹಮ್ಮಿಕೊಂಡು ನಿರಂತರವಾಗಿ ನೀರಿನ ಸೌಲಭ್ಯವು ಕ್ಷೇತ್ರ ಗಳಲ್ಲಿ ಇರುವಂತೆ ಮಾಡುವುದು ಈ ಘಟಕದ ಮುಖ್ಯ ಉದ್ದೇಶವಾಗಿರುತ್ತದೆ. ಸದರಿ ಕಾರ್ಯಕ್ರಮದಡಿ ಕ್ಷೇತ್ರದ ಮಣ್ಣು ಮತ್ತು ನೀರು ಸಂರಕ್ಷಣೆಗಾಗಿ ವಿವಿಧ ಚಟುವಟಿಕೆಗಳಾದ ಕಂದಕ(trenching)ಗಳನ್ನು ತೆಗೆಯುವುದು, trench cum bunding, contour bunding, ಇಂಗು ಗುಂಡಿಗಳು, ನಾಲಾಬದು, ಬದುಗಳ ಮೇಲೆ ಸೂಕ್ತ ಗಿಡಗಳನ್ನು ನಾಟಿ ಮಾಡುವುದು, ಜೈವಿಕ ಬೇಲಿ ನಿರ್ಮಾಣ ಇತ್ಯಾದಿ ಗಳನ್ನು ಹಮ್ಮಿಕೊಳ್ಳುವುದು. ಇದನ್ನು ತೋಟಗಾರಿಕೆ ಇಲಾಖೆ/MGNREGA ಅಡಿಯಲ್ಲಿ ನಿಗದಿಪಡಿಸಿರುವ ದರಗಳಿಗೆ ಒಳಪಟ್ಟು ಕೈಗೊಳ್ಳಲಾಗುವುದು.

ಈ. <u>ಕ್ಷೇತ್ರದ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಕಾರ್ಯಕ್ರಮಗಳು</u>

ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸಲು ಸೂಕ್ತ ಬೆಳೆಗಳ ಅಂತರ ಬೇಸಾಯ, ಮಿಶ್ರಬೆಳೆ, gap filling, ವಯಸಾದ ಮತ್ತು ಅನುತ್ಪಾದಕ ಮರಗಳ ಪುನಶ್ಚೇತನ, ಸಮಗ್ರ ಪೋಷಕಾಂಶಗಳ/ಕೀಟ ಮತ್ತು ರೋಗಗಳ ನಿರ್ವಹಣೆ ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಮಣ್ಣು ಮತ್ತು ನೀರಿನ ವಿಶ್ಲೇಷಣೆ ಆಧಾರದ ಮೇಲೆ ಸೂಕ್ತ ಪೋಷಕಾಂಶಗಳನ್ನು ಒದಗಿಸುವುದು. ಇದಲ್ಲದೆ ಕ್ಷೇತ್ರದಲ್ಲಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಹಾಲಿ ಇರುವ ಮೂಲಭೂತ ಸೌಕರ್ಯಗಳ ಸಮರ್ಪಕ ಸದ್ಬಳಕೆ ಮಾಡಿ ಹೆಚ್ಚಿನ ಉತ್ಪಾದಕತೆ ಪಡೆಯಲು ಕ್ರಮಗಳನ್ನು ಅಳವಡಿಸುವುದು. ಇದನ್ನು ತೋಟಗಾರಿಕೆ ಇಲಾಖೆ/MGNREGA ಅಡಿಯಲ್ಲಿ ನಿಗದಿಪಡಿಸಿರುವ ದರಗಳಿಗೆ ಒಳಪಟ್ಟು ಕೈಗೊಳ್ಳಲಾಗುವುದು.

<u>ಮಾದರಿ ಕ್ಷೇತ್ರ ಗಳ ಆಯ್ಕೆಯ ಮಾನದಂಡಗಳು:</u>

ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಲು ಈ ಕೆಳಕಂಡ ಮಾನದಂಡಗಳನ್ನು ಪರಿಗಣಿಸಿ, ಕ್ಷೇತ್ರ ಗಳನ್ನು ಆಯ್ಕೆಮಾಡಲಾಗಿದೆ.

- ಕ್ಷೇತ್ರ ಗಳಲ್ಲಿ ಹೆಚ್ಚಿನ ರೀತಿಯಲ್ಲಿ ಸಸ್ಯೋತ್ಪಾದನೆ ಚಟುವಟಿಕೆ ಮತ್ತು ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳುವಂತಿರಬೇಕು.
- ಅಭಿವೃದ್ಧಿಪಡಿಸಲು ಕ್ಷೇತ್ರದ ವಿಸ್ತೀರ್ಣ ಕನಿಷ್ಠ 10 ಹೆಕ್ಟೇರ್ ಇರಬೇಕು ಅಥವಾ ಕಡಿಮೆ ವಿಸ್ತೀರ್ಣ ಹೊಂದಿರುವ ಕ್ಷೇತ್ರ ಗಳಲ್ಲಿ ಅಗತ್ಯತೆಯನುಸಾರ ಪ್ರತಿ ಜಿಲ್ಲೆಗೆ ಕನಿಷ್ಠ ಒಂದರಂತೆ ಕ್ಷೇತ್ರ ವನ್ನು ಆಯ್ಕೆ ಮಾಡಲಾಗಿದೆ.

**<u>ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳು</u>**

- **ವಿಭಾಗೀಯ ಮಟ್ಟದ ತಾಂತ್ರಿಕ ಪರಿಶೀಲನಾ ಸಮಿತಿಯನ್ನು ರಚಿಸಿ ಮಾದರಿ ತೋಟಗಾರಿಕೆ ಕ್ಷೇತ್ರಗಳನ್ನಾಗಿ ಅಭಿವೃದ್ಧಿಪಡಿಸುವ ಕ್ಷೇತ್ರಗಳ ವಿವರವಾದ ಕ್ರಿಯಾ ಯೋಜನೆಯನ್ನು ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯ ಶಿಫಾರಸ್ಸುಗಳೊಂದಿಗೆ ಪರಿಶೀಲನೆಗಾಗಿ ವಿಭಾಗೀಯ ತೋಟಗಾರಿಕೆ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯಲ್ಲಿ ಸಂಬಂಧಿಸಿದ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು ಜಿಲ್ಲಾ ಪಂಚಾಯತ್ ರವರನ್ನು ಉಪಾಧ್ಯಕ್ಷರಾಗಿ, ಸಂಬಂಧಿಸಿದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ/ಜಿಲ್ಲಾ ವಲಯ) ರವರನ್ನು ಸದಸ್ಯರನ್ನಾಗಿ ನೇಮಿಸಿಕೊಳ್ಳಲಾಗಿದೆ.**
- ಮಾದರಿ ಕ್ಷೇತ್ರಗಳ ಅಭಿವೃದ್ಧಿಗೆ 2019-20 ನೇ ಸಾಲಿಗೆ ಆಯ್ಕೆಯಾಗಿರುವ 30 ಕ್ಷೇತ್ರಗಳ ಪ್ರತ್ಯೇಕವಾದ ಯೋಜನಾ ವರದಿಯನ್ನು ಸಂಬಂಧಪಟ್ಟ ಕ್ಷೇತ್ರದ ಮತ್ತು ಜಿಲ್ಲಾಮಟ್ಟದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ಹಾಗೂ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ರವರಿಂದ ಸ್ಥಳೀಯ ಬೇಡಿಕೆ ಮತ್ತು ಅವಶ್ಯಕತೆಗನುಸಾರ Detailed Project report ನ್ನು ತಯಾರಿಸಿ ವಿಭಾಗೀಯ ಜಂಟಿ ನಿರ್ದೇಶಕರ ಮೂಲಕ ನಿರ್ದೇಶನಾಲಯಕ್ಕೆ ಅನುಮೋದನೆಗೆ ಸಲ್ಲಿಸಲಾಗಿದೆ.
- ಯೋಜನಾ ವರದಿಯ ಅನುಮೋದನೆಗೆ ನಿರ್ದೇಶನಾಲಯದ ಮಟ್ಟದಲ್ಲಿ ತಾಂತ್ರಿಕ ಸಮಿತಿಯು ಪರಿಶೀಲಿಸಿದ ನಂತರ, ಸೂಕ್ತ ಮಾರ್ಪಾಡುಗಳನ್ನು ಶಿಫಾರಸ್ಸು ಮಾಡಿ ಅನುಮೋದನೆ ನೀಡಲಾಗುವುದು.
- ಅನುಮೋದಿತ Detailed Project report ರನ್ವಯ ವಿವಿಧ ಕಾಮಗಾರಿ/ಚಟುವಟಿಕೆಗಳನ್ನು ತಾಂತ್ರಿಕ ಸಮಿತಿಯ ಸೂಕ್ತ ಸೂಚನೆಗಳು ಮತ್ತು ಶಿಫಾರಸುಗಳನ್ನು ಅಳವಡಿಸಿಕೊಂಡು ನಿಗದಿತ ಸಮಯದೊಳಗೆ ನಿಯಮಾನುಸಾರ ಅನುಷ್ಠಾನಗೊಳಿಸುವ ಜವಾಬ್ದಾರಿ ಶೇ.100 ರಷ್ಟು ಜವಾಬ್ದಾರಿ ಜಿಲ್ಲಾಮಟ್ಟದಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ರವರದ್ದಾಗಿರುತ್ತದೆ.
- ವಿಭಾಗೀಯ ಜಂಟಿ ನಿರ್ದೇಶಕರು ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ರವರಿಂದ ಮೇಲಿಂದ ಮೇಲೆ ತಿಂಗಳಿಗೆ ಕನಿಷ್ಠ 2 ಬಾರಿ ಸದರಿ ಕ್ಷೇತ್ರಕ್ಕೆ ಭೇಟಿ ನೀಡಿ ಸೂಕ್ತ ಸಲಹೆ ಸೂಚನೆಗಳನ್ನು ನೀಡುವುದು.
- ಜಿಲ್ಲಾನೋಡಲ್ ಅಧಿಕಾರಿಗಳು ಜಿಲ್ಲೆಯ ಬೇಟಿ ಸಮಯದಲ್ಲಿ ಕಡ್ಡಾಯವಾಗಿ ಮಾದರಿ ಕ್ಷೇತ್ರದ ಕಾಮಗಾರಿ/ಚಟುವಟಿಕೆಗಳನ್ನು ಖುದ್ದಾಗಿ ವೀಕ್ಷಿಸಿ, ಸಲಹೆ ಸೂಚನೆಗಳನ್ನು ನೀಡಲಾಗುವುದು.

<u>ಅನುಷ್ಠಾನ ವೇಳಾಪಟ್ಟಿ:</u>

- 2019-20 ನೇ ಸಾಲಿಗೆ ಒಟ್ಟು 100 ತೋಟಗಾರಿಕೆ ಕ್ಷೇತ್ರಗಳನ್ನು ವಿಷಯ ಆಧಾರಿತ ಮಾದರಿ ತೋಟಗಾರಿಕೆ ಕ್ಷೇತ್ರಗಳನ್ನಾಗಿ ಪರಿವರ್ತಿಸಲು ಸಂಬಂಧಪಟ್ಟ ವಿಭಾಗೀಯ ಮಟ್ಟದ ತೋಟಗಾರಿಕೆ ಅಧಿಕಾರಿಗಳಿಂದ ವಿಸ್ತೃತ ಯೋಜನಾ ವರದಿಗಳನ್ನು ಪಡೆದು, ವಿಸ್ತೃತ ಯೋಜನಾ ವರದಿಗಳನ್ನು ಉನ್ನತ ಮಟ್ಟದ ತಾಂತ್ರಿಕ ಸಮಿತಿಯು ಡಿಸೆಂಬರ್-2018 ರ ಮಾಹೆಯ ಮೂರನೇ ವಾರದ ಅಂತ್ಯದೊಳಗೆ ಪರಿಶೀಲನೆ ಮಾಡಿ ಅನುಮೋದಿಸಿ ಏಪ್ರಿಲ್ ಕೊನೆಯ ವಾರ ಮತ್ತು ಮೇ ತಿಂಗಳುಗಳಲ್ಲಿ ಅನುಷ್ಠಾನವನ್ನು ಪ್ರಾರಂಭಿಸುವುದು.
- ಹೊಸ ಪ್ರಾತ್ಯಕ್ಷಿಕೆ ಮತ್ತು ವಂಶಾವಳಿ ತಾಕುಗಳ ಅಭಿವೃದ್ಧಿಯನ್ನು ಮೇ ತಿಂಗಳಿನಲ್ಲಿಯೇ  ಗುಂಡಿ ತೆಗೆದು ಜೈವಿಕ ಗೊಬ್ಬರ, ಕೊಟ್ಟಿಗೆ ಗೊಬ್ಬರಗಳನ್ನು ಹಾಕಿ ಗಿಡಗಳನ್ನು ಸಂಗ್ರಹಿಸಿ ಜೂನ್ ತಿಂಗಳ ಮಳೆಯ ಆಧಾರದ ಮೇಲೆ ಗಿಡಗಳ ನಾಟಿ ಕಾರ್ಯವು ಆಗಸ್ಟ್ ಮಾಹೆಯ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.
- ಕ್ಷೇತ್ರ ಮತ್ತು ನರ್ಸರಿಗಳಿಗೆ ಹನಿ ನೀರಾವರಿ ಅಳವಡಿಕೆ ಕೆಲಸಗಳನ್ನು ಏಪ್ರಿಲ್ ತಿಂಗಳಿನಲ್ಲಿಯೇ ಟೆಂಡರ್ ಕರೆದು ಕಾಮಗಾರಿಯನ್ನು ಮೇ ತಿಂಗಳಿನಲ್ಲಿಯೇ ಕೈಗೊಳ್ಳಲಾಗುವುದು.
- ಪಾಲಿಹೌಸ್, ನೆರಳುಪರದೆ ನಿರ್ಮಾಣ, ದುರಸ್ಥಿ ಕೆಲಸಗಳನ್ನು ಮೇ ಮಾಹೆಯ ಅಂತ್ಯದೊಳಗೆ ನಿಯಮಾನುಸಾರ ಪೂರ್ಣಗೊಳಿಸುವುದು.
- ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸಲು ಅಂತರ ಬೇಸಾಯ, ಮಿಶ್ರಬೆಳೆ, gap filling, ವಯಸ್ಸಾದ ಮತ್ತು ಅನುತ್ಪಾದಕ ಮರಗಳ  ಪುನಶ್ಚೇತನ, ಸಮಗ್ರ ಪೋಷಕಾಂಶಗಳ/ಕೀಟ

ಮತ್ತು ರೋಗಗಳ ನಿರ್ವಹಣೆ ಇತ್ಯಾದಿ ಚಟುವಟಿಕೆಗಳನ್ನು ನಿಗದಿತ ಸಮಯದಲ್ಲಿಯೇ ಕೈಗೊಳ್ಳಲಾಗುವುದು.

- ಕ್ಷೇತ್ರದ ಸಸ್ಯ ಸಂಪತ್ತಿನ ಪೋಷಕಾಂಶ ನಿರ್ವಹಣೆ ಕೆಲಸಗಳನ್ನು ಮುಂಗಾರು ಮಳೆಯ ಸಮಯದಲ್ಲಿ ಮೊದಲನೇ ಕಂತಿನ ಪ್ರಮಾಣವನ್ನು ಮೇ-ಜೂನ್ ಮಾಹೆಗಳಲ್ಲಿ ಹಾಗೂ ಹಿಂಗಾರು ಮಳೆಯ ಸಮಯದಲ್ಲಿ ಎರಡನೇ ಕಂತಿನ ಪ್ರಮಾಣವನ್ನು ಸೆಪ್ಟಂಬರ್- ಅಕ್ಟೋಬರ್ ಮಾಹೆಗಳಲ್ಲಿ ನೀಡುವುದು.
- ಸಸ್ಯೋತ್ಪಾದನೆಗೆ ನಿಗದಿಪಡಿಸಿರುವ ಇಲಾಖಾ SR ದರಪಟ್ಟಿಯನ್ನು ಮೀರದಂತೆ ಸಸ್ಯೋತ್ಪಾದನೆ ಕೈಗೊಳ್ಳಬೇಕು. ಕಸಿ ಗಿಡ ಅಭಿವೃದ್ದಿಪಡಿಸಲು ಉದ್ದೇಶಿತ ಸಂದರ್ಭದಲ್ಲಿ ನಿಗದಿಪಡಿಸಿದ ಸಮರ್ಪಕ ಋತುಮಾನದಲ್ಲಿ ಮೃದು ಕಾಂಡ ಕಸಿ/ಬೆಣೆ ಕಸಿ ಮುಖಾಂತರ ಅಭಿವೃದ್ದಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಕಸಿ/ಸಸಿಗಳನ್ನು ಶಿಪಾರಸ್ಸು ಮಾಡಿದ ಸೂಕ್ತ ತಾಂತ್ರಿಕ ವಿಧಾನ ಅನುಸರಿಸಿ ಅಭಿವೃದ್ದಿಪಡಿಸಬೇಕು. ಮಾವು ಕಸಿಯನ್ನು ಓಟೆ ಕಸಿ ಅಥವಾ ಮೃದು ಕಾಂಡ ಕಸಿಯ ಮುಖಾಂತರ ಕೈಗೊಳ್ಳಲು ಮಾವಿನ ಓಟೆಗಳನ್ನು ಮಡಿಗಳಲ್ಲಿ ಬಿತ್ತನೆ ಮಾಡುವಾಗ ಸೂಕ್ತ ಪ್ರಮಾಣದಲ್ಲಿ ಮರಳನ್ನು ಮಿಶ್ರಣ ಮಾಡಿ ಶೇಕಡವಾರು ಹೆಚ್ಚಿನ ಮೊಳಕೆ ಸಸಿ ಪಡೆಯಬೇಕು. ಉತ್ಪಾದಿಸಿದ ಕಸಿ ಗಿಡಗಳನ್ನು ತಳಿವಾರು ಸೂಚಿತ ಬಣ್ಣ ಹಾಕಿ ಜೋಡಿಸಿಡಬೇಕು. ಉತ್ಪಾದಿಸಿದ ಕಸಿ ಗಿಡಗಳ ಸಂಖ್ಯೆ ಹಾಗೂ ಆ ಗಿಡಗಳ ಮಾರಾಟದಿಂದ ಬಂದ ಆದಾಯ ಹೊಂದಾಣಿಕೆಯಾಗಬೇಕು. ಗುಣಮಟ್ಟದ ಕಸಿ/ಸಸಿ ಗಿಡಗಳನ್ನು ಮಾತ್ರ ರೈತರಿಗೆ ವಿತರಿಸಿ ಬಿಲ್ಲು ಹಾಕಿ ದಾಸ್ತಾನು ಪುಸ್ತಕದಲ್ಲಿ ನಮೂದಿಸಬೇಕು. ಆಯಾ ವರ್ಷದಲ್ಲಿ ಅಭಿವೃದ್ದಿಪಡಿಸಿರುವ ಕಸಿ ಗಿಡಗಳನ್ನು ಅದೇ ವರ್ಷದಲ್ಲಿ ರೈತರಿಗೆ ನಾಟಿ ಮಾಡಲು ಪೂರೈಸದೇ ಕನಿಷ್ಠ 6 ತಿಂಗಳು ಅವು ನರ್ಸರಿಗಳಲ್ಲಿ ಗಡಸುಗೊಳಿಸಿ ಚೆನ್ನಾಗಿ ಚಿಗುರೊಡೆದ ನಂತರ ಮಾರಾಟ ಮಾಡುವುದು. ಸ್ಥಳೀಯವಾಗಿ ಬೇಡಿಕೆ ಇರುವ ತಳಿಗಳನ್ನು ಮಾತ್ರ ಅಭಿವೃದ್ದಿಪಡಿಸಬೇಕು. ಅಭಿವೃದ್ದಿಪಡಿಸಿದ ಗಿಡಗಳು ಮುಂದಿನ ಸಾಲಿನಲ್ಲಿ ಮಾರಾಟ ಮಾಡಲು ಅವಶ್ಯವಿರುವ ಸೂಕ್ತ ಕ್ರಮಗಳನ್ನು ಕ್ಷೇತ್ರ ಮಟ್ಟದ ಅನುಷ್ಠಾನಾಧಿಕಾರಿಗಳು ಕೈಗೊಳ್ಳಬೇಕು. ಗಿಡಗಳ ಮಾರಾಟಕ್ಕೆ ಅನುವಾಗುವಂತೆ ಹೆಚ್ಚಿನ ರೀತಿಯಲ್ಲಿ ಸ್ಥಳೀಯವಾಗಿ ಪ್ರಚಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ತೋಟಗಾರಿಕೆ ಕ್ಷೇತ್ರಗಳಲ್ಲಿ ಉತ್ಪಾದಿಸುವ ಗಿಡಗಳನ್ನು ಜಿಲ್ಲಾ ಮತ್ತು ತಾಲ್ಲೂಕು ತೋಟಗಾರಿಕೆ ಕಛೇರಿಗಳ ಬಳಿ ಪ್ರದರ್ಶಿಸಿ ಹೆಚ್ಚಿನ ಪ್ರಚಾರ ಕೈಗೊಳ್ಳಬೇಕು. ಕ್ಷೇತ್ರ/ ನರ್ಸರಿಗಳಲ್ಲಿ ಎರಡನೇ ವರ್ಷವೂ ಮಾರಾಟವಾಗದೇ ಉಳಿದ ಕಸಿ ಗಿಡಗಳನ್ನು ಮೊದಲ ಹಂತದಲ್ಲಿ 8"x12" ಅಳತೆಯ ಪಾಲಿಬ್ಯಾಗುಗಳಿಗೆ ವರ್ಗಾಯಿಸಿ (Rebagging) ನಿರ್ವಹಣೆ ಮಾಡಿ ನಂತರ ಮಾರಾಟ ಮಾಡಲಾಗುವುದು.
- ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ, ಹಸಿರೆಲೆ ಗೊಬ್ಬರ ಬೆಳೆಗಳ ಬೀಜ ಖರೀದಿಸಿ, ಉಳುಮೆ ಮಾಡಿ, ಬಿತ್ತನೆ ಮಾಡುವುದು, ಗಿಡಗಳಿಗೆ ಪಾತಿ ಮಾಡುವುದು, ಸಮಗ್ರ ಕೀಟ/ರೋಗ/ಪೋಷಕಾಂಶ ನಿರ್ವಹಣೆಗಾಗಿ ಸೂಕ್ತ ಪರಿಕರಗಳ ಸಂಗ್ರಹಣೆ, ಹೊಸ ತಳಿಗಳ ಪ್ರದೇಶ ವಿಸ್ತರಣೆ, ಮೇವು ಬೆಳೆಗಳ ಬೀಜ ಖರೀದಿ, ಕಳೆ ನಿಯಂತ್ರಣ, ಜೈವಿಕ ಪರಿಕರಗಳ ಉತ್ಪಾದನೆ ಇತ್ಯಾದಿಗಳನ್ನು ಮೇ-ಜೂನ್ ಮಾಹೆಯಲ್ಲಿ ಕೈಳ್ಳಲಾಗುವುದು.
- ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳಾದ ವರ್ಮಿಕಾಂಪೋಸ್ಟ್/ಬಯೋಡೈಜೆಸ್ಟರ್, ಬೆಂಕಿ ಸಂರಕ್ಷಣಾ ವಲಯ ನಿರ್ಮಾಣ, ನೀರು ನಿರ್ವಹಣೆ, ಕಾಂಪೌಂಡ್ ದುರಸ್ಥಿ, ತಂತಿಬೇಲಿ ದುರಸ್ಥಿ, ಹಸಿರುಮನೆ/ನೆರಳುಪರದೆ ರಿಪೇರಿ, ಕಟ್ಟಡ ದುರಸ್ಥಿ, ಯಂತ್ರಗಳ ದುರಸ್ಥಿ ಇತ್ಯಾದಿ ಕೆಲಸಗಳನ್ನು ಜೂನ್-ಡಿಸೆಂಬರ್ ಮಾಹೆಯಲ್ಲಿ ಕೈಗೊಳ್ಳಲಾಗುವುದು.

ಅನುದಾನ

2017-18 ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಆಯ್ಕೆ ಮಾಡಿರುವ ಒಟ್ಟು 30 ಸಂಖ್ಯೆ ಮತ್ತು 2018-19 ನೇ ಸಾಲಿನ 40 ಮಾದರಿ ಕ್ಷೇತ್ರಗಳ ನಿರ್ವಹಣೆಗಾಗಿ ಹಾಗೂ 2019-20 ನೇ ಸಾಲಿಗೆ 30 ಮಾದರಿ ಕ್ಷೇತ್ರಗಳಾಗಿ ಪರಿವರ್ತಿಸಲು ಒಟ್ಟಾರೆ ರೂ.1000.00 ಲಕ್ಷಗಳ ಅನುದಾನವನ್ನು ಕಲ್ಪಿಸಿದೆ. ಇತರೇ ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ ಕ್ಷೇತ್ರಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತರಬೇತಿ ಮತ್ತು ಸಾದಿಲ್ವಾರು ಮೊತ್ತ ಸೇರಿ ರೂ.300.00 ಲಕ್ಷಗಳನ್ನು ನಿಗದಿಪಡಿಸಿದೆ. ಒಟ್ಟಾರೆ ಈ ಯೋಜನೆಯಡಿ ರೂ.1300.00 ಲಕ್ಷಗಳ ಅನುದಾನ ನಿಗದಿಪಡಿಸಿದೆ. ಹೆಚ್ಚಿನ ಅನುದಾನದ ಅವಶ್ಯಕತೆ ಕಂಡುಬಂದಲ್ಲಿ

ಇಲಾಖೆಯ ಕರ್ನಾಟಕ ರಾಜ್ಯ ತೋಟಗಾರಿಕೆ ಏಜೆನ್ಸಿಯ ಆವರ್ತ ನಿಧಿಯಿಂದ ಅನುದಾನ ಬಿಡುಗಡೆ ಮಾಡಲಾಗುವುದು.

2. <u>ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ನಿರ್ವಹಣೆ</u>

ಇಲಾಖೆಯು ನಿಗದಿಪಡಿಸಿರುವ ತೋಟಗಾರಿಕೆ ಕಾಮಗಾರಿಗಳ ನಿಗದಿತ ದರಗಳ ಕೈಪಿಡಿ ಪ್ರಕಾರ ಕ್ಷೇತ್ರ/ನರ್ಸರಿಗಳಲ್ಲಿ ವಿವಿಧ ನಿರ್ವಹಣೆ ಚಟುವಟಿಕೆಗಳಾದ ಉಳುಮೆ ಮಾಡುವುದು, ಗಿಡಗಳಿಗೆ ಪಾತಿ ಮತ್ತು ಮೇಲಾವರಣ ನಿರ್ವಹಣೆ ಮಾಡುವುದು, ಕಳೆ ನಿಯಂತ್ರಣ ಕಸಿ/ಸಸಿಗಳ ನಿರ್ವಹಣೆ ಮತ್ತು ಅವಶ್ಯಕತೆಯಾನುಸಾರ ರಿ-ಬ್ಯಾಗಿಂಗ್ ಮಾಡುವುದು, ಹಸಿರೆಲೆಗೊಬ್ಬರ ಬೆಳೆಗಳ ಬೀಜ ಖರೀದಿ ಮತ್ತು ಬಿತ್ತನೆ, ಬೆಂಕಿ ಸಂರಕ್ಷಣಾ ವಲಯ ನಿರ್ಮಾಣ, ನೀರು ನಿರ್ವಹಣೆ, ಸಮಗ್ರ ಕೀಟ/ರೋಗ/ಪೋಷಕಾಂಶ ನಿರ್ವಹಣೆಗಾಗಿ ಸೂಕ್ತ ಪರಿಕರಗಳ ಸಂಗ್ರಹಣೆ ಮತ್ತು ಬಳಕೆ ಮೇವು ಖರೀದಿ, ಮೇವು ಬೆಳೆಗಳ ಬೀಜ ಖರೀದಿ ಮತ್ತು ಬೇಸಾಯ, ಮೇವು ಬೆಳೆಗಳ ಅಭಿವೃದ್ಧಿ, ಜೈವಿಕ ಪರಿಕರಗಳ ಉತ್ಪಾದನೆ, ರಾಸು/ಜಾನುವಾರುಗಳ ನಿರ್ವಹಣೆ, ಅವುಗಳ ವಿಮೆ, ಹಸಿರುಮನೆ ರಿಪೇರಿ, ನೆರಳುಪರದೆ ರಿಪೇರಿ, ಕಟ್ಟಡ ದುರಸ್ಥಿ, ತಂತಿಬೇಲಿ ದುರಸ್ಥಿ, ಕಾಂಪೌಂಡ್ ದುರಸ್ಥಿ, ವಿದ್ಯುತ್ ಬಿಲ್, ಯಂತ್ರೋಪಕರಣಗಳ ದುರಸ್ಥಿ, ಹೊರಗುತ್ತಿಗೆ ಆಧಾರದ ಮೇಲೆ ನಿಯಮಾನುಸಾರ ತೋಟಗಾರರ/ ಟ್ರಾಕ್ಟರ್ ಚಾಲಕರ ಸೇವೆಗಳು ಇತ್ಯಾದಿ ಕ್ಷೇತ್ರ ನಿರ್ವಹಣೆ ಕಾರ್ಯಗಳನ್ನು ಕೈಗೊಳ್ಳುವುದು.

**<u>2019-20 ನೇ ಸಾಲಿನಲ್ಲಿ ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ನಿರ್ವಹಣೆ ಕಾರ್ಯಕ್ರಮಕ್ಕೆ ರೂ 264.00 ಲಕ್ಷಗಳನ್ನು ನಿಗದಿಪಡಿಸಿದೆ.</u>**

3. **ಕ್ಷೇತ್ರ ಮಟ್ಟದ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ:**

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಸಹಾಯಕ ತೋಟಗಾರಿಕೆ ನಿರ್ದೇಶಕರು, ಸಹಾಯಕ ತೋಟಗಾರಿಕೆ ಅಧಿಕಾರಿ, ತೋಟಗಾರಿಕೆ ಸಹಾಯಕರು ರವರುಗಳಿಗೆ ತೋಟಗಾರಿಕೆ ಕ್ಷೇತ್ರಗಳ ಪಾಲನೆ, ನಿರ್ವಹಣೆ ಮತ್ತು ಅಭಿವೃದ್ಧಿ, ಹೊಸ ತಾಂತ್ರಿಕತೆ, ಸಸ್ಯಾಭಿವೃದ್ಧಿ ಹಾಗೂ ಕ್ಷೇತ್ರ ಮಟ್ಟದ ದಾಖಲಾತಿಗಳ ಸಮರ್ಪಕ ನಿರ್ವಹಣೆ ಹಾಗೂ ಕರ್ತವ್ಯಗಳ ಬಗ್ಗೆ ತರಬೇತಿ ನೀಡಲಾಗುವುದು.

<u>2018-19 ನೇ ಸಾಲಿನಲ್ಲಿ ಕ್ಷೇತ್ರ ಮಟ್ಟದ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಗಾಗಿ ರೂ.10.00 ಲಕ್ಷಗಳನ್ನು ನಿಗಧಿಪಡಿಸಿದೆ.</u>

- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಸಹಾಯಕ ತೋಟಗಾರಿಕೆ ನಿರ್ದೇಶಕರು, ಸಹಾಯಕ ತೋಟಗಾರಿಕೆ ಅಧಿಕಾರಿ, ತೋಟಗಾರಿಕೆ ಸಹಾಯಕರು ರವರುಗಳಿಗೆ ತೋಟಗಾರಿಕೆ ಕ್ಷೇತ್ರಗಳ ಪಾಲನೆ, ನಿರ್ವಹಣೆ ಮತ್ತು ಅಭಿವೃದ್ಧಿ, ಸಸ್ಯಾಭಿವೃದ್ಧಿ ಹಾಗೂ ಕ್ಷೇತ್ರ ಮಟ್ಟದ ದಾಖಲಾತಿಗಳ ಸಮರ್ಪಕ ನಿರ್ವಹಣೆ ಹಾಗೂ ಕರ್ತವ್ಯಗಳ ಬಗ್ಗೆ ತಂತ್ರಜ್ಞರಿಂದ ಹಾಗೂ ಸಂಬಂಧಿಸಿದ ವಿಷಯಗಳ ವಿಜ್ಞಾನಿಗಳಿಂದ ನೂತನ ತಾಂತ್ರಿಕತೆಗಳ ಬಗ್ಗೆ ತರಬೇತಿ ನೀಡಲಾಗುವುದು.
- ತರಬೇತಿಗೆ ಹಾಜರಾಗುವ ಪ್ರಾಶಿಕ್ಷಣಾರ್ಥಿರವರುಗಳಿಗೆ ತಾಂತ್ರಿಕ ಕೈಪಿಡಿ, ಮಾಹಿತಿ ಪುಸ್ತಕ, ಪೆನ್ನು, ಬ್ಯಾಗ್ ಮತ್ತು ಊಟದ ವ್ಯವಸ್ಥೆ ಮಾಡುವುದು.
- ಕ್ಷೇತ್ರ ಮಟ್ಟದ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ (10 ಸಂ.).

4. **<u>ಸಾದಿಲ್ವಾರು ವೆಚ್ಚ:</u>**

ಜಿಲ್ಲೆ/ತಾಲ್ಲೂಕು ಕೇಂದ್ರಗಳಲ್ಲಿ ಸಸ್ಯ ಸಂತೆ ಆಯೋಜನೆ, ಕ್ಷೇತ್ರಗಳಿಂದ ಗಿಡಗಳನ್ನು ಬೇರೆಡೆ ಸಾಗಿಸಲು ಸಾಗಾಣಿಕೆ ವೆಚ್ಚ, ರಾಜ್ಯ ಮತ್ತು ಜಿಲ್ಲಾ ಮಟ್ಟದ ಕ್ಷೇತ್ರಗಳ ದಿನ ನಿತ್ಯದ ವಹಿವಾಟುಗಳಿಗೆ ಅವಶ್ಯವಿರುವ ಪುಸ್ತಕ/ಮಾಹಿತಿ/ಕೈಪಿಡಿ ಇತರೆ ಪ್ರಕಟಣೆಗಳ ಮುದ್ರಾಣಾ ವೆಚ್ಚ, ಕ್ಷೇತ್ರಗಳ ಫಸಲು ಹರಾಜು ಪ್ರಕ್ರಿಯೆಗಳನ್ನು ದಿನ ಪತ್ರಿಕೆಯಲ್ಲಿ ಪ್ರಕಟಿಸಲು ಪ್ರಕಟಣಾ ವೆಚ್ಚ, ದಾಖಲಾತಿಗಳ ನಿರ್ವಹಣೆ ವೆಚ್ಚ, ರಾಜ್ಯ, ಜಿಲ್ಲಾ ಮಟ್ಟದ ಅಧಿಕಾರಿ/ಸಿಬ್ಬಂದಿಗಳ ಪ್ರಯಾಣ ವೆಚ್ಚ, ರಾಜ್ಯ ಮತ್ತು ಜಿಲ್ಲಾ ಮಟ್ಟದ ಕಛೇರಿಗಳ ಸ್ಟೇಷನರಿ ವೆಚ್ಚ, ಕ್ಷೇತ್ರಗಳಲ್ಲಿ ಉಪಯೋಗಿಸುವ ವಿದ್ಯುತ್ ವೆಚ್ಚ ಮತ್ತು ನೀರಿನ ಕರ, ಯಂತ್ರೋಪಕರಣ ಹಾಗೂ ಜನರೇಟರ್ಗಳಿಗೆ ಇಂಧನ ವೆಚ್ಚ ಮತ್ತು ಇತ್ಯಾದಿ ಸಾದಿಲ್ವಾರು ವೆಚ್ಚಗಳಿಗಾಗಿ ರೂ.26.00 ಲಕ್ಷಗಳನ್ನು ನಿಗದಿಪಡಿಸಿದೆ.

**ಅನುಷ್ಠಾನ ವೇಳಾಪಟ್ಟಿ:**

- ಕ್ಷೇತ್ರದ ಮಣ್ಣು ಮತ್ತು ನೀರು ಸಂರಕ್ಷಣೆಗಾಗಿ ವಿವಿಧ ಚಟುವಟಿಕೆಗಳಾದ ಕಂದಕ (trenching) ಗಳನ್ನು ತೆಗೆಯುವುದು, trench cum bunding, contour bunding, ಇಂಗು ಗುಂಡಿಗಳು, ನಾಲಾಬದು, ಬದುಗಳ ಮೇಲೆ ಸೂಕ್ತ ಗಿಡಗಳನ್ನು ನಾಟಿ ಮಾಡುವುದು, ಜೈವಿಕ ಬೇಲಿ

ನಿರ್ಮಾಣ ಇತ್ಯಾದಿ ಮಣ್ಣು ಮತ್ತು ನೀರು ಸಂಗ್ರಹಣ ಘಟಕಗಳನ್ನುಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಪ್ರಾರಂಭಿಸಿ ಪೂರ್ಣಗೊಳಿಸುವುದು.

- ಹೊಸ ಪ್ರಾತ್ಯಕ್ಷಿಕೆ ಮತ್ತು ವಂಶಾವಳಿ ತಾಕುಗಳ ಅಭಿವೃದ್ಧಿಯನ್ನು ಮೇ ತಿಂಗಳಿನಲ್ಲಿಯೇ ಗುಂಡಿ ತೆಗೆದು ಜೈವಿಕ ಗೊಬ್ಬರ, ಕೊಟ್ಟಿಗೆ ಗೊಬ್ಬರಗಳನ್ನು ಹಾಕಿ ಗಿಡಗಳನ್ನು ಸಂಗ್ರಹಿಸಿ ಜೂನ್ ತಿಂಗಳ ಮಳೆಯ ಆಧಾರದ ಮೇಲೆ ಗಿಡಗಳ ನಾಟಿ ಕಾರ್ಯವು ಆಗಸ್ಟ್ ಮಾಹೆಯ ಅಂತ್ಯದೊಳಗೆ ಪೂರ್ಣಗೊಳಿಸುವುದು.
- ಕ್ಷೇತ್ರ ಮತ್ತು ನರ್ಸರಿಗಳಿಗೆ ಹನಿ ನೀರಾವರಿ ಅಳವಡಿಕೆ ಕೆಲಸಗಳನ್ನು ಏಪ್ರಿಲ್ ತಿಂಗಳಿನಲ್ಲಿಯೇ ಟೆಂಡರ್ ಕರೆದು ಕಾಮಗಾರಿಯನ್ನು ಮೇ ತಿಂಗಳಿನಲ್ಲಿಯೇ ಪೂರ್ಣಗೊಳಿಸುವುದು.
- ಪಾಲಿಹೌಸ್, ನೆರಳುಪರದೆ ನಿರ್ಮಾಣ, ದುರಸ್ಥಿ ಕೆಲಸಗಳನ್ನು ಮೇ ಮಾಹೆಯ ಅಂತ್ಯದೊಳಗೆ ನಿಯಮಾನುಸಾರ ಪೂರ್ಣಗೊಳಿಸುವುದು.
- ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸಲು ಅಂತರ ಬೇಸಾಯ, ಮಿಶ್ರಬೆಳೆ, gap filling, ವಯಸ್ಸಾದ ಮತ್ತು ಅನುತ್ಪಾದಕ ಮರಗಳ ಪುನಶ್ಚೇತನ, ಸಮಗ್ರ ಪೋಷಕಾಂಶಗಳ/ಕೀಟ ಮತ್ತು ರೋಗಗಳ ನಿರ್ವಹಣೆ ಇತ್ಯಾದಿ ಚಟುವಟಿಕೆಗಳನ್ನು ನಿಗದಿತ ಸಮಯದಲ್ಲಿಯೇ ಪೂರ್ಣಗೊಳಿಸುವುದು.
- ಕ್ಷೇತ್ರದ ಸಸ್ಯ ಸಂಪತ್ತಿನ ಪೋಷಕಾಂಶ ನಿರ್ವಹಣೆ ಕೆಲಸಗಳನ್ನು ಮುಂಗಾರು ಮಳೆಯ ಸಮಯದಲ್ಲಿ ಮೊದಲನೇ ಕಂತಿನ ಪ್ರಮಾಣವನ್ನು ಮೇ-ಜೂನ್ ಮಾಹೆಗಳಲ್ಲಿ ಹಾಗೂ ಹಿಂಗಾರು ಮಳೆಯ ಸಮಯದಲ್ಲಿ ಎರಡನೇ ಕಂತಿನ ಪ್ರಮಾಣವನ್ನು ಸೆಪ್ಟಂಬರ್- ಅಕ್ಟೋಬರ್ ಮಾಹೆಗಳಲ್ಲಿ ನೀಡುವುದು.
- ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಹಸಿರೆಲೆ ಗೊಬ್ಬರ ಬೆಳೆಗಳ ಬೀಜ ಖರೀದಿಸಿ, ಉಳುಮೆ ಮಾಡಿ, ಬಿತ್ತನೆ ಮಾಡುವುದು, ಗಿಡಗಳಿಗೆ ಪಾತಿ ಮಾಡುವುದು, ಸಮಗ್ರ ಕೀಟ/ರೋಗ/ಪೋಷಕಾಂಶ ನಿರ್ವಹಣೆಗಾಗಿ ಸೂಕ್ತ ಪರಿಕರಗಳ ಸಂಗ್ರಹಣೆ ಹೊಸ ತಳಿಗಳ ಪ್ರದೇಶ ವಿಸ್ತರಣೆ, ಮೇವು ಬೆಳೆಗಳ ಬೀಜ ಖರೀದಿ, ಕಳೆ ನಿಯಂತ್ರಣ ಜೈವಿಕ ಪರಿಕರಗಳ ಉತ್ಪಾದನೆ ಇತ್ಯಾದಿಗಳನ್ನು ಮೇ-ಜೂನ್ ಮಾಹೆಯಲ್ಲಿ ಕೈಗೊಳ್ಳುವುದು.
- ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳಾದ ವರ್ಮಿಕಾಂಪೋಸ್ಟ್/ಬಯೋಡೈಜೆಸ್ಟರ್, ಬೆಂಕಿ ಸಂರಕ್ಷಣಾ ವಲಯ ನಿರ್ಮಾಣ, ನೀರು ನಿರ್ವಹಣೆ, ಕಾಂಪೌಂಡ್ ದುರಸ್ಥಿ, ತಂತಿಬೇಲಿ ದುರಸ್ಥಿ, ಹಸಿರುಮನೆ/ನೆರಳುಪರದೆ ರಿಪೇರಿ, ಕಟ್ಟಡ ದುರಸ್ಥಿ, ಯಂತ್ರಗಳ ದುರಸ್ಥಿ ಇತ್ಯಾದಿ ಕೆಲಸಗಳನ್ನು ಜೂನ್-ಆಗಸ್ಟ್ ಮಾಹೆಯಲ್ಲಿ ಕೈಗೊಳ್ಳುವುದು.
- ಕ್ಷೇತ್ರಗಳಲ್ಲಿರುವ ವಿದ್ಯುತ್ ಬಿಲ್, ಕಸಿ/ಸಸಿಗಳ ರೀ ಬ್ಯಾಗಿಂಗ್, ಜಾನುವಾರುಗಳ ನಿರ್ವಹಣೆ ಮತ್ತು ವಿಮೆ, ಮೇಲ್ಲಾವಣಿ ನಿರ್ವಹಣೆ, ಮೇವು ಬೆಳೆಗಳ ಅಭಿವೃದ್ಧಿ ಕಾರ್ಯವನ್ನು ಆಗಸ್ಟ್ ಮಾಹೆಯ ಅಂತ್ಯದೊಳಗೆ ಕೈಗೊಳ್ಳುವುದು.
- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಸಹಾಯಕ ತೋಟಗಾರಿಕೆ ನಿರ್ದೇಶಕರು, ಸಹಾಯಕ ತೋಟಗಾರಿಕೆ ಅಧಿಕಾರಿ, ತೋಟಗಾರಿಕೆ ಸಹಾಯಕರು ರವರುಗಳಿಗೆ ತೋಟಗಾರಿಕೆ ಕ್ಷೇತ್ರಗಳ ಪಾಲನೆ ಅಭಿವೃದ್ಧಿ ಮತ್ತು ನಿರ್ವಹಣೆ, ಸಸ್ಯಾಭಿವೃದ್ಧಿ ಹಾಗೂ ಕ್ಷೇತ್ರ ಮಟ್ಟದ ದಾಖಲಾತಿಗಳ ಸಮರ್ಪಕ ನಿರ್ವಹಣೆ ಹಾಗೂ ಕರ್ತವ್ಯಗಳ ಬಗ್ಗೆ ತಂತ್ರಜ್ಞರಿಂದ ಹಾಗೂ ಸಂಬಂಧಿಸಿದ ವಿಷಯಗಳ ವಿಜ್ಞಾನಿಗಳಿಂದ ನೂತನ ತಾಂತ್ರಿಕತೆಗಳ ಬಗ್ಗೆ ತರಬೇತಿ ನೀಡಲಾಗುವ ತರಬೇತಿ ಕಾರ್ಯಕ್ರಮವನ್ನು ಜೂನ್ ತಿಂಗಳಲ್ಲಿ ಪ್ರಾರಂಭಿಸಿ ಸೆಪ್ಟಂಬರ್ ಮಾಹೆಯ ಅಂತ್ಯದೊಳಗೆ ಕೈಗೊಳ್ಳುವುದು.

### ಯೋಜನೆಯ ಒಟ್ಟಾರೆ ಅನುದಾನ

| ಕ್ರ.ಸಂ | ಕಾರ್ಯಕ್ರಮ | ನಿಗದಿಪಡಿಸಿರುವ ಅನುದಾನ (ರೂ. ಲಕ್ಷಗಳಲ್ಲಿ) | ಭೌತಿಕ ಗುರಿ |
|---|---|---|---|
| 1 | 2017-18 ನೇ ಸಾಲಿನಲ್ಲಿ ಅಭಿವೃದ್ಧಿಗೊಳಿಸಲಾದ 30 ಮಾದರಿ ಕ್ಷೇತ್ರಗಳು ಹಾಗೂ 2018-19 ನೇ ಸಾಲಿನ 40 ಮಾದರಿ ಕ್ಷೇತ್ರಗಳ ನಿರ್ವಹಣೆ 2019-20 ನೇ ಸಾಲಿಗೆ 30 ಕ್ಷೇತ್ರಗಳನ್ನು ಮಾದರಿ ತೋಟಗಾರಿಕೆ ಕ್ಷೇತ್ರಗಳನ್ನಾಗಿ ಅಭಿವೃದ್ಧಿಪಡಿಸುವುದು. | 1000.00 | 100 ಸಂಖ್ಯೆ |
| 2 | ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ನಿರ್ವಹಣೆ | 264.00 | 550 ಹೆಕ್ಟೇರ್ |
| 3 | ಕ್ಷೇತ್ರ ಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ | 10.00 | 10 ಸಂಖ್ಯೆ |
| 4 | ಸಾದಿಲ್ವಾರು ವೆಚ್ಚ (ಸಸ್ಯ ಸಂತೆ ಆಯೋಜನೆ, ಸಾಗಾಣಿಕೆ ವೆಚ್ಚ, ಪುಸ್ತಕ/ಮಾಹಿತಿಗಳ ಪ್ರಕಟಣೆ, ಪ್ರಯಾಣ ವೆಚ್ಚ, ಸ್ಟೇಷನರಿ ವೆಚ್ಚ, ವಿದ್ಯುತ್ ವೆಚ್ಚ, ನೀರಿನ ಕರ, ಇಂಧನ ವೆಚ್ಚ, ಇತ್ಯಾದಿ ಸಾದಿಲ್ವಾರು ವೆಚ್ಚ. | 26.00 | - |
| | ಒಟ್ಟು | **1300.00** | |

ಫಲಶೃತಿ:

1. ಸ್ಥಳೀಯವಾಗಿ ಬೇಡಿಕೆ ಇರುವ ಉತ್ತಮ ಗುಣಮಟ್ಟದ ಕಸಿ/ಸಸಿಗಳ ಸಸ್ಯೋತ್ಪಾದನೆಯನ್ನು ಕೈಗೊಂಡು ರೈತರಿಗೆ ಇಲಾಖಾ ದರಗಳಲ್ಲಿ ಸರಬರಾಜು ಮಾಡುವುದರಿಂದ ರೈತರು ಬೆಳೆಗಳನ್ನು ತಮ್ಮ ಜಮೀನಿನಲ್ಲಿ ಬೆಳೆದು ಅವರ ಆದಾಯ ಮಟ್ಟ ಸುಧಾರಿಸುವುದು.
2. ತೋಟಗಾರಿಕೆ ಬೆಳೆಗಳ ಹೊಸ ತಳಿಗಳನ್ನು ಪರಿಚಯಿಸುವುದು ಮತ್ತು ಹೊಸ ತಾಂತ್ರಿಕತೆಗಳ ಅನುಷ್ಠಾನ ಮತ್ತು ರೈತರು/ಸಾರ್ವಜನಿಕರಿಗೆ ಮಾದರಿ ತೋಟಗಾರಿಕೆ ಕಲಿಕಾ ಕೇಂದ್ರಗಳನ್ನಾಗಿ ಮಾಡುವುದರಿಂದ ರೈತರು ತಮ್ಮ ಜಮೀನಿನಲ್ಲಿ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ತಮ್ಮ ಆದಾಯ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಸಹಾಯವಾಗುವುದು.
3. ಕಿರು ಜಲಾನಯನ ಮಾದರಿಯಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆ ಚಟುವಟಿಕೆಗಳನ್ನು ಮಾದರಿ ಕ್ಷೇತ್ರಗಳಲ್ಲಿ ಹಮ್ಮಿಕೊಳ್ಳುವುದರಿಂದ ನೀರಿನ ಸೌಲಭ್ಯವನ್ನು ವೃದ್ದಿಗೊಳಿಸಬಹುದು. ಸದರಿ ತಾಂತ್ರಿಕತೆಯನ್ನು ರೈತರು ತಮ್ಮ ಜಮೀನುಗಳಲ್ಲಿ ಅಳವಡಿಸಿಕೊಳ್ಳುವುದರಿಂದ ಒಟ್ಟಾರೆ ಅಂತರ್ಜಲ ಮಟ್ಟವನ್ನು ವೃದ್ಧಿಸಲು ಸಹಾಯವಾಗುತ್ತದೆ.
4. ಮಾದರಿ ಕ್ಷೇತ್ರಗಳಲ್ಲಿ ಅಂತರ ಬೇಸಾಯ, ಮಿಶ್ರಬೆಳೆ, Gap filling, ವಯಸ್ಸಾದ ಮತ್ತು ಅನುತ್ಪಾದಕ ಮರಗಳ ಪುನಶ್ಚೇತನ, ಸಮಗ್ರ ಪೋಷಕಾಂಶ/ಕೀಟ ಮತ್ತು ರೋಗಗಳ ನಿರ್ವಹಣೆ, ಮಣ್ಣು ಮತ್ತು ನೀರಿನ ವಿಶ್ಲೇಷಣೆ ಆಧಾರದ ಮೇಲೆ ಸೂಕ್ತ ಪೋಷಕಾಂಶಗಳನ್ನು ಒದಗಿಸುವುದು. ಇದಲ್ಲದೆ, ಕ್ಷೇತ್ರದಲ್ಲಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಹಾಲಿ ಇರುವ ಮೂಲಭೂತ ಸೌಕರ್ಯಗಳನ್ನು ಸಮರ್ಪಕ ಸದ್ಬಳಕೆ ಮಾಡಿಕೊಳ್ಳುವುದರಿಂದ ಕ್ಷೇತ್ರದ ಒಟ್ಟಾರೆ ಹೆಚ್ಚಿನ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಮುಂದಿನ ವರ್ಷಗಳಲ್ಲಿ ಸುಧಾರಿಸಲು ಸಹಾಯವಾಗುವುದು.

**2019-20** ನೇ ಸಾಲಿನಲ್ಲಿ ಕೃಷಿ ಕ್ಷೇತ್ರ ಮತ್ತು ಸಸ್ಯಾವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಗೆ ಲೆಕ್ಕಶೀರ್ಷಿಕೆ**: 2401-00-119-4-05** ಅಡಿ ಒಟ್ಟು ರೂ**.1300.00** ಲಕ್ಷಗಳ ಅನುದಾನವನ್ನು ಒದಗಿಸಿದೆ**.**

## 10. ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ
## Development of Departmental Laboratories
## ಲೆಕ್ಕ ಶೀರ್ಷಿಕೆ: 2401-00-119-5-01
## ನಿಗದಿಪಡಿಸಿರುವ ಅನುದಾನ: ರೂ.705.00 ಲಕ್ಷಗಳು

| | | |
|---|---|---|
| 002 | ವೇತನ -ಅಧಿಕಾರಿಗಳು | 101.00 |
| 003 | ವೇತನ - ಸಿಬ್ಬಂದಿ | 52.00 |
| 011 | ತುಟ್ಟಿ ಭತ್ಯೆ | 17.00 |
| 014 | ಇತರೆ ಭತ್ಯೆ | 19.00 |
| 020 | ವೈದ್ಯಕೀಯ ಭತ್ಯೆ | 1.00 |
| 021 | ವೈದ್ಯಕೀಯ ವೆಚ್ಚದ ಮರುಪಾವತಿ | 15.00 |
| 041 | ಪ್ರಯಾಣ ವೆಚ್ಚಗಳು | 2.00 |
| 200 | ನಿರ್ವಹಣಾ ವೆಚ್ಚ | 498.00 |
| | ಒಟ್ಟು | **705.00** |

ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ ಯೋಜನೆಯಡಿ, ಇಲಾಖೆಯ ಹಲವು ಪ್ರಯೋಗಶಾಲೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಈ ಎಲ್ಲಾ ಪ್ರಯೋಗಶಾಲೆಗಳು ತೋಟಗಾರಿಕೆಯ ಒಟ್ಟಾರೆ ಅಭಿವೃದ್ಧಿಗೆ ಪೂರಕವಾಗಿದ್ದು, ರೈತರಿಗೆ ಉಪಯುಕ್ತವಾಗಿವೆ. ತೋಟಗಾರಿಕೆ ಇಲಾಖೆಯ ಹುಳಿಮಾವು ಬಯೋಟೆಕ್ನಾಲಜಿ ಕೇಂದ್ರ, ಶಿವಮೊಗ್ಗ ಜೈವಿಕ ಕೇಂದ್ರ ಮತ್ತು ಬೆಳಗಾವಿ ಜೈವಿಕ ಕೇಂದ್ರದಲ್ಲಿ ಅತ್ಯಾಧುನಿಕ ಅಂಗಾಂಶ ಕೃಷಿ ಪ್ರಯೋಗಶಾಲೆಯನ್ನು ಸ್ಥಾಪಿಸಲಾಗಿದ್ದು, ಉತ್ಕೃಷ್ಟ ಗುಣಮಟ್ಟದ ಬಾಳೆ ಸಸ್ಯಾಭಿವೃದ್ಧಿಯನ್ನು ಬೃಹತ್ ಪ್ರಮಾಣದಲ್ಲಿ ಹಾಗೂ ಕೆಲವು ಅಲಂಕಾರಿಕ ಗಿಡಗಳ ಸಸ್ಯಾಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದೆ. ವರ್ಷದಿಂದ ವರ್ಷಕ್ಕೆ ಅಂಗಾಂಶ ಕೃಷಿ ಬಾಳೆ ಸಸಿಗಳಿಗೆ ರೈತರಿಂದ ಬೇಡಿಕೆ ಹೆಚ್ಚಾಗುತ್ತಿದೆ. ಪ್ರಯೋಗಶಾಲೆಯಲ್ಲಿ ಸೌಲಭ್ಯಗಳನ್ನು ವಿಸ್ತರಿಸುವ ಹಾಗೂ ಹೆಚ್ಚಿನ ಮಟ್ಟದ ಸಸ್ಯೋತ್ಪಾದನೆ ಚಟುವಟಿಕೆಗಳನ್ನು 2019-20ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಂದುವರೆದು, ಈ ಕೇಂದ್ರದಲ್ಲಿ ಸಸ್ಯ ಪೋಷಕಾಂಶ ಪ್ರಯೋಗಶಾಲೆಯಲ್ಲಿ ಮಣ್ಣು, ನೀರು ಮತ್ತು ಎಲೆ ಮಾದರಿಗಳ ವಿಶ್ಲೇಷಣೆಯನ್ನು ಕೈಗೊಂಡು, ರೈತರಿಗೆ ಸೂಕ್ತ ಸಲಹೆಗಳನ್ನು ನೀಡಲಾಗುತ್ತಿದೆ. ಅಲ್ಲದೇ, ಸೂಕ್ಷ್ಮ ಜೀವಿ ಪ್ರಯೋಗಶಾಲೆ, ಜೈವಿಕ ಗೊಬ್ಬರ/ನಿಯಂತ್ರಕಗಳ ಉತ್ಪಾದನೆ ಹಾಗೂ ಗುಣಮಟ್ಟ ನಿಯಂತ್ರಣ, ತೋಟಗಾರಿಕೆ ಬೆಳೆಗಳಲ್ಲಿ ಕೀಟ/ರೋಗನಾಶಕಗಳ ಶೇಷ ವಿಶ್ಲೇಷಣೆ ಕಾರ್ಯಗಳನ್ನು ಸಹ ಈ ಯೋಜನೆ ಅಡಿಯಲ್ಲಿ ಬಾಹ್ಯ ಮೂಲದಿಂದ ಹೆಚ್ಚುವರಿ ತಾಂತ್ರಿಕ ಸಿಬ್ಬಂದಿಯ ಸೇವೆಯನ್ನು ಪಡೆದು ಕೈಗೊಳ್ಳಲಾಗುತ್ತಿದೆ.

ಇದೇ ರೀತಿ, ಬಿಜಾಪುರ ಮತ್ತು ಬೀದರ್ ನಲ್ಲಿ ಸಸ್ಯ ಪೋಷಕಾಂಶ ಪ್ರಯೋಗಶಾಲೆಯಲ್ಲಿ ಮಣ್ಣು, ನೀರು ಮತ್ತು ವಿವಿಧ ತೋಟಗಾರಿಕೆ ಬೆಳೆಗಳ ಎಲೆ ವಿಶ್ಲೇಷಣೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಆ ಭಾಗದ ರೈತರಿಗೆ ಸೂಕ್ತ ಸಲಹೆಗಳನ್ನು ನೀಡಲಾಗುತ್ತಿದೆ. ಉತ್ತರ ಕರ್ನಾಟಕ ಭಾಗದ ರೈತರಿಗೆ ಪ್ರಯೋಜನವಾಗುವಂತೆ, ಬೆಂಗಳೂರಿನ ಜೈವಿಕ ಕೇಂದ್ರದ ಮಾದರಿಯಲ್ಲಿ ಬೆಳಗಾವಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ನಿರ್ಮಿಸಲಾಗಿರುವ ಜೈವಿಕ ಕೇಂದ್ರದಲ್ಲಿ ಅಂಗಾಂಶ ಕೃಷಿ ಸಸ್ಯೋತ್ಪಾದನೆ, ಮಣ್ಣು, ನೀರು ಮತ್ತು ಎಲೆ ವಿಶ್ಲೇಷಣೆ, ಜೈವಿಕ ಗೊಬ್ಬರ ಉತ್ಪಾದನೆ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ ಹಾಗೂ ಪ್ರಸ್ತುತ ಸಾಲಿನಲ್ಲಿ ಬೀದರ್ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ ಜೈವಿಕ ಕೇಂದ್ರದಲ್ಲಿ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸುವ ಉದ್ದೇಶವಿರುತ್ತದೆ. ಮೈಸೂರು ಜಿಲ್ಲೆಯಲ್ಲಿ ಅಣಬೆ ಪ್ರಯೋಗಶಾಲೆಯ ನಿರ್ವಹಣೆ ಮತ್ತು ಅಣಬೆ ಸ್ಪಾನ್ ಉತ್ಪಾದನಾ ಚಟುವಟಿಕೆಗಳನ್ನು ಸಹ ಈ ಯೋಜನೆ ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ.

**2019-20** ನೇ ಸಾಲಿನ ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ ಯೋಜನೆಯಡಿ **{ಲೆಕ್ಕಶೀರ್ಷಿಕೆ:2401-00-119-5-01}** ಅನುಷ್ಠಾನಾಧಿಕಾರಿಗಳಿಗೆ ಅಗತ್ಯವಿರುವ ವಾರ್ಷಿಕ ಆರ್ಥಿಕ ಮತ್ತು ಭೌತಿಕ ಗುರಿಗಳ ವಿವರಗಳು**.**

**(ರೂ. ಲಕ್ಷಗಳಲ್ಲಿ)**

| ಕ್ರ. ಸಂ | ವಿವರಗಳು | ವಾರ್ಷಿಕ ಆರ್ಥಿಕ ಗುರಿ | |
|---|---|---|---|
| | | ಭೌತಿಕ | ಆರ್ಥಿಕ |
| 1 | ಅಂಗಾಂಶ ಕೃಷಿ ಸಸ್ಯಾಭಿವೃದ್ಧಿ, ಯಂತ್ರೋಪಕರಣಗಳ ಖರೀದಿ/ರಿಪೇರಿ/ಬಾಯ್ಲರ್, ಜನರೇಟರ್ ಮತ್ತು ವಾಹನಗಳ ವಾರ್ಷಿಕ | 5.70 ಲಕ್ಷ ಅಂಗಾಂಶ | 160.00 |

| | | | |
|---|---|---|---|
| | ನಿರ್ವಹಣೆ, ಗಾಜಿನ ಉಪಕರಣಗಳು, ರಾಸಾಯನಿಕಗಳು, ಪ್ರಯೋಗಾಲದ ಪರಿಕರಗಳ ಗ್ರೋಥ್ ರೂಂನ ವಿದ್ಯುಧೀಕರಣ ವ್ಯವಸ್ಥೆಯ ವಾರ್ಷಿಕ ನಿರ್ವಹಣೆ, ನೀರಾವರಿ ವ್ಯವಸ್ಥೆ ನಿರ್ವಹಣೆ, ಗುತ್ತಿಗೆ ಬಾಬ್ತು, ಗುತ್ತಿಗೆ ಆಧಾರದ ಮೇಲೆ ವಾಹನ ಪಡೆಯುವುದು, ಭದ್ರತಾ ಸಿಬ್ಬಂದಿ, ಕಂಪ್ಯೂಟರ್ ಅಪರೇಟರ್, ಕಛೇರಿ ಸಹಾಯಕ/ವಾಹನಚಾಲಕ ಕೆಲಸಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವುದು. ನಿರ್ವಹಣೆ, 2019-20 ನೇ ಸಾಲಿನ ಉಳಿಕೆ ಕೆಲಸಗಳು, Lab Accreditation, ವೈರಸ್ index and fidility testing, ವಿಧ್ಯುಚ್ಛಕ್ತಿ ಬಾಬ್ತು, ಸಿವಿಲ್ ಕಾಮಗಾರಿ, Electrical works, Internal partition ಹಸಿರುಮನೆ ದುರಸ್ಥಿ, ಹವಾನಿಯಂತ್ರಣ ವ್ಯವಸ್ಥೆ ಗುತ್ತಿಗೆ ಆಧಾರದ ಮೇಲೆ JRF/SRF ರವರುಗಳ ತಾಂತ್ರಿಕ ಸೇವೆ ಮತ್ತು ಪ್ರಯೋಗಶಾಲೆ ನಿರ್ವಹಣೆ, ಕೌಶಲ್ಯ ತರಬೇತಿ, Lawn ನಿರ್ವಹಣೆ, ಗುತ್ತಿಗೆ ಆಧಾರದ ಮೇಲೆ ವಾಹನ ಪಡೆಯುವುದು. | ಬಾಳೆಸಸಿ ಉತ್ಪಾದನೆ. | |
| 2 | ಜೈವಿಕ ಗೊಬ್ಬರ, ಜೈವಿಕ ನಿಯಂತ್ರಕಗಳು ಮತ್ತು ಎರೆಹುಳು ಗೊಬ್ಬರ ಉತ್ಪಾದನೆ, ಗುತ್ತಿಗೆ ಆಧಾರದ ಮೇಲೆ JRF/SRF ರವರುಗಳ ತಾಂತ್ರಿಕ ಸೇವೆ, ಎರೆಹುಳು ಉತ್ಪಾದನಾ ಘಟಕ ನಿರ್ಮಾಣ, ಸಾಗಣಿಕೆ ವೆಚ್ಚ, ಜೈವಿಕ ಗೊಬ್ಬರ ಮತ್ತು ನಿಯಂತ್ರಕಗಳ ಉತ್ಪಾದನೆಗೆ ಅಗತ್ಯ ಪರಿಕರಗಳ ಖರೀದಿ, ಯಂತ್ರೋಪಕರಣಗಳ ಖರೀದಿ ವಿಧ್ಯುಚ್ಛಕ್ತಿ ಮತ್ತು ಪ್ರಯೋಗಶಾಲೆ ನಿರ್ವಹಣೆ, ಕೌಶಲ್ಯ ತರಬೇತಿ, ಗುತ್ತಿಗೆ ಆಧಾರದ ಮೇಲೆ ವಾಹನ/ವಾಹನ ಚಾಲಕರನ್ನು ಪಡೆಯುವುದು ಇತ್ಯಾದಿ. | 190 ಟನ್ | 155.00 |
| 3 | ಮಣ್ಣು, ನೀರು, ಎಲೆ, ಸಾವಯವ ಗೊಬ್ಬರ, ಗುಣಮಟ್ಟ, ಸಸ್ಯ ನೈರ್ಮಲೀಕರಣ, ಔಷಧಿ ಮತ್ತು ಸುಗಂಧ ದ್ರವ್ಯ ಬೆಳೆಗಳ ಮಾದರಿ, ಕೀಟನಾಶಕಗಳ ರೆಸಿಡ್ಯೂ ವಿಶ್ಲೇಷಣೆ, ರಾಸಾಯನಿಕಗಳ ಖರೀದಿ, ಯಂತ್ರೋಪಕರಣಗಳ ಖರೀದಿ/ರಿಪೇರಿ/ವಾರ್ಷಿಕ ನಿರ್ವಹಣೆ ಮತ್ತು ಪ್ರಯೋಗಶಾಲೆ ನಿರ್ವಹಣೆ, ಗುತ್ತಿಗೆ ಆಧಾರದ ಮೇಲೆ SRF/JRF/RA ರವರುಗಳ ತಾಂತ್ರಿಕ ಸೇವೆ, NABL ನವದೆಹಲಿ ರವರಿಂದ ಮಾನ್ಯತೆ ಪಡೆಯುವ ವೆಚ್ಚ, 2018-19 ನೇ ಸಾಲಿನ ಉಳಿಕೆ ಬಿಲ್ಲಿನ ಬಾಬ್ತು, ಕೌಶಲ್ಯ ತರಬೇತಿ, ಪ್ರಯೋಗಶಾಲೆ ನಿರ್ವಹಣೆ, CIB ನೋಂದಣಿ ವೆಚ್ಚ, ತಾಂತ್ರಿಕ ಸಲಹೆಗಾರರ ಪ್ರಯಾಣ, ವಸತಿ, ಊಟದ ವೆಚ್ಚ ಮತ್ತು ಇತರೆ ಸಾದಿಲ್ವಾರು ವೆಚ್ಚ ಇತ್ಯಾದಿ. | 23500 ಮಾದರಿ | 75.00 |
| 4 | ಅಣಬೆ ಸ್ಪಾನ್ ಉತ್ಪಾದನೆ/ತರಬೇತಿ, ಅಣಬೆ ಬೆಳೆ ಮತ್ತು ಅಣಬೆ ಬ್ಯಾಗ್, ಸಿವಿಲ್ ಕಾಮಗಾರಿ, ಯಂತ್ರೋಪಕರಣಗಳ ಖರೀದಿ/ರಿಪೇರಿ/ಬೆಳವಣಿಗೆಯ ಕೊಠಡಿಯ ವಿದ್ಯುಧೀಕರಣ ವ್ಯವಸ್ಥೆ, ಕೌಶಲ್ಯ ತರಬೇತಿ, ವಾರ್ಷಿಕ ನಿರ್ವಹಣೆ ಪ್ರಯೋಗಶಾಲೆ ನಿರ್ವಹಣೆ, ಪ್ರಚಾರ ಸಾಮಗ್ರಿಗಳ ಮುದ್ರಣ ಹಾಗೂ ಖರೀದಿ ಇತ್ಯಾದಿ. | 55000 ಸಂಖ್ಯೆ ಸ್ಪಾನ್<br>12000 ಅಣಬೆ ಬ್ಯಾಗ್<br>400 ಕೆ.ಜಿ ಅಣಬೆ ಬೆಳೆ | 45.00 |
| 5 | ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಿರ್ಮಿಸಲಾಗಿರುವ ಏರೋಪೋನಿಕ್ಸ್ ಪ್ರಯೋಗಶಾಲೆಯಲ್ಲಿ ಅಂಗಾಂಶ ಕೃಷಿ ಪದ್ಧತಿಯಲ್ಲಿ ಆಲೂಗಡ್ಡೆ ಬೀಜೋತ್ಪಾದನೆಗೆ ಸಂಬಂಧಿಸಿದಂತೆ ಪ್ರಾರಂಭಿಕ ಹಂತದ ಕ್ರಮಗಳನ್ನು ಗಾಜಿನ ಉಪಕರಣಗಳು, ರಾಸಾಯನಿಕಗಳು, ಪರಿಕರಗಳ ಖರೀದಿ, ಪ್ರಯೋಗಾಲಯದ ಗ್ರೋಥ್ ರೂಂನ ವಿದ್ಯುಧೀಕರಣ, ಶೀಥಲ ಗೃಹದ ವಾರ್ಷಿಕ ನಿರ್ವಹಣೆ, ಗುತ್ತಿಗೆ ಬಾಬ್ತು, ಪ್ರಯೋಗಶಾಲೆ ನಿರ್ವಹಣೆ, ಇತ್ಯಾದಿ. | 0.25 ಲಕ್ಷ ಆಲೂಗಡ್ಡೆ ಅಂ.ಕೃ.ಸಸಿ, G-0: 5.4 ಲಕ್ಷ ಟ್ಯೂಬರ್ಸ | 30.00 |
| 6 | ಬೀಜ ಪರೀಕ್ಷಾ ಪ್ರಯೋಗಾಲಯವು ಲಾಲ್‌ಬಾಗ್ ನಿಂದ ಹುಳಿಮಾವುಗೆ ಇತ್ತಿಚಿಗೆ ಸ್ಥಳಾಂತರಗೊಂಡಿದ್ದು, ಜೈವಿಕ ಕೇಂದ್ರದಲ್ಲಿ ಬೀಜ ಪರೀಕ್ಷೆ ಪ್ರಯೋಗಶಾಲೆಯ ಕೊಠಡಿಗೆ ಶೀಥಲಗೃಹ ಅಳವಡಿಕೆ, ನವೀಕರಣ, ವಿದ್ಯುಧೀಕರಣ, ತರಕಾರಿ ಬೀಜಗಳ ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ, ಯಂತ್ರೋಪಕರಣಗಳ ಖರೀದಿ/ರಿಪೇರಿ ಮತ್ತು ಪ್ರಯೋಗಶಾಲೆ ನಿರ್ವಹಣೆ ಇತ್ಯಾದಿ. | 3000 | 33.00 |
| 7 | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ಒಟ್ಟು **34** ಹುದ್ದೆ. | 53 | |

| | | | |
|---|---|---|---|
| | ವೇತನ, ಇತರೆ ಭತ್ಯೆ ಮತ್ತು ಪ್ರಯಾಣ ಭತ್ಯೆ (ಸ.ತೋ.ನಿ-5, ಸ.ತೋ.ಅ-11, ದ್ವಿ.ದ.ಸ-1, ತೋ.ಸ-14, ಪ್ರದಸ-3, (ಪ್ರಸ್ತುತ ಖಾಲಿ ಇರುವ ಹುದ್ದೆಗಳು ಸ.ತೋ.ಅ-10, ತೋ.ಸ-01, ಪ್ರದಸ-1, ದ್ವಿದಸ-1, ಬೆರಳಚ್ಚುಗಾರರು-1, ವಾಹನ ಚಾಲಕ-1, ತೋಟಗಾರ-2, ಕಾವಲುಗಾರ-2.) ಒಟ್ಟು19 ಖಾಲಿ ಹುದ್ದೆ. | | 207.00 |
| | ಒಟ್ಟುರೂ. | | 705.00 |

ಕಾರ್ಯಕ್ರಮಗಳು:-

1. ಅಂಗಾಂಶ ಕೃಷಿ ಪ್ರಯೋಗಶಾಲೆ
   - ಅಂಗಾಂಶ ಕೃಷಿ ಪ್ರಯೋಗಶಾಲೆಯಡಿ ಅಂಗಾಂಶ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ತೋಟಗಾರಿಕೆ ಬೆಳೆಗಳಾದ ಬಾಳೆ ಮತ್ತು ನೆರಳು ಪರದೆಯಡಿ ವಿವಿಧ ಔಷಧೀಯ ಮತ್ತು ಸುಗಂಧಿತ ಬೆಳೆಗಳ ಹಾಗೂ ಮುಂತಾದ ಗಿಡಗಳನ್ನು ಸಾವಯವ ಉತ್ಪನ್ನಗಳನ್ನು ಬಳಸಿ ಇಲಾಖಾ ನಿಗದಿತ ಉತ್ಪಾದನಾ ವೆಚ್ಚ ಮೀರದಂತೆ ಸಸ್ಯೋತ್ಪಾದನೆಯನ್ನು ಮಾಡಲಾಗುವುದು.
   - ಅಂಗಾಂಶ ಕೃಷಿ ಪದ್ಧತಿ ಹಾಗೂ ಹಸಿರುಮನೆ ತಾಂತ್ರಿಕತೆಯನ್ನು ಅಳವಡಿಸಿ ಅಭಿವೃದ್ಧಿಪಡಿಸಿದ ವಿವಿಧ ತೋಟಗಾರಿಕೆ ಬೆಳೆಗಳ ಉತ್ಕೃಷ್ಟ ಗುಣಮಟ್ಟದ ಸಸಿಗಳನ್ನು ವಿವಿಧ ಇಲಾಖಾ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ವಿತರಿಸುವುದು ಹಾಗೂ ಇಲಾಖಾ ನಿಗದಿತ ದರದಲ್ಲಿ ರೈತರಿಗೆ/ಸಾರ್ವಜನಿಕರಿಗೆ ವಿತರಣೆ ಮಾಡಲಾಗುವುದು.
   - ಅಂಗಾಂಶ ಕೃಷಿ ಪದ್ಧತಿ ಹಾಗೂ ಹಸಿರುಮನೆ ತಾಂತ್ರಿಕತೆ ಅಳವಡಿಸಿ ತೋಟಗಾರಿಕೆ ಬೆಳೆಗಳ ಉತ್ತಮ ಗುಣಮಟ್ಟದ ಸಸಿಗಳನ್ನು ಉತ್ಪಾದಿಸಲು ಪ್ರಯೋಗಶಾಲೆಗೆ ಅಗತ್ಯವಿರುವ ಗಾಜಿನ ಉಪಕರಣಗಳು, ರಾಸಾಯನಿಕಗಳು, ಪರಿಕರಗಳು ಸರ್ಜಿಕಲ್ ಉಪಕರಣಗಳು, ಇತ್ಯಾದಿ ಯಂತ್ರೋಪಕರಣಗಳನ್ನು ಖರೀದಿಸುವಾಗ ಸರ್ಕಾರದ ಪಾರದರ್ಶಿಕೆ ನಿಯಮಾವಳಿಗಳಂತೆ ಪ್ರಕ್ರಿಯೆ ಅನುಸರಿಸಿ ಅನುಮೋದಿತ ಸಂಸ್ಥೆಗಳಿಗೆ ಖರೀದಿಸಲಾಗುವುದು.
   - ಅಂಗಾಂಶ ಕೃಷಿ ಪದ್ಧತಿ ಹಾಗೂ ಹಸಿರುಮನೆ ತಾಂತ್ರಿಕತೆ ಅಳವಡಿಸಿ ಉತ್ಪಾದಿಸುವ ಸಸಿಗಳ ಹಾರ್ಡ್‌ನಿಂಗ್‌ಗೆ ಅಗತ್ಯವಿರುವ ಪರಿಕರಗಳಾದ ಕೆಂಪುಮಣ್ಣು, ಮರಳು, ಕೊಟ್ಟಿಗೆ ಗೊಬ್ಬರ, ಪಾಲಿಬ್ಯಾಗುಗಳು, ಕುಂಡಗಳು ಖರೀದಿಸಿ ಬೆಳೆಸುವುದು.
   - ಅಂಗಾಂಶ ಕೃಷಿ ಪದ್ಧತಿ ಹಾಗೂ ಹಸಿರುಮನೆ ತಾಂತ್ರಿಕತೆ ಅಳವಡಿಸಿ ಉತ್ಪಾದಿಸುವ ಸಸಿಗಳ ಹಾರ್ಡ್‌ನಿಂಗ್‌ಗೆ ಅಗತ್ಯವಿರುವ ಪರಿಕರಗಳಾದ soilrite, ಕೆಂಪುಮಣ್ಣು, ಮರಳು, ಕೊಟ್ಟಿಗೆ ಗೊಬ್ಬರ, ಪಾಲಿಬ್ಯಾಗುಗಳು, ಕುಂಡಗಳು ಇತ್ಯಾದಿಗಳನ್ನು ಟೆಂಡರ್/ದರಪಟ್ಟಿ ಪ್ರಕ್ರಿಯೆ ಅನುಸರಿಸಿ ಖರೀದಿಸುವುದು.
   - ಉತ್ತಮ ಗುಣಮಟ್ಟದ ಸಸಿಗಳನ್ನು ಅಬಿವೃದ್ದಿಪಡಿಸಲು ಸೂಕ್ತ ತಳಿಗಳ ಹಾಗೂ ಉತ್ತಮ ಗುಣಮಟ್ಟದ ತಾಯಿ ಗಿಡಗಳನ್ನು ಅಬಿವೃದ್ದಿಪಡಿಸಿ ನಿರ್ವಹಿಸುವುದು ಹಾಗೂ ಅಂಗಾಂಶ ಕೃಷಿ ಸಸ್ಯೋತ್ಪಾದನೆಗೆ ಅಗತ್ಯವಿರುವ Explant ಹಾಗೂ ಗಿಡಗಳ ಭಾಗಗಳನ್ನು ಲಭ್ಯತೆಗನುಗುಣವಾಗಿ ಈ ತಾಯಿ ಗಿಡಗಳಿಂದ ಪಡೆಯುವುದು.
   - ಸಸ್ಯಾಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಯೋಗಶಾಲೆಗಳು, ಹಸಿರುಮನೆಗಳು, ಯಂತ್ರೋಪಕರಣಗಳು, ಗ್ರೋಥ್‌ರೂಂಗಳ ವಿದ್ಯುದೀಕರಣ ವ್ಯವಸ್ಥೆಯ ಮತ್ತು ಕಛೇರಿ ವಾಹನಗಳ ವಾರ್ಷಿಕ ನಿರ್ವಹಣೆಯನ್ನು ನಿಯಮಾವಳಿಗನುಸಾರವಾಗಿ ಕೈಗೊಳ್ಳುವುದು. ಐಚಿತಿಟಿ ನಿರ್ವಹಣೆ, ಹರ್ಬಲ್ ಗಾರ್ಡನ್ ಅಭಿವೃದ್ಧಿಪಡಿಸುವುದು, ಗುತ್ತಿಗೆ ಆಧಾರದ ಮೇಲೆ ವಾಹನ ಪಡೆಯುವುದು.
   - ಸಸ್ಯಾಭಿವೃದ್ದಿಗೆ ಸಂಬಂಧಿಸಿದಂತೆ ಅಗತ್ಯವಿರುವ ನೀರಿನ ಸೌಕರ್ಯ, ನೀರಿನ ಸಂಗ್ರಹಣೆ, ನೀರಿನ ತೊಟ್ಟಿಗಳ ನಿರ್ಮಾಣಗಳನ್ನು ಉತ್ಪಾದನೆಗೆ ಅನುಗುಣವಾಗಿ ಅಭಿವೃದ್ಧಿಪಡಿಸುವುದು.
   - ಸರ್ಕಾರದ ನಿಯಮಾವಳಿಗನುಗುಣವಾಗಿ ಉತ್ಪಾದನಾ ವೆಚ್ಚ ಮೀರದಂತೆ ಗುತ್ತಿಗೆ ಕೆಲಸಗಳು, ವಿದ್ಯುಚ್ಛಕ್ತಿ, ಬಾಯ್ಲರ್ ಮತ್ತು ಜನರೇಟರ್ ಗಳ ಇಂಧನ, ಪ್ರಯೋಗಶಾಲೆಯ ಭದ್ರತೆ ಇವುಗಳ ವೆಚ್ಚವನ್ನು ಭರಿಸಿ ಸಸ್ಯೋತ್ಪಾದನೆಯನ್ನು ಕೈಗೊಳ್ಳುವುದು.
   - ಅಂಗಾಂಶ ಕೃಷಿ ಪದ್ಧತಿ ಹಾಗೂ ಹಸಿರುಮನೆ ತಾಂತ್ರಿಕತೆ ಅಳವಡಿಸಿ ಉತ್ಪಾದಿಸುವ ಉತ್ತಮಗುಣಮಟ್ಟದ ಸಸಿಗಳನ್ನು ಇಲಾಖಾ ಯೋಜನೆಗಳಿಗೆ, ರೈತರಿಗೆ/ಸಾರ್ವಜನಿಕರಿಗೆ ಇಲಾಖಾ ನಿಗದಿತ ದರಗಳಲ್ಲಿ ಮಾರಾಟ ಮಾಡುವುದು.

- ವಿದ್ಯಾರ್ಥಿಗಳಿಗೆ ಹಾಗೂ ಸಣ್ಣ ಉದ್ದಿಮೆದಾರರಿಗೆ ಅಂಗಾಂಶ ಕೃಷಿ ಪದ್ಧತಿ ಬಗ್ಗೆ ಪ್ರಾಯೋಗಿಕ ತರಬೇತಿ ನೀಡುವುದು.

**2.** ಡಿ.ಎನ್.ಎ ಫಿಂಗರ್ ಪ್ರಿಂಟಿಂಗ್ ಪ್ರಯೋಗಶಾಲೆ

- ವಂಶಾವಳಿಗಳ ದಾಖಲಾತಿಗೆ ಸಂಬಂಧಿಸಿದಂತೆ ಅವುಗಳ ಮಾಲಿಕ್ಯುಲಾರ್ ಮಾರ್ಕರ್ ಗಳನ್ನು ಅಭಿವೃದ್ಧಿಪಡಿಸಿ ದಾಖಲಾತಿ ಮಾಡುವುದು ಹಾಗೂ ಇದಕ್ಕೆ ಅಗತ್ಯವಿರುವ ಡಿ.ಎನ್.ಎ.ಫಿಂಗರ್ ಪ್ರಿಂಟಿಂಗ್ ಪ್ರಯೋಗಶಾಲೆಗೆ ಅಗತ್ಯವಿರುವ ಯಂತ್ರೋಪಕರಣಗಳು, ಗಾಜಿನ ಉಪಕರಣಗಳು, ರಾಸಾಯನಿಕಗಳು, ಡಿ.ಎನ್.ಎ.ಕಿಟ್‌ಗಳು, ಇತರೆ ಪರಿಕರಗಳನ್ನು ನಿಯಮಾನುಸಾರ ಅನುಸರಿಸಿ ಖರೀದಿಸುವುದು.
- ಅಂಗಾಂಶ ಕೃಷಿ ಪದ್ಧತಿಯಲ್ಲಿ ಅಭಿವೃದ್ಧಿಪಡಿಸುವ ಗಿಡಗಳ ವೈರಾಣು ರೋಗಗಳನ್ನು ಗುರುತಿಸಲು ಅಗತ್ಯವಿರುವ ಯಂತ್ರೋಪಕರಣಗಳು, ಗಾಜಿನ ಉಪಕರಣಗಳು, ರಾಸಾಯನಿಕಗಳು, ವೈರಸ್ ಇಂಡೆಕ್ಸಿಂಗ್ ಕಿಟ್‌ಗಳು, ಇತರೆ ಪರಿಕರಗಳನ್ನು ಟೆಂಡರ್ ಪ್ರಕ್ರಿಯೆ ಅನುಸರಿಸಿ ಸರ್ಕಾರಿ ನಿಯಮಾವಳಿಗನುಸಾರವಾಗಿ ಖರೀದಿಸುವುದು.
- ತೋಟಗಾರಿಕೆ ಬೆಳೆಗಳ ವಂಶಾವಳಿಗಳ ಭೌಗೋಳಿಕ ಪ್ರದೇಶ, ತಳಿಗಳ ಬಗ್ಗೆ ವಿವರ, ಸಸ್ಯ ಬೆಳವಣಿಗೆ, ಬೆಳೆ ನಿರ್ವಹಣೆ, ಉಪಯೋಗ, ವಾಣಿಜ್ಯ ಪ್ರಾಮುಖ್ಯತೆ ಬಗ್ಗೆ ಮಾಹಿತಿಯನ್ನು ಪಡೆದು ದಾಖಲಾತಿ ಮಾಡುವುದು.
- ವಂಶಾವಳಿಗಳ ದಾಖಲಾತಿಗೆ ಅಗತ್ಯವಿರುವ ಸಾಮಗ್ರಿಗಳು, ನಾಮಫಲಕಗಳು, ಪರಿಕರಗಳನ್ನು ನಿಯಮಾವಳಿಗಳನ್ವನುಸರಿಸಿ ಖರೀದಿಸುವುದು.
- ಜೈವಿಕ ತಂತ್ರಜ್ಞಾನ ವಿಷಯದ ಬಗ್ಗೆ ಅಧ್ಯಯನ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳಿಗೆ ಡಿ.ಎನ್.ಎ.ಪಿಂಗರ್ ಪ್ರಿಂಟಿಂಗ್ ಬಗ್ಗೆ ಸೂಕ್ತ ತರಬೇತಿ ನೀಡುವುದು.
- ಅಂಗಾಂಶ ಕೃಷಿ ಗಿಡಗಳಲ್ಲಿ ಪ್ರಾರಂಭಿಕ ಹಂತದಲ್ಲಿಯೇ ವೈರಾಣು ರೋಗಗಳನ್ನು ಗುರುತಿಸಿ ಪ್ರಯೋಗಶಾಲಾ ಮಟ್ಟದಲ್ಲಿ ಬೇರ್ಪಡಿಸಿ ರೋಗರಹಿತ ಉತ್ತಮ ಗುಣಮಟ್ಟದ ಸಸಿಗಳನ್ನು ಅಬಿವೃದ್ಧಿಪಡಿಸುವುದು ಹಾಗು ಈ ಸೌಲಭ್ಯವನ್ನು ವಿವಿಧ ಸರ್ಕಾರಿ / ಖಾಸಗಿ ಪ್ರಯೋಗಾಲಯಗಳಿಗೆ ಇಲಾಖಾ ನಿಗದಿತ ದರದಂತೆ ನೀಡುವುದು.

ಸಸ್ಯ ಪೋಷಕಾಂಶ ಪ್ರಯೋಗಶಾಲೆ

- ಮಣ್ಣು, ನೀರು ಹಾಗೂ ಎಲೆ ಹಾಗೂ ಬಾರಿ ಲೋಹಗಳ ಮಾದರಿಗಳ ವಿಶ್ಲೇಷಣೆಗೆ ಅಗತ್ಯವಿರುವ ಉಪಕರಣಗಳು, ರಾಸಾಯನಿಕಗಳು ಹಾಗೂ ಗಾಜಿನ ಸಲಕರಣೆಗಳನ್ನು ದರಪಟ್ಟಿ/ಟೆಂಡರ್ ಕರೆದು ಖರೀದಿ ನಿಯಮಗಳನ್ನು ಪಾಲಿಸಿ ಅಗತ್ಯತೆಗನುಗುಣವಾಗಿ ಖರೀದಿಸುವುದು.
- ಪ್ರಯೋಗಶಾಲೆಯಲ್ಲಿರುವ ಎಲ್ಲಾ ಯಂತ್ರೋಪಕರಣಗಳನ್ನು ಅಗತ್ಯಕ್ಕನುಗುಣವಾಗಿ ವಾರ್ಷಿಕ ನಿರ್ವಹಣೆ ಹಾಗೂ ಇತರೆ ದುರಸ್ತಿಗಳನ್ನು ದರಪಟ್ಟಿ/ಟೆಂಡರ್ ಕರೆದು ನಿಯಮಾನುಸಾರ ಕೆಲಸಗಳನ್ನು ಕೈಗೊಳ್ಳುವುದು, ಗುತ್ತಿಗೆ ಆಧಾರದ ಮೇಲೆ ವಾಹನ ಪಡೆಯುವುದು.
- ಪ್ರಯೋಗಶಾಲೆಗೆ ರೈತರಿಂದ ಬರುವ ಮಣ್ಣು, ನೀರು ಹಾಗೂ ಎಲೆ ಮಾದರಿಗಳ ವಿಶ್ಲೇಷಣೆಗೆ ಇಲಾಖೆಯು ನಿಗದಿಪಡಿಸಿರುವ ಶುಲ್ಕವನ್ನು ವಿದಿಸಿ ವಿಶ್ಲೇಷಣಾ ಕಾರ್ಯವನ್ನು ಮಾಡಲಾಗುವುದು.
- ರೈತರಿಂದ ಬರುವ ಮಣ್ಣು ಮಾದರಿಗಳಲ್ಲಿ ರೈತರ ಅಗತ್ಯಗಳಿಗನುಸಾರವಾಗಿ ಪಿ.ಹೆಚ್, ಇಸಿ, ಸಾರಜನಕ, ರಂಜಕ, ಪೊಟ್ಯಾಷ್ ಹಾಗೂ ಸೂಕ್ಷ್ಮಪೋಷಕಾಂಶಗಳಾದ ಕಬ್ಬಿಣ, ಸತು, ತಾಮ್ರ, ಬೋರಾನ್ ಮತ್ತು ಮ್ಯಾಂಗನೀಸ್‌ಗಳ ವಿಶ್ಲೇಷಣೆ ಮಾಡಿ ವಿಶ್ಲೇಷಣೆ ಆಧಾರದ ಮೇಲೆ ಬೆಳೆಗಳಿಗೆ ಸೂಕ್ತ ಶಿಪಾರಸು ಮಾಡುವುದು.
- ನೀರು ಮಾದರಿಗಳಲ್ಲಿ ಪಿಹೆಚ್, ಇ.ಸಿ, ಸೋಡಿಯಂ, ಕಾರ್ಬೋನೇಟ್ಸ್, ಬೈಕಾರ್ಬೋನೇಟ್ಸ್ ಮತ್ತು ಕ್ಲೋರೈಡ್ಸ್ ಅಂಶಗಳನ್ನು ವಿಶ್ಲೇಷಿಸಿ ವರದಿಗಳನ್ನು ಸಲ್ಲಿಸುವುದು. ಎಲೆ ಮಾದರಿಗಳಲ್ಲಿ ಪ್ರಧಾನ ಪೋಷಕಾಂಶಗಳು ಹಾಗೂ ಲಘುಪೋಷಕಾಂಶಗಳ ವಿಶ್ಲೇಷಣೆ ಮಾಡಿ ವರದಿ ನೀಡುವುದು.
- ಪ್ರಯೋಗಶಾಲೆ ನಿರ್ವಹಣೆ, ವಿದ್ಯುಚ್ಛಕ್ತಿ ವೆಚ್ಚ, ಇತರೆ ವೆಚ್ಚ ಇವುಗಳನ್ನು ಎಂಪಿಕ್ ನಲ್ಲಿ ನಿಗದಿಪಡಿಸಿದಂತೆ ಕ್ರಮ ಕೈಗೊಳ್ಳುವುದು.
- ಜೈವಿಕ ಗೊಬ್ಬರಗಳಾದ ಸಾರಜನಕ ಸ್ಥಿರೀಕರಿಸುವ ಅಜೋಸ್ಪಿರಲಂ, ರಂಜಕವನ್ನು ಕರಗಿಸುವ ಪಿ.ಎಸ್.ಎಂ. ನ್ನು ಉತ್ಪಾದಿಸುವುದು.

- ತೋಟಗಾರಿಕಾ ಬೆಳೆಗಳಲ್ಲಿ ಶಿಲೀಂದ್ರಗಳಿಂದಾಗುವ ಸೊರಗು ರೋಗವನ್ನು ನಿಯಂತ್ರಿಸಲು ಉಪಯೋಗಿಸುವ ಜೈವಿಕ ರೋಗ ನಿಯಂತ್ರಕ ಶಿಲೀಂದ್ರವಾದ ಟ್ರೈಕೋಡರ್ಮಾ, ಬ್ಯಾಕ್ಟೀರಿಯಾದಿಂದ ಉಂಟಾಗುವ ಸೊರಗು ರೋಗವನ್ನು ನಿಯಂತ್ರಿಸಲು ಜೈವಿಕ ರೋಗನಿಯಂತ್ರಕ ಬ್ಯಾಕ್ಟೀರಿಯವಾದ ಸುಡೋಮೋನಾಸ್ ಫ್ಲುರೋಸೆನ್ಸ್‌ನ್ನು ತಯಾರಿಸುವುದು.
- ಜೈವಿಕ ಗೊಬ್ಬರ, ಜೈವಿಕ ರೋಗ ನಿಯಂತ್ರಕಗಳ ವಿಶ್ಲೇಷಣೆಗೆ ಈಗಾಗಲೇ ಸಮಿತಿ ಶಿಫಾರಸ್ಸು ಮಾಡಿರುವ ಗುಣಮಟ್ಟ ಪರಿಮಾಣಗಳಾದ ಪಿ.ಹೆಚ್. ತೇವಾಂಶ ಹಾಗೂ ಸಾರಜನಕ ಸ್ಥಿರೀಕರಿಸುವ ಸೂಕ್ಷ್ಮಾಣು ಜೀವಿಗಳಾದ ಅಜೋಸ್ಪಿರಿಲಂ, ಅಜಟೋಬ್ಯಾಕ್ಟರ್, ರಂಜಕವನ್ನು ಕರಗಿಸುವ ಸೂಕ್ಷ್ಮಾಣು ಜೀವಿಗಳಾದ ಬ್ಯಾಸಿಲಸ್ ಮೆಗಥೆರಿಯಮ್, ಹಾಗೂ ಆಸ್ಪರಿಜಿಲ್ಲಸ್‌ಗಳ ವಿಶ್ಲೇಷಣಾ ವರದಿ ತಯಾರಿಸುವುದು.
- ಸಾವಯವ ಗೊಬ್ಬರಗಳ ಗುಣಮಟ್ಟ ವಿಶ್ಲೇಷಣೆಗೆ ಈಗಾಗಲೇ ಸಮಿತಿ ಶಿಪಾರಸ್ಸು ಮಾಡಿರುವ ಗುಣಮಟ್ಟ ಪರಿಮಾಣಗಳಾದ ಪಿ.ಹೆಚ್. ವಿದ್ಯುನ್ವಾಹಕ ಅಂಶ, ತೇವಾಂಶ, ಸಾರಜನಕ, ರಂಜಕ, ಪೊಟ್ಯಾಶ್ ಹಾಗೂ ಸೂಕ್ಷ್ಮ ಪೋಷಕಾಂಶಗಳಾದ ಕಬ್ಬಿಣ, ತಾಮ್ರ, ಮ್ಯಾಂಗನೀಸ್, ಸತುಗಳನ್ನು ಪರೀಕ್ಷಿಸಿ ವಿಶ್ಲೇಷಣಾ ವರದಿಯನ್ನು ಕೊಡುವುದು.
- ವಿಶ್ಲೇಷಣೆ ಮತ್ತು ಜೈವಿಕ ಗೊಬ್ಬರ ಹಾಗೂ ಜೈವಿಕ ನಿಯಂತ್ರಕಗಳನ್ನು ತಯಾರಿಸುವ ಕಾರ್ಯಗಳನ್ನು ಹಾಗೂ ಸಸ್ಯ ನೈರ್ಮಲೀಕರಣ ಮಾದರಿಗಳ ವಿಶ್ಲೇಷಣೆ ಕಾರ್ಯಗಳನ್ನು ಗುತ್ತಿಗೆ ಆಧಾರದ ಮೇಲೆ ಇಲಾಖೆಯು ನಿಗದಿಪಡಿಸಿರುವ ದರದಲ್ಲಿ ಕೆಲಸಗಳನ್ನು ಕೈಗೊಳ್ಳುವುದು.
- ಜೈವಿಕ ಗೊಬ್ಬರ, ಜೈವಿಕ ರೋಗ ನಿಯಂತ್ರಕಗಳ ಉತ್ಪಾದನೆ ಹಾಗೂ ಗುಣಮಟ್ಟ ವಿಶ್ಲೇಷಣೆಗೆ ಬೇಕಾಗುವ ಪರಿಕರಗಳು ಹಾಗೂ ಉಪಕರಣಗಳು ಹಾಗೂ ಉಪಕರಣಗಳ ವಾರ್ಷಿಕ ನಿರ್ವಹಣೆಯನ್ನು ಕೈಗೊಳ್ಳಲು ಟೆಂಡರ್ ಕರೆದು ಖರೀದಿ ನಿಯಮಗಳನ್ನು ಪಾಲಿಸಿ ಪ್ರಯೋಗಶಾಲೆಗೆ ಅಗತ್ಯವಿರುವ ಪರಿಕರಗಳು ಹಾಗೂ ಉಪಕರಣಗಳನ್ನು ಖರೀದಿಸಬೇಕು.
- ವಿವಿಧ ವಿಶ್ಲೇಷಣೆಗೆ ಅಗತ್ಯವಿರುವ ರಾಸಾಯನಿಕಗಳು, ಪರಿಕರಗಳು, ಸಾಲ್ವೆಂಟ್ಸ್, ಗ್ಯಾಸ್, ಇತ್ಯಾದಿಗಳನ್ನು ನಿಯಮಾನುಸಾರ ಖರೀದಿಸುವುದು. ಆಹಾರ ವಿಶ್ಲೇಷಣೆ ಪ್ರಯೋಗಶಾಲೆಯಲ್ಲಿ ತರಕಾರಿ, ಹಣ್ಣು ಮತ್ತು ಸಾಂಬಾರು ಬೆಳೆಗಳಲ್ಲಿ ಕೀಟ ನಾಶಕಗಳ ಉಳಿಕೆ ವಿಶ್ಲೇಷಣೆಯನ್ನು ಮಾಡಲಾಗುವುದು.

**3.** ಅಣಬೆ ಪ್ರಯೋಗಶಾಲೆ

ಅಣಬೆ ಅಧಿಕ ಪ್ರೋಟೀನ್ ಹಾಗೂ ಜೀವಸತ್ವಗಳು ಹೇರಳವಾಗಿರುವ ಮತ್ತು ಕಡಿಮೆ ಶರ್ಕರಪಿಷ್ಠ ಹೊಂದಿರುವ ಆಹಾರವಾಗಿರುವುದರಿಂದ ಇತ್ತೀಚಿನ ದಿನಗಳಲ್ಲಿ ಅಣಬೆ ಕೃಷಿಯು ಒಂದು ಮುಖ್ಯ ಉದಿಮೆಯಾಗಿ ಬೆಳೆಯುತ್ತಿದೆ. ರಾಜ್ಯದಲ್ಲಿ ಅಣಬೆ ಕೃಷಿಯನ್ನು ಪ್ರೋತ್ಸಾಹಿಸುವ ಸಲುವಾಗಿ, ಇಲಾಖೆಯಲ್ಲಿರುವ ಅಣಬೆ ಪ್ರಯೋಗಶಾಲೆಗಳಲ್ಲಿ ಅಣಬೆ ಸ್ಪಾನ್ ಉತ್ಪಾದಿಸಿ ವಿತರಿಸುವ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಇದಲ್ಲದೇ ಅಣಬೆ ಕೃಷಿ ಮತ್ತು ಅದರ ಉಪಯುಕ್ತತೆ ಕುರಿತಂತೆ ಗ್ರಾಮೀಣ ಜನರು, ರೈತರು ಹಾಗೂ ರೈತ ಮಹಿಳೆಯರು ಹಾಗೂ ನಗರವಾಸಿಗಳಿಗೆ ಅರಿವು ಮೂಡಿಸುವ ಉದ್ದೇಶದಿಂದ, ಅಣಬೆ ತರಬೇತಿ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲಾಗಿದೆ.

- ಅಣಬೆ ಸ್ಪಾನ್ ಉತ್ಪಾದನೆಗೆ ಅಗತ್ಯವಿರುವ ಖಚ್ಚಾ ಸಾಮಗ್ರಿಗಳನ್ನು ದರಪಟ್ಟಿ/ಟೆಂಡರ್ ಕರೆದು ನಿಯಮಾನುಸಾರ ಖರೀದಿಸುವುದು ಹಾಗೂ ಕೂಲಿ ಖರ್ಚನ್ನು ನಿಯಮಾನುಸಾರ ಭರಿಸುವುದು.
- ಪ್ರಯೋಗಶಾಲೆಯಲ್ಲಿರುವ ಯಂತ್ರೋಪಕರಣಗಳ ವಾರ್ಷಿಕ ನಿರ್ವಹಣೆ ಹಾಗೂ ಇತರೆ ದುರಸ್ತಿ ಕೆಲಸಗಳನ್ನು ದರಪಟ್ಟಿ/ಟೆಂಡರ್ ಕರೆದು ನಿಯಮಾನುಸಾರ ಕೈಗೊಳ್ಳುವುದು, ಗುತ್ತಿಗೆ ಆಧಾರದ ಮೇಲೆ ವಾಹನ ಪಡೆಯುವುದು.
- ಉತ್ಪಾದಿಸಿದ ಅಣಬೆ ಸ್ಪಾನ್ ಬಾಟಲ್‌ಗಳನ್ನು ಇಲಾಖೆ ಅನುಮೋದಿತ ದರದಂತೆ ಮಾರಾಟ ಮಾಡುವುದು.
- ಪ್ರಯೋಗಶಾಲೆಯಲ್ಲಿ ರೈತರಿಗೆ/ಸಾರ್ವಜನಿಕರಿ/ವಿದ್ಯಾರ್ಥಿಗಳಿಗೆ ಅಣಬೆ ಪ್ರಾತ್ಯಕ್ಷತೆಯನ್ನು ಕೈಗೊಳ್ಳಲಾಗುವುದು.

ಅಣಬೆ ಬೆಳೆ ಉತ್ಪಾದನಾ ಕ್ರಮ

ಅಣಬೆಯನ್ನು ವ್ಯವಸಾಯ ಮೂಲದಿಂದ ದೊರೆಯುವ ತ್ಯಾಜ್ಯ ವಸ್ತುಗಳಾದ ಹುಲ್ಲು (ಭತ್ತ, ರಾಗಿ, ಗೋಧಿ, ಜೋಳ) ಕಸಕಡ್ಡಿ, ಕಬ್ಬಿನ ತರಗು, ಅಡಿಕೆ ಸಿಪ್ಪೆ ಇತ್ಯಾದಿಗಳನ್ನು ಪಾಲಿಥೀನ್ ಚೀಲದಲ್ಲಿ ಉಪಯೋಗಿಸಿ ಬೆಳೆಯಬಹುದಾಗಿದೆ. ಈ ವಸ್ತುಗಳು ಕೊಳೆತಿರದೆ ತಾಜಾ ವಸ್ತುಗಳಾಗಿರಬೇಕು ಹಾಗೂ ಒಣಗಿರಬೇಕು. ಈ ವಸ್ತುಗಳು ಪಕ್ವವಾಗುವ ಮೊದಲೇ ಉಪಯೋಗಿಸುವುದರಿಂದ ಬೆಳೆಯು ಹಾಳಾಗುವ ಸಂಭವವಿರುತ್ತದೆ. ವಿವಿಧ ತಳಿಗಳಾದ ಚಿಪ್ಪು ಅಣಬೆ, ನೀಲಿ ಅಣಬೆ (ಹೆಚ್.ಯು), ಪಿಂಕ್ ಅಣಬೆ (ಅರ್ಕ ಒಎಂ-1) ಮತ್ತು ಮಿಲ್ಕಿ ಅಣಬೆ ಬೆಳೆಗಳನ್ನು ಉತ್ಪಾದನಾ ಕ್ರಮಗಳನ್ನು ಅನುಸರಿಸಿ ಬೆಳೆಯಲಾಗುವುದು.

ಅಣಬೆ ಬ್ಯಾಗ್ ಉತ್ಪಾದನೆ **(Fruiting bag)**

ಅಣಬೆ ಪ್ರಯೋಗಶಾಲೆಯಲ್ಲಿ ಅಣಬೆ ಬೆಳೆ ಬಗ್ಗೆ ಪ್ರಚಾರ ಹಾಗೂ ಪೌಷ್ಠಿಕಾಂಶದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಅಣಬೆ ಬ್ಯಾಗ್ ಉತ್ಪಾದನೆ ಮಾಡಿ ಸಾರ್ವಜನಿಕರಿಗೆ ಮಾರಾಟ ಮಾಡಲಾಗುವುದು.

**5.** ತರಕಾರಿ ಬೀಜಗಳ ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ

ತರಕಾರಿ ಉತ್ಪಾದನೆಯಲ್ಲಿ ಉಪಯೋಗಿಸುವ ಬೀಜದ ಗುಣಮಟ್ಟ ಬಹಳ ಮುಖ್ಯವಾಗಿದ್ದು, ಖಾಸಗಿ ಮಾರಾಟಗಾರರಿಂದ ಸರಬರಾಜು ಆಗುವುದನ್ನು ನಿಯಂತ್ರಿಸುವುದಕ್ಕಾಗಿ ತರಕಾರಿ ಬೀಜಗಳ ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆಯ ಕಾರ್ಯಕ್ರಮ ಹಮ್ಮಿಕೊಳ್ಳುವುದು. ವಿವಿಧ ಜಿಲ್ಲೆಗಳಿಂದ ತರಕಾರಿ ಬೀಜವನ್ನು ನಿಯಮಾನುಸಾರ ಅಧಿಕಾರಿಗಳಿಂದ ಸಂಗ್ರಹಿಸಿ ಇಲಾಖೆಯ ಬೀಜ ಪರೀಕ್ಷೆ ಪ್ರಯೋಗಶಾಲೆಯಲ್ಲಿ ವಿಶ್ಲೇಷಿಸಲಾಗುವುದು.

**6.** ಏರೋಪೋನಿಕ್ಸ್ ಪ್ರಯೋಗಶಾಲೆ

ಕರ್ನಾಟಕ ರಾಜ್ಯದಲ್ಲಿ ಆಲೂಗಡ್ಡೆ ಒಂದು ವಾಣಿಜ್ಯ ಬೆಳೆಯಾಗಿದ್ದು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟಾರೆ 2500 ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯನ್ನು ಬೆಳೆಯಲಾಗುತ್ತಿದೆ. ಆಲೂಗಡ್ಡೆ ಬೆಳೆಯಲ್ಲಿ ರೈತರು ಎದುರಿಸುತ್ತಿರುವ ಮುಖ್ಯವಾದ ಸಮಸ್ಯೆಗಳಲ್ಲಿ ಅಂಗಮಾರಿ ರೋಗ ಹಾಗೂ ಉತ್ಪಾದನಾ ವೆಚ್ಚದಲ್ಲಿ ಶೇ.50 ರಷ್ಟು ವೆಚ್ಚವನ್ನು ಬೀಜಕ್ಕಾಗಿ ವ್ಯಯಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ತೋಟಗಾರಿಕೆ ಇಲಾಖೆಯಿಂದ ಏರೋಪೋನಿಕ್ಸ್ ತಾಂತ್ರಿಕತೆ ಮುಖಾಂತರ ಆಲೂಗಡ್ಡೆ ಬೀಜೋತ್ಪಾದಕತೆಯನ್ನು ಕೈಗೊಳ್ಳಲು ಹಾಗೂ ರೋಗ ರಹಿತ ಬಿತ್ತನೆ ಆಲೂಗಡ್ಡೆಯನ್ನು ರೈತರಿಗೆ ಒದಗಿಸಲು ಚಿಕ್ಕಬಳ್ಳಾಪುರ ಜಿಲ್ಲೆಯ ಪಿ.ಆರ್.ಎಸ್. ತೋಟಗಾರಿಕೆ ಕ್ಷೇತ್ರದಲ್ಲಿ ಏರೋಪೋನಿಕ್ಸ್ ಕೇಂದ್ರವನ್ನು ನಿರ್ಮಾಣ ಮಾಡಲಾಗಿದೆ. ಸದರಿ ಕೇಂದ್ರದಲ್ಲಿ ಆಲೂಗಡ್ಡೆ ತಳಿಗಳನ್ನು ಏರೋಪೋನಿಕ್ಸ್ ಮೂಲಕ ಬೆಳೆಸಿ ಪ್ರಾಯೋಗಿಕವಾಗಿ ಬೀಜೋತ್ಪಾದನೆ ಮಾಡಲು ಕ್ರಮವಹಿಸಲಾಗುವುದು.

ಸಿಬ್ಬಂದಿ ಹುದ್ದೆಗಳ ನಾಮಕರಣ ಮತ್ತು ಹುದ್ದೆ ಇರುವ ಸ್ಥಳಗಳ ವಿವರ ಒದಗಿಸುವುದು**. 2019-20** ನೇ ಸಾಲಿನಲ್ಲಿ ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ ಯೋಜನೆಗೆ ಲೆಕ್ಕ ಶೀರ್ಷಿಕೆ**: 2401-00-119-5-01** ಅಡಿ ಒಟ್ಟು ರೂ**.705.00** ಲಕ್ಷಗಳ ಅನುದಾನವನ್ನು ಒದಗಿಸಿದೆ.

# 11. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ
## Scheme for Integrated Control of Pests & Diseases of Horticultural Crops
## ಲೆಕ್ಕ ಶೀರ್ಷಿಕೆ:2401-00-119-5-02
## ನಿಗದಿಪಡಿಸಿರುವ ಅನುದಾನ: ರೂ.1215.00 ಲಕ್ಷಗಳು

| | | |
|---|---|---|
| 003 | ವೇತನ ಸಿಬ್ಬಂದಿ | 9.00 |
| 011 | ತುಟ್ಟಿ ಭತ್ಯೆ | 1.00 |
| 014 | ಇತರೆ ಭತ್ಯೆ | 1.00 |
| 020 | ವೈದ್ಯಕೀಯ ಭತ್ಯೆ | 1.00 |
| 021 | ವೈದ್ಯಕೀಯ ವೆಚ್ಚದ ಮರುಪಾವತಿ | 3.00 |
| 041 | ಪ್ರಯಾಣ ವೆಚ್ಚಗಳು | 2.00 |
| 200 | ನಿರ್ವಹಣಾ ವೆಚ್ಚ | 958.00 |
| 422 | ಪರಿಶಿಷ್ಟ ಜಾತಿ ಉಪ ಯೋಜನೆ | 168.00 |
| 423 | ಗಿರಿಜನ ಉಪ ಯೋಜನೆ | 72.00 |
| | ಒಟ್ಟು | **1215.00** |

**ಪೀಠಿಕೆ:**

ತೋಟಗಾರಿಕೆ ಬೆಳೆಗಳ ಬೇಸಾಯದಲ್ಲಿ ಆಧುನೀಕರಣವಾದಂತೆ ಹೊಸ ಕೀಟ ಮತ್ತು ರೋಗಗಳ ಬಾಧೆಯು ರಾಜ್ಯದಲ್ಲಿ ಕಂಡು ಬರುತ್ತಿದ್ದು, ತೋಟಗಾರಿಕೆ ಉತ್ಪನ್ನದ ಮೇಲೆ ಪರಿಣಾಮವನ್ನು ಬೀರಿ ಇಳುವರಿಯು ಕುಂಠಿತವಾಗುತ್ತಿದೆ. ಈ ನಿಟ್ಟಿನಲ್ಲಿ ತೋಟಗಾರಿಕೆ ಬೆಳೆಗಳನ್ನು ಕೀಟ ಮತ್ತು ರೋಗಗಳಿಂದ ರಕ್ಷಿಸಿ, ಅಧಿಕ ಇಳುವರಿ ಪಡೆದು ನಿಯಂತ್ರಿಸಲು ತೋಟಗಾರಿಕೆ ಇಲಾಖಾ ವತಿಯಿಂದ ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. 2019-20 ನೇ ಸಾಲಿಗೆ ರೂ.1215.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

## ಯೋಜನೆಯ ಉದ್ದೇಶಗಳು:

1. ಇಲಾಖೆಯ ಪರೋಪಜೀವಿ ಉತ್ಪಾದನಾ ಪ್ರಯೋಗಶಾಲೆಗಳಲ್ಲಿ ತೆಂಗಿನ ಕಪ್ಪುತಲೆ ಹುಳುವಿನ ನಿಯಂತ್ರಣಕ್ಕಾಗಿ ಪರೋಪಜೀವಿಗಳ ಉತ್ಪಾದನೆ ಮಾಡಿ, ಈ ಕೀಟ ಬಾಧಿತ ತೋಟಗಳ ರೈತರಿಗೆ ಉಚಿತವಾಗಿ ವಿತರಣೆ ಮಾಡುವುದು.
2. ರೋಗ ಮತ್ತು ಕೀಟಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಿ ಸಸ್ಯ ಸಂರಕ್ಷಣೆ ಕ್ರಮಗಳನ್ನುಕೈಗೊಂಡ ರೈತರಿಗೆ ಸಹಾಯಧನವನ್ನು ನೀಡುವುದು.
3. ತೋಟಗಾರಿಕೆ ಬೆಳೆಗಳ ಮಣ್ಣಿನ ಫಲವತ್ತತೆಯನ್ನು ಸರಿಯಾದ ರೀತಿಯಲ್ಲಿ ಹೆಚ್ಚಿಸಲು ಪೋಷಕಾಂಶ ನಿರ್ವಹಣೆಗಾಗಿ ರೈತರಿಗೆ ಸಹಾಯಧನವನ್ನು ನೀಡುವುದು.

## 2019-20 ನೇ ಸಾಲಿನ ಕಾರ್ಯಕ್ರಮಗಳು:

**1. ಪರೋಪಜೀವಿ /ಪರಭಕ್ಷಕ ಕೀಟಗಳ ಉತ್ಪಾದನೆ:**

ಇಲಾಖೆಯ ಮುಖಾಂತರ ತೆಂಗಿನ ಕಪ್ಪುತಲೆ ಹುಳುವಿನ ನಿಯಂತ್ರಣಕ್ಕಾಗಿ ಪರೋಪಜೀವಿ ಕೀಟಗಳನ್ನು ಇಲಾಖಾ ಪ್ರಯೋಗಶಾಲೆಗಳಲ್ಲಿ ವೃದ್ಧಿಸಲಾಗುತ್ತದೆ ಹಾಗೂ ಈ ಪರೋಪಜೀವಿ/ಪರಭಕ್ಷಕ ಕೀಟಗಳನ್ನು ಕಪ್ಪುತಲೆ ಹುಳು ಬಾಧಿತ ತೆಂಗಿನ ತೋಟಗಳಲ್ಲಿ ಬಿಡುಗಡೆ ಮಾಡಲು ರೈತರಿಗೆ ಉಚಿತವಾಗಿ ನೀಡಲಾಗುವುದು. ಇದೊಂದು ಮುಂದುವರೆದ ಯೋಜನೆಯಾಗಿರುತ್ತದೆ. ಕಪ್ಪುತಲೆ ಹುಳುವಿನ ನಿಯಂತ್ರಣಕ್ಕಾಗಿ ಗೋನಿಯೋಜಸ್ ಪರೋಪಜೀವಿಯನ್ನು ಒಂದಕ್ಕೆ ರೂ.0.413 ಪೈಸೆ (0.35 ಪೈಸೆ + GST 0.063 ಪೈಸೆ) ಮತ್ತು ಬ್ರಾಕಿಮೇರಿಯಾ ಉತ್ಪಾದನೆಗಾಗಿ ರೂ.0.59 (0.50 ಪೈಸೆ + GST 0.09 ಪೈಸೆ) ಪೈಸೆಯಂತೆ ಉತ್ಪಾದನಾ ವೆಚ್ಚವನ್ನು ನಿಗದಿಪಡಿಸಲಾಗಿರುತ್ತದೆ. ಒಟ್ಟಾರೆ ಈ ಘಟಕಕ್ಕೆ ರೂ.130.59 ಲಕ್ಷಗಳ ಅನುದಾನ ಒದಗಿಸಲಾಗುವುದು.

## 2. ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟ ಬಾಧೆಯ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಗಾಗಿ ರೈತರಿಗೆ ಸಹಾಯಧನ:

ಸಸ್ಯ ಸಂರಕ್ಷಣೆ ಔಷಧಿಗಳನ್ನು ಕಳೆದ ಎರಡು ದಶಕಗಳಲ್ಲಿ ಅತೀ ಕಡಿಮೆಯಾಗಿ ಬಳಸಲು ಚಿಂತನೆಯನ್ನು ನಡೆಸಲಾಗಿದೆ. ಈ ನಿಟ್ಟಿನಲ್ಲಿ ಸಮಗ್ರ ಕೀಟ ನಿರ್ವಹಣೆ ಪದ್ಧತಿಗೆ ಒತ್ತು ನೀಡಲಾಗುತ್ತಿದೆ. ಸಮಗ್ರ ಕೀಟ ನಿರ್ವಹಣೆ ಪದ್ಧತಿಯು ಅನೇಕ ನಿರ್ವಹಣಾ ಪದ್ಧತಿಯನ್ನು ಒಳಗೊಂಡಿದ್ದು, ಜೀವ ಪರಿಸರವನ್ನು ಸಂರಕ್ಷಿಸಿ, ಪರಿಸರ ಮಾಲಿನ್ಯವನ್ನು ತಡೆಗಟ್ಟುವ ಮುಖ್ಯ ಧ್ಯೇಯವನ್ನು ಹಮ್ಮಿಕೊಂಡಿರುತ್ತದೆ. ಸಮಗ್ರ ಕೀಟ ನಿರ್ವಹಣೆ ಪದ್ಧತಿಯನ್ನು ಉತ್ತೇಜಿಸುವ ಸಲುವಾಗಿ ಜೈವಿಕ ಕೀಟ ನಾಶಕ, ಸಮ್ಮೋಹಕ ಬಲೆಗಳು, ರಾಸಾಯನಿಕ ಹಾಗೂ ಸಸ್ಯಾಧಾರಿತ ಕೀಟ ನಾಶಕಗಳನ್ನು ಖರೀದಿಸಿದ ರೈತರಿಗೆ ಸಹಾಯಧನವನ್ನು ನೀಡಲಾಗುತ್ತಿದೆ.

ಪ್ರಾದೇಶಿಕ ಬೇಡಿಕೆಯ ಮೇರೆಗೆ ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟ ಬಾಧೆಯ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಗಾಗಿ ರೈತರಿಗೆ ಸಹಾಯಧನವನ್ನು ನೀಡಲು ಒಟ್ಟು ರೂ.755.15 ಲಕ್ಷಗಳ ಅನುದಾನವನ್ನು ಕಲ್ಪಿಸಲಾಗುವುದು. ಪ್ರತಿ ಘಟಕಕ್ಕೆ ಒಟ್ಟಾರೆ ದರದ ಶೇ.75 ರಂತೆ ಇತರೆ ವರ್ಗದ ರೈತ ಫಲಾನುಭವಿಗಳಿಗೆ ಪ್ರತಿ ಹೆಕ್ಟೇರ್ ಗೆ ರೂ.7,500/-ದಂತೆ ಸಹಾಯಧನ ನೀಡಲಾಗುವುದು. ಗರಿಷ್ಠ 2 ಹೆಕ್ಟೇರ್ ವರೆಗೆ ಪ್ರತಿ ಫಲಾನುಭವಿಗೆ ಸಹಾಯಧನ ನೀಡಲಾಗುವುದು.

## 3. "Appraisal and validation of novel and ecofriendly plant protection measures on prioritized horticulture crops" ಎಂಬ ಸಂಶೋಧನೆ ಹಮ್ಮಿಕೊಳ್ಳಲು ಕೃಷಿವಿಶ್ವವಿದ್ಯಾಲಯ, ಬೆಂಗಳೂರಿಗೆ ಅನುದಾನ.

Appraisal and validation of novel and ecofriendly plant protection measures on prioritized horticulture crops" ಎಂಬ ಸಂಶೋಧನೆಯನ್ನು ಎರಡು ವರ್ಷಗಳ ಕಾಲ ಹಮ್ಮಿಕೊಳ್ಳಲು ಡಾ|| ಕೆ. ಮುರುಳಿ ಮೋಹನ್, ಸಹ ಪ್ರಾಧ್ಯಾಪಕರು, ಕೃಷಿ ಕೀಟಶಾಸ್ತ್ರ ವಿಭಾಗ, ಜಿ.ಕೆ.ವಿ.ಕೆ., ಬೆಂಗಳೂರು ರವರು ರೂ.89.96 ಲಕ್ಷ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಹಿನ್ನಲೆಯಲ್ಲಿ 2019-20 ನೇ ಸಾಲಿಗೆ ಮೊದಲನೇ ವರ್ಷಕ್ಕೆ ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ., ಬೆಂಗಳೂರಿಗೆ ರೂ.45.26 ಲಕ್ಷಗಳ ಅನುದಾನ ಒದಗಿಸಲಾಗುವುದು.

## 4. ಪ್ರಯೋಗ ಶಾಲೆಗಳ ಮೂಲಭೂತ ಸೌಕರ್ಯ ಅಭಿವೃದ್ಧಿ:

a. ಗುಣಮಟ್ಟದ ಪರೋಪಜೀವಿ/ಪರಭಕ್ಷಕಗಳ ಉತ್ಪಾದನೆಗಾಗಿ ಅವಶ್ಯವಿರುವ ಉಪಕರಣಗಳ ಖರೀದಿ, ಪ್ರಯೋಗಶಾಲೆಗಳ ನಿರ್ವಹಣೆಗಾಗಿ ರೂ.20.00 ಲಕ್ಷ ಅನುದಾನ ಒದಗಿಸಲಾಗುವುದು.
b. ರಾಜ್ಯಾದ್ಯಂತ ಪರೋಪಜೀವಿ ಉತ್ಪಾದನಾ ಪ್ರಯೋಗಶಾಲೆಗಳ ಭೇಟಿಗಾಗಿ ಹಾಗೂ ಕೀಟ ಮತ್ತು ರೋಗಬಾಧಿತ ಪ್ರದೇಶಗಳಿಗೆ ಭೇಟಿ ಮಾಡಲು ತೋಟಗಾರಿಕೆ ಉಪ ನಿರ್ದೇಶಕರು (ಸ.ಸಂ), ಲಾಲ್ ಬಾಗ್ ರವರಿಗೆ ಬಾಡಿಗೆ ವಾಹನ ವೆಚ್ಚ, ಇಂಧನ ವೆಚ್ಚ ಹಾಗೂ ನಿರ್ವಹಣೆಗಾಗಿ ರೂ.2.0 ಲಕ್ಷ ಅನುದಾನ ಕಲ್ಪಿಸಲಾಗುವುದು.
c. ತೋಟಗಾರಿಕೆ ಉಪ ನಿರ್ದೇಶಕರು(ಸ.ಸಂ) ರವರ ಕಛೇರಿಗೆ ಸಂಬಂಧಿಸಿದ ವಿಷಯಗಳಿಗೆ, ಪ್ರಯೋಗಶಾಲೆಗಳ ಪರಿಶೀಲನಾ ವರದಿ, ಯೋಜನೆಗಳ ಪ್ರಗತಿ ವರದಿ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಬೆರಳಚ್ಚು ಮಾಡಲು ಬೆರಳಚ್ಚುಗಾರರಿಗೆ ತಿಂಗಳ ವೇತನ, ಯೋಜನೆ ಪ್ರಚಾರ, ರೈತರಿಗೆ ಉಪಯುಕ್ತ ಮಾಹಿತಿ ನೀಡಲು ಕರಪತ್ರಗಳ ಮುದ್ರಣ ಹಾಗೂ ಇತರೆ ಕಛೇರಿ ವೆಚ್ಚಕ್ಕಾಗಿ ರೂ.5.00 ಲಕ್ಷಗಳ ಅನುದಾನ ಕಲ್ಪಿಸಲಾಗುವುದು.

**5. <u>ಸಿಬ್ಬಂದಿ ವೇತನ ಮತ್ತು ಇತರೆ</u>:**

ಸದರಿ ಯೋಜನೆಯಡಿ 15 ಮಂಜೂರಾದ ಹುದ್ದೆಗಳಿದ್ದು, ಸದರಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ**.**

| ಕ್ರಮ ಸಂಖ್ಯೆ | **ಹುದ್ದೆಯ ವಿವರ ಹಾಗೂ ಕೇಂದ್ರಸ್ಥಾನ** | **ಹುದ್ದೆಗಳ ಸಂಖ್ಯೆ** |
|---|---|---|
| 1 | **ತೋಟಗಾರಿಕೆ ಸಹಾಯಕರು**<br>ಹಿ.ಸ.ತೋ.ನಿ (ರಾವ), ಚಿತ್ರದುರ್ಗ<br>ಹಿ.ಸ.ತೋ.ನಿ (ರಾವ), ತುಮಕೂರು<br>ಹಿ.ಸ.ತೋ.ನಿ (ರಾವ), ರಾಮನಗರ<br>ಹಿ.ಸ.ತೋ.ನಿ (ರಾವ), ದಕ್ಷಿಣ ಕನ್ನಡ | 4 **ಹುದ್ದೆಗಳು**<br>1<br>1<br>1<br>1 **ಖಾಲಿ ಹುದ್ದೆ** |
| 2 | **ಲ್ಯಾಬ್ ಅಟೆಂಡರ್**<br>ಹಿ.ಸ.ತೋ.ನಿ (ರಾವ), ಚಿತ್ರದುರ್ಗ<br>ಹಿ.ಸ.ತೋ.ನಿ (ರಾವ), ತುಮಕೂರು<br>ಹಿ.ಸ.ತೋ.ನಿ (ರಾವ), ರಾಮನಗರ<br>ಹಿ.ಸ.ತೋ.ನಿ (ರಾವ), ದಕ್ಷಿಣ ಕನ್ನಡ | 4 **ಹುದ್ದೆಗಳು**<br>1 ಖಾಲಿ ಹುದ್ದೆ<br>1 ಖಾಲಿ ಹುದ್ದೆ<br>1 ಖಾಲಿ ಹುದ್ದೆ<br>1 ಖಾಲಿ ಹುದ್ದೆ |
| 3 | **ತೋಟಗಾರರು**<br>ಹಿ.ಸ.ತೋ.ನಿ (ರಾವ), ಚಿತ್ರದುರ್ಗ<br>ಹಿ.ಸ.ತೋ.ನಿ (ರಾವ), ತುಮಕೂರು<br>ಹಿ.ಸ.ತೋ.ನಿ (ರಾವ), ರಾಮನಗರ<br>ಹಿ.ಸ.ತೋ.ನಿ (ರಾವ), ದಕ್ಷಿಣ ಕನ್ನಡ | 4 **ಹುದ್ದೆಗಳು**<br>1 ಖಾಲಿ ಹುದ್ದೆ<br>1 ಖಾಲಿ ಹುದ್ದೆ<br>1 ಖಾಲಿ ಹುದ್ದೆ<br>1 ಖಾಲಿ ಹುದ್ದೆ |

| | | |
|---|---|---|
| 4 | **ಚಾಲಕರು**<br>ತೋ.ಉ.ನಿ (ಸ.ಸಂ), ಬೆಂಗಳೂರು | 3 **ಹುದ್ದೆಗಳು**<br>3 ಖಾಲಿ ಹುದ್ದೆ |

ಮೇಲೆ ತಿಳಿಸಿರುವಂತೆ ಭರ್ತಿಯಾಗಿರುವ ಒಟ್ಟು ಹುದ್ದೆಗಳ ಸಿಬ್ಬಂದಿಗಳ ವೇತನ (ರೂ.15.00 ಲಕ್ಷಗಳು), ತುಟ್ಟಿ ಭತ್ಯೆ (ರೂ.2.00 ಲಕ್ಷ), ಪ್ರವಾಸ ಭತ್ಯೆ (ರೂ.2.00 ಲಕ್ಷ), ವೈದ್ಯಕೀಯ ಭತ್ಯೆ (ರೂ.0.500 ಲಕ್ಷ), ಇತರೆ ಭತ್ಯೆ (ರೂ.2.00 ಲಕ್ಷ) ಹಾಗೂ ವೈದ್ಯಕೀಯ ವೆಚ್ಚದ ಮರು ಪಾವತಿ (ರೂ.0.500 ಲಕ್ಷ)ಗಾಗಿ ಅನುದಾನ ಒದಗಿಸಲಾಗುವುದು.

## 6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ತೋಟಗಾರಿಕೆ ಬೆಳೆಗಳ ಸಮಗ್ರ ಪೋಷಕಾಂಶ ನಿರ್ವಹಣೆ ಹಾಗೂ ಸಮಗ್ರ ಕೀಟ/ಪೀಡೆ ನಿಯಂತ್ರಣಕ್ಕಾಗಿ ಸಹಾಯಧನ:

ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟ ಬಾಧೆಯ ನಿಯಂತ್ರಣಕ್ಕಾಗಿ ಹಾಗೂ ಸಮಗ್ರ ಪೋಷಕಾಂಶಗಳ ನಿರ್ವಹಣೆಗಾಗಿ ಸಸ್ಯ ಸಂರಕ್ಷಣೆ ಔಷಧಿಗಳ ಖರೀದಿ ಹಾಗೂ ಪೋಷಕಾಂಶಗಳ ಖರೀದಿಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕ್ರಮವಾಗಿ ರೂ.168.00 ಲಕ್ಷ ಮತ್ತು ರೂ.72.00 ಲಕ್ಷಗಳ ಅನುದಾನವನ್ನು ಕಲ್ಪಿಸಲಾಗುವುದು. ಪ್ರತಿ ಘಟಕಕ್ಕೆ ಒಟ್ಟಾರೆ ದರದ ಶೇ.90 ರಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತ ಫಲಾನುಭವಿಗಳಿಗೆ ಪ್ರತಿ ಹೆಕ್ಟೇರ್ ಗೆ ಗರಿಷ್ಠ ರೂ.9,000/-ರಂತೆ ಸಹಾಯಧನ ನೀಡಲಾಗುವುದು. ಗರಿಷ್ಠ 2 ಹೆಕ್ಟೇರ್ ವರೆಗೆ ಪ್ರತಿ ಫಲಾನುಭವಿಗೆ ಸಹಾಯಧನ ನೀಡಲಾಗುವುದು.

**ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ (ಲೆಕ್ಕ ಶೀರ್ಷಿಕೆ: 2401-00-119-5-02) ಯಡಿ ಘಟಕವಾರು ಅನುದಾನ ಹಂಚಿಕೆ:**

| ಕ್ರ. ಸಂ. | ಕಾರ್ಯಕ್ರಮ | ಭೌತಿಕ ಗುರಿ | ಆರ್ಥಿಕ ಗುರಿ (ರೂ.ಲಕ್ಷಗಳಲ್ಲಿ) |
|---|---|---|---|
| 1. | **ಪರೋಪಜೀವಿಗಳ ಉತ್ಪಾದನೆ**<br>ಅ) ಗೋನಿಯೋಜಸ್ ಒಂದಕ್ಕೆ 0.35 ಪೈಸೆ<br>ಆ) ಬ್ರಾಕಿಮೇರಿಯಾ ಒಂದಕ್ಕೆ 0.59 ಪೈಸೆ | 314.76 ಲಕ್ಷ ಸಂಖ್ಯೆ<br>1 ಲಕ್ಷ ಸಂಖ್ಯೆ | 130.00<br>0.59 |
| 2. | **ಸಸ್ಯ ಸಂರಕ್ಷಣೆ ಔಷಧಿಗಳ ಖರೀದಿಗಾಗಿ ಇತರೆ ವರ್ಗದ ರೈತರಿಗೆ ಸಹಾಯಧನ** (ಜೈವಿಕ ಕೀಟ ನಾಶಕ, ಸಮ್ಮೋಹಕ ಬಲೆಗಳು, ಸಸ್ಯಾಧಾರಿತ ಹಾಗೂ ರಾಸಾಯನಿಕ ಕೀಟನಾಶಕಗಳು)<br>(ಫಲಾನುಭವಿಗಳಿಗೆ ಶೇ.75 ರಷ್ಟು ರೂ.7,500/- ಪ್ರತಿ ಹೆಕ್ಟೇರ್ ಗೆ). | 10,068.66 ಹೆ. | 755.15 |
| 3. | “Appraisal and validation of novel and ecofriendly plant protection measures on prioritized horticulture crops” **ಎಂಬ ಸಂಶೋಧನೆ ಹಮ್ಮಿಕೊಳ್ಳಲು ಕೃಷಿವಿಶ್ವವಿದ್ಯಾಲಯ, ಬೆಂಗಳೂರಿಗೆ ಅನುದಾನ.** | | 45.26 |
| 4. | **ಪ್ರಯೋಗಶಾಲೆಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಹಾಗೂ** | -- | 27.00 |

| | | | |
|---|---|---|---|
| | **ನಿರ್ವಹಣೆ**<br>(ಬಾಡಿಗೆ ವಾಹನ ವೆಚ್ಚ, ಇಂಧನ ವೆಚ್ಚ, ಬೆರಳಚ್ಚುಗಾರರ ವೇತನ, ಆಡಳಿತಾತ್ಮಕ, ವೆಚ್ಚ, ನಿರ್ವಹಣೆ ಹಾಗೂ ಇತರೆ ವೆಚ್ಚ) | | |
| 5 | **ಸಿಬ್ಬಂದಿ ವೇತನ ಮತ್ತು ಇತರೆ** | | |
| 5(a) | ಸಿಬ್ಬಂದಿ ವೇತನ | 15 | 10.00 |
| 5 (b) | ತುಟ್ಟಿ ಭತ್ಯೆ | | 2.00 |
| 5 (c) | ಪ್ರವಾಸ ಭತ್ಯೆ | | 2.00 |
| 5 (d) | ವೈದ್ಯಕೀಯ ಭತ್ಯೆ | | 0.50 |
| 5 (e) | ಇತರೆ ಭತ್ಯೆ | | 2.00 |
| 5 (f) | ವೈದ್ಯಕೀಯ ವೆಚ್ಚದ ಮರು ಪಾವತಿ | | 0.50 |
| 6. | **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ತೋಟಗಾರಿಕೆ ಬೆಳೆಗಳ ಸಮಗ್ರ ಪೋಷಕಾಂಶ ನಿರ್ವಹಣೆ ಹಾಗೂ ಸಮಗ್ರ ಕೀಟ/ಪೀಡೆ ನಿಯಂತ್ರಣಕ್ಕಾಗಿ ಸಹಾಯಧನ:** | | |
| 6 (a) | ವಿಶೇಷ ಘಟಕ ಯೋಜನೆ (SCP) | 1866.66 ಹೆ. | 168.00 |
| 6 (b) | ಗಿರಿಜನ ಉಪಯೋಜನೆ (TSP) | 800 ಹೆ. | 72.00 |
| | **ಒಟ್ಟು** | | 1215.00 |

**2019-20** ನೇ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಗೆ ಲೆಕ್ಕಶೀರ್ಷಿಕೆ **2401-00-119-5-02** ಅಡಿ ಒಟ್ಟು ರೂ.**1215.00** ಲಕ್ಷಗಳ ಅನುದಾನವನ್ನು ಒದಗಿಸಿದೆ.

## 12. ತೋಟಗಾರಿಕೆ ಕಟ್ಟಡಗಳು
## Horticulture Buildings
## ಲೆಕ್ಕಶೀರ್ಷಿಕೆ:2401-00-119-6-03
## ನಿಗದಿಪಡಿಸಿರುವ ಅನುದಾನ: ರೂ.1000.00 ಲಕ್ಷಗಳು

| | | |
|---|---|---|
| 125 | ಆಧುನೀಕರಣ | **1000.00** |

**ಪೀಠಿಕೆ:**

ಈ ಯೋಜನೆಯನ್ನು ಮೊದಲಿಗೆ 1994-95 ನೇ ಸಾಲಿನಲ್ಲಿ ಮಂಜೂರು ಮಾಡಿ, ಇಲ್ಲಿಯವರೆಗೆ ಕಾಲಕಾಲಕ್ಕೆ ಮುಂದುವರೆಸಿಕೊಂಡು ಬರಲಾಗುತ್ತಿದೆ. ಈ ಯೋಜನೆಯಡಿ ಇಲಾಖಾ ತೋಟಗಾರಿಕೆ ಕ್ಷೇತ್ರಗಳಲ್ಲಿ ತಾಲ್ಲೂಕು/ಜಿಲ್ಲೆ ಮತ್ತು ನಿರ್ದೇಶನಾಲಯದ ಕಛೇರಿಗಳಲ್ಲಿ ದಿನನಿತ್ಯದ ಕೆಲಸಗಳನ್ನು ನಿರ್ವಹಿಸಲು ಕಟ್ಟಡ ಹಾಗೂ ಪ್ರಯೋಗಾಲಯಗಳ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

2004-05 ನೇ ಸಾಲಿನಲ್ಲಿ ಈ ಯೋಜನೆಯೊಂದಿಗೆ ತೋಟಗಾರಿಕೆ ಕಛೇರಿಗಳ ಆಧುನೀಕರಣ ಯೋಜನೆಯನ್ನು ವಿಲೀನಗೊಳಿಸಲಾಗಿದೆ. ಕಛೇರಿಗಳಲ್ಲಿ ಅಗತ್ಯವಾಗಿ ಬೇಕಾದ ಕಛೇರಿ ಉಪಕರಣಗಳು, ಎಲೆಕ್ಟ್ರಾನಿಕ್ ಯಂತ್ರೋಪಕರಣಗಳಾದ ಕಂಪ್ಯೂಟರ್, ಜೆರಾಕ್ಸ್, ಫ್ಯಾಕ್ಸ್ ಮುಂತಾದ ಉಪಕರಣಗಳನ್ನು ಅಳವಡಿಸುವುದು ಇತ್ಯಾದಿ.

ಉದ್ದೇಶಗಳು:

1. ಮೂಲಭೂತ ಸೌಕರ್ಯವಾದ ಕಛೇರಿ ಕಟ್ಟಡಗಳನ್ನು ಹಾಗೂ ಇತರೆ ಅವಶ್ಯಕವಾದ ಪ್ರಯೋಗಾಲಯಗಳ ಕಟ್ಟಡಗಳನ್ನು ನಿರ್ಮಿಸುವುದು ಹಾಗೂ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳುವುದು.
2. ತೋಟಗಾರಿಕೆ ಕಟ್ಟಡಗಳ/ಕಛೇರಿಗಳ ಆಧುನೀಕರಣ/ದುರಸ್ತಿ.

ಕಾರ್ಯಕ್ರಮಗಳು:

| ಕ್ರ. ಸಂ | ಕಾರ್ಯಕ್ರಮಗಳು | ಆರ್ಥಿಕ (ರೂ. ಲಕ್ಷಗಳಲ್ಲಿ) |
|---|---|---|
| 1. | ತೋಟಗಾರಿಕೆ ಕಟ್ಟಡಗಳ/ಕಛೇರಿಗಳ ಆಧುನೀಕರಣ/ದುರಸ್ತಿ.<br>ವಿವಿಧ ತಾಲ್ಲೂಕು/ಜಿಲ್ಲೆಗಳಲ್ಲಿ ಮತ್ತು ನಿರ್ದೇಶನಾಲಯದ ಕಛೇರಿಗಳಲ್ಲಿ ಮೂಲ ಸೌಕರ್ಯಗಳಾದ ಕಛೇರಿ ಕಟ್ಟಡಗಳನ್ನು, ಪ್ರಯೋಗಾಲಯದ ಕಟ್ಟಡಗಳನ್ನು ನಿರ್ಮಿಸುವುದು, ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳುವುದು ಹಾಗೂ ಕಛೇರಿ | 1000.00 |
| ಒಟ್ಟು | | **1000.00** |

**2019-20** ನೇ ಸಾಲಿನಲ್ಲಿ ತೋಟಗಾರಿಕೆ ಕಟ್ಟಡಗಳು ಯೋಜನೆಗೆ **ಲೆಕ್ಕಶೀರ್ಷಿಕೆ: 2401-00-119-6-03** ಅಡಿ ಒಟ್ಟು ರೂ.**1000.00** ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ದುರಸ್ತಿ ಕೆಲಸಗಳನ್ನೊಳಗೊಂಡಂತೆ ಹೊಸ ಕಛೇರಿ ಕಟ್ಟಡ ಹಾಗೂ ಇತರೆ ಅವಶ್ಯಕವಾದ

ಕಟ್ಟಡಗಳ ನಿರ್ಮಾಣ ಕಾರ್ಯಕ್ರಮಗಳನ್ನು ಎಂಪಿಕ್ ತಯಾರಿಕೆ ಹಂತದಲ್ಲಿ ಆಖೈರುಗೊಳಿಸುವ ನಿಬಂಧನೆಗೆ ಒಳಪಟ್ಟು ಈ ಯೋಜನೆಯನ್ನು **2019-20** ನೇ ಸಾಲಿನಲ್ಲಿ ಮುಂದುವರೆಸಿದೆ.

## 13. ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ -II (ಸುಜಲಾ-III)-ಇಎಪಿ
## Karnataka Watershed Development Programme-II (Sujala-III) EAP
## ಲೆಕ್ಕಶೀರ್ಷಿಕೆ: 2401-00-800-2-80
## ನಿಗದಿಪಡಿಸಿರುವ ಅನುದಾನ: ರೂ.233.00 ಲಕ್ಷಗಳು

| | | |
|---|---|---|
| 002 | ವೇತನ -ಅಧಿಕಾರಿಗಳು | 47.00 |
| 003 | ವೇತನ - ಸಿಬ್ಬಂದಿ | 7.00 |
| 011 | ತುಟ್ಟಿ ಭತ್ಯೆ | 10.00 |
| 014 | ಇತರೆ ಭತ್ಯೆ | 12.00 |
| 020 | ವೈದ್ಯಕೀಯ ಭತ್ಯೆ | 1.00 |
| 021 | ವೈದ್ಯಕೀಯ ವೆಚ್ಚದ ಮರುಪಾವತಿ | 5.00 |
| 041 | ಪ್ರಯಾಣ ವೆಚ್ಚಗಳು | 5.00 |
| 051 | ಸಾಮಾನ್ಯ ವೆಚ್ಚಗಳು | 1.00 |
| 052 | ದೂರವಾಣಿ ವೆಚ್ಚಗಳು | 1.00 |
| 059 | ಇತರೆ ವೆಚ್ಚಗಳು | 141.00 |
| 195 | ಸಾರಿಗೆ ವೆಚ್ಚಗಳು | 3.00 |
| | ಒಟ್ಟು | **233.00** |

**Background**

Horticultural crops provide immense scope for improving the productivity of marginal land, generate continuous employment and income to the farmers. Building on the successful experience of SUJALA-I, expansion of area under horticulture crops has been proposed in World Bank assisted KWDP-II SUJALA-III project by providing extension support to communities in rain fed areas in seven districts of the State viz., Bidar, Chamrajanagara, Davanagere, Gadag, Gulbarga, Koppal and Yadgiri from 2013-14 to December-2018 with World Bank and state government assistance on 70:30 sharing basis. From 2015-16 the project activities are also implemented in 4 CGIAR districts namely Chikkamangalur, Raichur, Tumkur and Vijayapura.

**The project objectives are:**

i) Demonstrating production technologies for perennial and annual crops, formation of FIGs and federated to FPO, conservation of soil and water both at farmers and Departmental farms.

ii) Facilitating the farmers to carry out soil, water and leaf analysis to

Identify nutrient deficiencies and to make amendments for maximizing productions through training.

iii) Supporting horticulture farmers to improve post-harvest handling and marketing of the produce by adopting latest technical know-how

iv) Building innovative knowledge by installing studies to assist the farmers in crop diversification and participatory value chain through Horticulture producers Co-operative Marketing and Processing Society (HOPCOMS), KHF etc., & PPP-IHD identified companies within & outside states.

**Implementation Strategy**

Horticulture sector intends to adopt holistic approach in implementation of the components in SUJALA-III and ensure the convergence of departmental activities with that of SUJALA-III with the vision of achieving the overall development of Horticulture sector in the State.

